ಹಿತ್ತಲ ಗಿಡ

ಚಾತುರ್ಮಾಸಿಕ
ಪೈರು 6, ಕೊಯಿಲು 3, ಸೆಪ್ಟೆಂಬರ್ - ಡಿಸೆಂಬರ್, 2000

ಹಿತ್ತಲಗಿಡ ರೈತ, ವಿಜ್ಞಾನಿ,
ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಅಣ್ಣಿಗೇರಿಯ ಅಣ್ಣ ಹಜಾರೆ ಅಬ್ದುಲ್ ಖಾದರ್ ನಡಕಟ್ಟನ್



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು
ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಸಂಪಾದಕೀಯ

ಅನಿಲ್ ಗುಪ್ತಾರ ನೇತೃತ್ವದಲ್ಲಿ ಹನೀಬೀ - ಹಿತ್ತಲಗಿಡ ಜಾಲ ಈಗ್ಗೆ ಒಂದು ದಶಕದಿಂದ ಒಂದು ಪರ್ಯಾಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಮಾದರಿಯ ಕನಸು ಕಾಣುತಿತ್ತು. ದೇಶೀಯ ಮೂಲದ ಅನುಶೋಧನೆ, ಪಾರಂಪರಿಕ ಜ್ಞಾನ ಮತ್ತು ತಾಂತ್ರಿಕತೆ, ಜೀವ ವಿವಿಧತೆ, ದೇಶೀಯ ಸಂಸ್ಥೆಗಳು ಇವೇ ಮೊದಲಾದ 'ತೃತೀಯ ಜಗತ್ತಿನ ಸಂಪತ್ತುಗಳ' ಮೇಲೆ ಈ ಪರ್ಯಾಯ ಅಭಿವೃದ್ಧಿ ಮಾದರಿ ಅವಲಂಬಿಸಿತ್ತು. ಈ ಮಾದರಿಯ ಸಾಂಸ್ಕೃತಿಕ, ಸಮಾನತೆ, ಪರಿಸರ, ನೈತಿಕತೆಗಳ ಗಟ್ಟಿ ಆಯಾಮಗಳ ಅರಿವು ನಮಗೆಲ್ಲಾ ಸ್ಪಷ್ಟವಾಗಿದ್ದರೂ ಸಾಮರ್ಥ್ಯತೆ (Efficiency) ಮಗ್ಗಲಿನ ಪರಿಚಯ ನಮಗಾಗಲು ಸ್ವಲ್ಪ ಕಾಯಬೇಕಾಯ್ತು. ಈಗ ನಿಧಾನವಾಗಿ ಅದು ನಮಗೆ ಗೋಚರವಾಗುತ್ತಿದೆ.

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನದ (NIF) ಚಟುವಟಿಕೆಗಳು ವಿಸ್ತೃತಗೊಳ್ಳುತ್ತಿರುವ ರೀತಿ, ತಳಮಟ್ಟದ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಗೆ ಬರುತ್ತಿರುವ ಪ್ರತಿಕ್ರಿಯೆ, ಗ್ಯಾನ್ (GIAN)ನ ಪ್ರಯೋಗದ ಆರಂಭದ ಯಶಸ್ಸು 'ಸೃಷ್ಟಿ' ಗೆ ದೊರೆತಿರುವ ಅಂತರ ರಾಷ್ಟ್ರೀಯ ಪುರಸ್ಕಾರ ಮತ್ತು 'ಹಿತ್ತಲಗಿಡ' ಸ್ಪರ್ಧೆಯಲ್ಲಿ ಮಲೆನಾಡಿನ ಮಂದಿ ಮತ್ತು ಮಕ್ಕಳು ತೋರುತ್ತಿರುವ ಆಸಕ್ತಿ, ಇವೆಲ್ಲಾ ಹನಿಬೀ - ಹಿತ್ತಲಗಿಡಗಳ ಪ್ರಯತ್ನಗಳು ಸಾರ್ಥಕಗೊಳ್ಳುತ್ತಿರುವ ಸಂಕೇತ ಎಂದು ನಾವು ಭಾವಿಸುತ್ತೇವೆ. ಇದು ನಮ್ಮ ಹುಟ್ಟು ಅನುಶೋಧಕರಾದ ನಡುಕಟ್ಟನ್‌ರಂತಹವರಿಂದ ಕಾರ್ಯರೂಪಕ್ಕಿಳಿಯುವ ಆಶ್ವಾಸನೆ ನಮಗಿದೆ.

ಪ್ರೊ.ಗುಪ್ತಾರ ಕಾರ್ಯಕ್ಷೇತ್ರ ಗುಜರಾತ್ ಭೂಕಂಪನದಿಂದ ತಲ್ಲಣಿಸುತ್ತಿದೆ. ಬೂಜ್ ಪ್ರಾಂತ್ಯದ ಹಲವು ಹತ್ತಾರು ದೇಶೀಯ ತಾಂತ್ರಿಕತೆಗಳು ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಲೇ ಇದೆ. ನೋವಿಗೊಳಗಾದ ಜನ ಸಮುದಾಯದ ಕಣ್ಣೀರೊರೆಸುವತ್ತ 'ಹಿತ್ತಲಗಿಡ' ಮೊದಲು ಕೈಚಾಚುವುದು.

ಹಿತ್ತಲ ಗಿಡದ ಪೋಷಣೆಗೆ ಸಹಕಾರ:

ಪ್ರೊ. ಅನಿಲ್ ಕೆ. ಗುಪ್ತ, Honey Bee & SRISTI (Society for Research and Initiatives for Sustainable Technologies and Institutions), Indian Institute of Management, Vastavapur, Ahmedabad - 380 015, Ph: 79-6307241, email: anilg@nifindia.org, honeybee@sristi.org
ಮತ್ತು
ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನೃಪತುಂಗ ರಸ್ತೆ, ಬೆಂಗಳೂರು - 560 001, ದೂರವಾಣಿ: 080- 2210877

ಅಣ್ಣಿಗೇರಿಯ ಅಣ್ಣಹಜಾರಿ ಅಬ್ದುಲ್ ಖಾದರ್ ನಡಕಟ್ಟಿನ್

ಉತ್ತರ ಕರ್ನಾಟಕದ ಹುಬ್ಬಳ್ಳಿಯಿಂದ ಗದಗಿಗೆ ಸಾಗುವ ದಾರಿಯ ಮಧ್ಯದಲ್ಲಿ ಬರುವ ಅಣ್ಣಿಗೇರಿ ಕಪ್ಪು ಎರೆ ಮಣ್ಣಿನ, ಸುಡು ಬಿಸಿಲಿನ ಒಣ ಭೂಮಿ ಪ್ರದೇಶ. ಅಣ್ಣಿಗೇರಿಯಂತೂ ದೂಳು, ಕಸ ಕೊಚ್ಚೆಗಳಿಂದ ತುಂಬಿ ಕಾಲಿಡಲೇ ಕಷ್ಟವೆನಿಸುವ ಊರು. ಸದಾ ಬರಗಾಲದಲ್ಲೇ ಇರುವ ಈ ಊರನ್ನು ಕಷ್ಟ ಪಟ್ಟು ದಾಟಿ ಅಂಚಿಗೆ ಬಂದರೆ ಆಶ್ಚರ್ಯವೆನಿಸುವ ರೀತಿಯಲ್ಲಿ ತಂಪಾದ, ಗಿಡಮರಗಳ ಹಸಿರಿನಿಂದ ಕೂಡಿ ಕಂಗೊಳಿಸುವ ಸ್ವಚ್ಛನೆಯ ಫಾರಂ ಒಂದು ಕಾಣುವುದು. ಇದು 'ಅಣ್ಣಿಗೇರಿಯ ಅಣ್ಣ ಹಜಾರೆ', 'ಹುಣಸೆ ಹುಚ್ಚ' ಇತ್ಯಾದಿ ಸುತ್ತಮುತ್ತಲಿನ ಜನರಿಂದ ಪ್ರೀತಿಯ ಬಿರುದುಗಳನ್ನು ಪಡೆದಿರುವ ಅಬ್ದುಲ್ ಖಾದರ್ ನಡಕಟ್ಟಿನ್‌ರವರ 16 ಎಕರೆ ವಿಸ್ತೀರ್ಣದ ಸುಂದರ ಫಾರಂ 'ವಿಶ್ವಶಾಂತಿ'. ನಲವತ್ತೈದು ವರ್ಷ ಪ್ರಾಯದ ನಡಕಟ್ಟಿನ್ 25 ವರ್ಷಗಳಿಂದ ಶೋಧಿಸಿದ ಹತ್ತಾರು ಕೃಷಿ ಯಂತ್ರಗಳು ಸ್ವಚ್ಛ ಸುಣ್ಣದ ಬಿಳಿ ಬಣ್ಣದ ಮನೆಯ ಸುತ್ತ ಸಹಜ ಪ್ರದರ್ಶನಕ್ಕೆ ಒಳ ಪಟ್ಟಿರುತ್ತದೆ. ಎದುರಿಗೆ ಒಂದು ಗುಂಟೆಯ ಅಂಗಳದಲ್ಲಿ ಹಚ್ಚಹಸಿರಿನ ಕಾಶ್ಮೀರಿ ಹುಲ್ಲಿನ ಲಾನ್. ಮನೆಯ ಪಕ್ಕದಲ್ಲಿ ಮತ್ತು ಹಿಂಭಾಗದಲ್ಲಿ ಐದಾರು ತಿಳಿ ನೀರಿನ ಕೃಷಿ ಹೊಂಡಗಳು ಮತ್ತಷ್ಟು ತಣ್ಣನೆಯ ಅನುಭವ ನೀಡುತ್ತಿರುತ್ತವೆ. ತನ್ನ 16 ಎಕರೆ ಜಮೀನಿನಲ್ಲಿ ವೈವಿಧ್ಯಮಯ ತಳಿಗಳ 1700 ಹುಣಸೆ ಮರಗಳು, 1200 ಸಾಗುವಾನಿ, 600 ಬೇವು, 50 ಮಾವು, 2 ಬಾದಾಮಿ ಗಿಡ, 25 ದಾಳಿಂಬೆ ಗಿಡ, 30 ಪೇರಲೆ ಗಿಡ, 20 ತೆಂಗಿನ ಮರಗಳು, ವಿವಿಧ ಹೂಗಿಡಗಳು ಈ ಫಾರಂನ ಸೌಂದರ್ಯಕ್ಕೆ ಹಸಿರು ನಿಶಾನೆ ಹೊದಿಸಿರುತ್ತವೆ.

ಹಿಂದೂ ಮುಸ್ಲಿಮರೆನ್ನದೆ ಜಾತಿ, ಮತ ಭೇದವಿಲ್ಲದೆ ರೈತರು, ಮಹಿಳೆಯರು, ಯುವಕರು ಈತನ ಫಾರಂಗೆ ಬಂದು ಪ್ರೇಕ್ಷಣೀಯ ಸ್ಥಳದ ರೀತಿಯಲ್ಲಿ ಇಲ್ಲಿನ ಆತಿಥ್ಯ ಮತ್ತು ಈತನ ಅನುಭವಗಳ ಪರಿಚಯ ಪಡೆದು ಹೋಗುವ ರೀತಿಯಂತೂ ನಮ್ಮ ಕೃಷಿ ವಿಸ್ತರಣಾ ಪದ್ಧತಿಯನ್ನೇ ಪುನರ್ ಪರಿಶೀಲಿಸುವಂತೆ ಮಾಡಿದೆ. ನಡುಕಟ್ಟಿನ್ 'ಸುಸ್ಥಿರ ಕೃಷಿ'ಗೆ *(Sustainable Agriculture)* ಹೊಸ ಹೊಸ ಆಯಾಮ ನೀಡಲು ಈ ತನ್ನ ವಿಶ್ವಶಾಂತಿ ಫಾರಂನ್ನು ಒಂದು ತಪೋಭೂಮಿಯಾಗಿ ಪರಿವರ್ತಿಸಿದ್ದಾರೆ ಎಂದರೆ ತಪ್ಪಾಗಲಾರದು.

ಹುಟ್ಟು ಅನ್ವೇಷಕ

ಓದಿನ ಬಗ್ಗೆ ಅಪಾರ ಆಸಕ್ತಿ ಇದ್ದರೂ, ತಂದೆಯ ಒತ್ತಡದಿಂದ ನಡಕಟ್ಟಿನ್ ಪಿಯುಸಿ ಮುಗಿಸಲಾರದೇ ಮನೆಗೆ ಹಿಂತಿರುಗಿ ಕೃಷಿಯಲ್ಲಿ ತೊಡಗುವಂತಾಯ್ತು. ಆದರೆ ಇವರ ಅನ್ವೇಷಣಾ ಪ್ರವೃತ್ತಿ ಮಾತ್ರ ಅಡೆತಡೆಗಳಿಲ್ಲದೆ ಬೆಳೆಯುವಂತಾಯ್ತು. ಬೆಳಿಗ್ಗೆ ಸ್ಕೂಲಿಗೆ ಹೋಗಲು ಬೇಗ ಏಳುವಂತಾಗಲು ಅಲರಾಂ ಸಾಲಾದಾಗಿತ್ತು. ಮುಖಕ್ಕೆ ನೀರೆರಚಬೇಕಿತ್ತು. ಅದಕ್ಕೆ ಅಲರಾಂ ಕೀಲಿಗೆ ಹಗ್ಗದ ಮೂಲಕ ನೀರು ತುಂಬಿದ ಬಾಟಲ್ ಒಂದಕ್ಕೆ ಸಂಪರ್ಕ ಕಲ್ಪಿಸಿ, ಅದು ಹೊಡೆಯಲು ಶುರು ಮಾಡಿದಾಗ ದಾರ ಸಡಿಲಗೊಂಡು ಬಾಟಲ್ ಬಾಗಿ ನೀರು ಮುಖದ ಮೇಲೆ ಸಿಂಪಡಿಸಿ ಬಡಿದೆಬ್ಬಿಸುವಂತೆ ಮಾಡುವ ಅನ್ವೇಷಣೆ ಇವರ ಮೊದಲ ಸಾಧನೆ ಎನ್ನಬಹುದು. ನಂತರದ ದಿನಗಳಲ್ಲಿ ಸ್ವಯಂ ಚಾಲಿತ ಬಿತ್ತುವ ಕೂರಿಗೆ, ಸಣ್ಣ ಕೊಕ್ಕೆ ಮೂಲಕ ಬಾಗುವಂತಾಗುವ ಎತ್ತಿನಗಾಡಿ, ಪದೇ ಪದೇ ಹಣಿಯಲು ಅಗತ್ಯವಿರದ ಟ್ರಾಕ್ಟರ್ ಬ್ಲೇಡಿನ ಕುಡ, ನೀರು ಕಾಯಿಸಲು ಇಂಧನ ಉಳಿಸುವ ನಾಟೀ ಬಾಯ್ಲರ್, ಕಟ್ಟಿಗೆ ಒಡೆಯುವ ಯಂತ್ರಗಳಿಂದ ಇತ್ತೀಚೆಗಿನ ಕೋಳಿಗಳನ್ನು ದಿಡೀರನೇ ಹುರಿಯುವ ಚಿಕನ್ ಕಬಾಬ್ ಯಂತ್ರ ಹೀಗೆ ಈ ದೇಶೀ ಅನುಶೋಧಕರು ಕಂಡು ಹಿಡಿದಿರುವ ನಾಟೀ ಯಂತ್ರಗಳು ಹತ್ತು ಹಲವಾರು. ಆದರೆ ನಮ್ಮ ಗ್ರಾಮೀಣ ಅಭಿವೃದ್ಧಿಗೆ ಇವರ ದೊಡ್ಡ ಕೊಡುಗೆ ಎಂದರೆ ಸುಸ್ಥಿರ ರೀತಿಯಲ್ಲಿ ಹುಣಸೇ ಕೃಷಿ ಕೈಗೊಳ್ಳುವ ಬಗ್ಗೆ ಈತ ಕಂಡು ಹಿಡಿದಿರುವ ವಿವಿಧ ಶೋಧನೆಗಳೆನ್ನಬಹುದು. ಇದು ಹುಣಸೇ ಕೊಯಿದು, ಬೇರ್ಪಡಿಸಿ, ಸಂಸ್ಕರಿಸುವವರೆಗಿನ ಯಂತ್ರಗಳಿಂದ ಹಿಡಿದು ಸಾವಯವ ರೀತಿಯಲ್ಲಿ ಮಣ್ಣು ನೀರು ಸಂರಕ್ಷಿಸುವವರೆಗೆ ವಿಸ್ತರಿಸಿರುತ್ತದೆ.

ಸುಸ್ಥಿರ ಕೃಷಿಗಾಗಿ ಹುಣಸೇ ಅನುಶೋಧನೆಗಳು

ಆ ಪ್ರದೇಶದ ಸಾಮಾನ್ಯ ಬೆಳೆ ಶೇಂಗಾ, ಮೆಣಸು. ತಂದೆಯಿಂದ ಹೊಲದ ಉಸ್ತುವಾರಿ ಜವಾಬ್ದಾರಿ ಬಂದೊಡನೇ ನಡಕಟ್ಟಿನ್‌ರ ಅನ್ವೇಷಕ ಮನಸ್ಸು ಬೇರೆ ಬೆಳೆ ಪದ್ಧತಿಯತ್ತ ಹರಿಯುವಂತಾಯ್ತು. ತೋಟಗಾರಿಕೆ ಬೆಳೆಗಳಿಂದ ಆದಾಯ ಅಧಿಕ ಸಿಗಬಹುದೆಂದು ಭಾವಿಸಿದ ಇವರು ತಮ್ಮ 16 ಎಕರೆ ಜಮೀನಿನಲ್ಲಿ ಮಾವು, ತೆಂಗು, ಸಪೋಟ, ಬ್ಯಾರೆ ಗಿಡಗಳನ್ನು ನೆಟ್ಟು ಮಧ್ಯದಲ್ಲಿ ಮೆಣಸು ಬೆಳೆದರು. ಆದರೆ ಎರೆ ಮಣ್ಣಿನ ಸವಳು ಭೂಮಿ. ಜೊತೆಗೆ ನೀರಿನ ಅಭಾವ ಯಾವ ಗಿಡಗಳೂ ಬದುಕಲಿಲ್ಲ. ಆಗ ಚಿಂತೆ ಶುರುವಾಗಿ ಕೂತ ಇವರ ಗಮನಕ್ಕೆ ಬಂದಿದ್ದು ಪಕ್ಕದ ದೇಸಾಯರ ಹೊಲದಲ್ಲಿ ದಷ್ಟಪುಷ್ಟವಾಗಿ ಬೆಳೆದು ನಿಂತಿದ್ದ ಹುಣಸೆ ಮರಗಳು.

ಬೆಳೆದರೆ ಹುಣಸೇನೆ ಸರಿಯಂತ ಮಾವು, ಸಪೋಟ ಕಡಿದು 1985ರ ಹೊತ್ತಿಗೆ ಸುಮಾರು ಅರ್ಧಭಾಗ ಭೂಮಿಯಲ್ಲಿ 600 ಹುಣಸೆ ಗಿಡಗಳನ್ನು ಅದೂ ವಿವಿಧೆಡೆಗಳಿಂದ ತಂದ ನಾಟೀ ತಳಿಗಳನ್ನು; ನಂತರ 1990ರಲ್ಲಿ ಮತ್ತೆ 1100 ಗಿಡಗಳನ್ನು ಉಳಿದೆಲ್ಲಾ ಬಹುಪಾಲು ಭೂಮಿಯಲ್ಲಿ ನೆಟ್ಟರು. ಕೊಟ್ಟಿಗೆ ಗೊಬ್ಬರ ಹೊರತಾಗಿ ಮತ್ತೇನೂ ಹಾಕಲಿಲ್ಲ. ಹಾಗಾಗಿ, ಸುತ್ತ ಮುತ್ತಲಿನ ಜನರೆಲ್ಲಾ ಇವರನ್ನು 'ಹುಣಸೇ ಹುಚ್ಚ' ಎಂದು ಪ್ರೀತಿಯಿಂದ ಕರೆಯಲು ಶುರುಮಾಡಿದರು. ನಡಕಟ್ಟಿನ್‌ರ ಈ ಹುಣಸೇ ಹುಚ್ಚೇ ನಂತರ ಹಲವಾರು ಅನುಶೋಧನೆಗಳಿಗೆ ನಾಂದಿಯಾಯ್ತು.

ಸುಸ್ಥಿರ ನೀರು ನಿರ್ವಹಣೆ

ಸದಾ ಬರ ಪೀಡಿತ ಅಣ್ಣಿಗೇರಿಯಂತಹ ಸ್ಥಳದಲ್ಲಿ ಗಿಡಗಳನ್ನು ಬದುಕುಳಿಸಿಕೊಳ್ಳುವುದು ಕಷ್ಟದ ಕೆಲಸ. ಹುಣಸೆ ಹೇಳಿಕೇಳಿ ಬರ, ಮಣ್ಣಿನ ಲೋಪ, ಹವಮಾನಗಳ ವೈಪರೀತ್ಯಗಳನ್ನು ತಡೆದುಕೊಳ್ಳುವಲ್ಲಿ ಅಪಾರ ಸ್ಥಿತಪ್ರಜ್ಞತೆ ಹೊಂದಿರುವ ಗಿಡ. ಆದರೂ ಮೊದಮೊದಲಿಗೆ ಅದಕ್ಕೆ ತೇವಾಂಶವು ಬೇಕಿದ್ದು, ಅದೂ ನಡಕಟ್ಟಿನ್ ಭೂಮಿಯಲ್ಲಿ ಸುಲಭವಾಗಿ

ದೊರೆಯದಂತಾಯ್ತು. ಛಲ ಬಿಡದ ನಡಕಟ್ಟನ್‌ರವರು 2-3 ಕಿಲೋಮೀಟರ್‌ಗಳಿಂದ ನೀರು ತಂದು ಇವುಗಳಿಗೆ ಸುರಿದರು. ಕೊಟ್ಟ ನೀರು ಆವಿಯಾಗದಂತೆ ತಡೆಹಿಡಿಯಲು ಮೂರು ಇಂಚಿನ ಸೊಪ್ಪು, ಕಳೆ, ತ್ಯಾಜ್ಯಗಳ ಭೂ ಹೊದಿಕೆ (mulching) ಹೊಲದಾದ್ಯಂತ ನೀಡಿದರು. ಹಾಗೇ ಹೊಲದುದ್ದಕ್ಕೂ ಇಳಿಜಾರಿಗೆ ಅಡ್ಡಲಾಗಿ ಬದುಕಟ್ಟೆಗಳನ್ನು ನಿರ್ಮಿಸಿ ಅಲ್ಪಸ್ವಲ್ಪ ಮಳೆ ಬಂದಾಗ ನೀರು ಮಣ್ಣುಕೊಚ್ಚಿಹೋಗುವ ಸಾಧ್ಯತೆಯನ್ನು ಸಂಪೂರ್ಣ ತಡೆಹಿಡಿದರು. ಹಾಗಾಗಿ 1985 ರಿಂದ ಹಲವು ಬರಗಾಲಗಳನ್ನು ಅಣ್ಣಿಗೇರಿ ಪ್ರಾಂತ್ಯದ ರೈತರು ಕಂಡರೂ, ನಡಕಟ್ಟನ್‌ರ ಹುಣಸೆ ಗಿಡಗಳು ಮಾತ್ರ ಯಾವುದೇ ದೊಡ್ಡ ಗಂಡಾಂತರಗಳು ಎದುರಾಗದೇ ಪಾರಾಗುವಂತಾಯ್ತು.

ಫಾರಂ ಹೊಂಡ


ಹುಣಸೇ ಗಿಡಗಳು ಬೆಳೆದು ದೊಡ್ಡವಾಗುವ ಹೊತ್ತಿಗೆ ನೀರಿನ ಬೇಡಿಕೆ ಅತಿಯಾಗತೊಡಗಿತು. ಅನಿವಾರ್ಯವಾಗಿ ಬೋರ್‌ವೆಲ್ ನೀರಾವರಿಗೆ ನಡಕಟ್ಟನ್ ಇಳಿಯಬೇಕಾಯ್ತು. ಇಲ್ಲೂ ಅವರ ಅನ್ವೇಷಕ ಮನಸ್ಸು ಕೆಲಸಮಾಡಿ, ಒಂದೆಡೆ ಅಭಾವದ ಅಂತರ್ಜಲವನ್ನು ಅತ್ಯಂತ ಮುತುವರ್ಜಿಯಿಂದ ಬಳಸುವುದು, ಇನ್ನೊಂದೆಡೆ ಆ ಅಂತರ್ಜಲದ ಪುನರ್ ಸೃಷ್ಟಿಮಾಡಿ ಅಧಿಕಗೊಳಿಸುವ ಅನನ್ಯ ರೀತಿಯ ನೀರಾವರಿ ಪದ್ಧತಿಯನ್ನು ಕಂಡು ಹಿಡಿಯುವಂತಾಯ್ತು.



ತಮ್ಮ ಹುಣಸೆ ಗಿಡಗಳಿಗೆ ನೀರುಣಿಸಲು ಎರಡು ಲಕ್ಷಕ್ಕೂ ಅಧಿಕ ಹಣ ಖರ್ಚು ಮಾಡಿ ಹೊಲದ ಹಲವೆಡೆ ಸುಮಾರು 12 ಕೊಳವೆ ಬಾವಿಗಳನ್ನು ತೋಡಿದರೂ ಕೊನೆಗೂ ನೀರು ನೀಡುವಂತಾಗಿದ್ದು ಕೇವಲ ಎರಡೇ ಬಾವಿಗಳು. ಅದೂ ಅರ್ಧ ಇಂಚು ಮಾತ್ರ. ಕೇವಲ 5 ಹೆಚ್.ಪಿ. ಸಾಮರ್ಥ್ಯದ ಒಂದೇ ಮೋಟಾರಿನ ಸಹಾಯದಿಂದ ಈ ಎರಡು ಕೊಳವೆ ಬಾವಿಗಳಿಂದ ಸತತ ನೀರು ಎಳೆದು ಅದನ್ನು 100 ಅಡಿ ಅಗಲ 10 ಅಡಿ ಆಳದ ಎರಡು ಫಾರಂ ಹೊಂಡಗಳಲ್ಲಿ ಶೇಖರಿಸಿ, ಹೀಗೆ ಶೇಖರವಾದ ನೀರನ್ನು ಅದೇ ಮೋಟಾರಿನ ಮೂಲಕ 1700 ಹುಣಸೇ ಗಿಡಗಳಿಗೆ ಹನಿ ನೀರಾವರಿ ಮೂಲಕ ನೀರುಣಿಸುವ ಅನನ್ಯ ಮಿತ ನೀರಾವರಿ ಪ್ರಯೋಗವನ್ನು ನಡಕಟ್ಟನ್ 1998 ರಿಂದ ನಡೆಸಿಕೊಂಡು ಬಂದಿರುವರು. ಈ ಫಾರಂ ಹೊಂಡಗಳಲ್ಲಿ ಮಳೆಗಾಲದಲ್ಲಿ ನೀರು ಶೇಖರಣೆಯಾಗುವುದರಿಂದ ಇವರ ಹೊಲದಲ್ಲಿ ಅಂತರ್ ಜಲದ ಮಟ್ಟ ಏರುವಂತಾಗಿದೆ.

ಮಳೆಯಾಶ್ರಿತ ಗುಂಡಿ ನೀರಾವರಿ ವಿಧಾನ

ಹನಿ ನೀರಾವರಿಗೆ ಪ್ರಾರಂಭದ ವೆಚ್ಚ ಅಧಿಕವಾಗಿರುತ್ತದೆ. ಜೊತೆಗೆ ಹನಿ ಜಿಗಿಸುವ ಚಿಕ್ಕ ಚಿಕ್ಕ ಪ್ಲಾಸ್ಟಿಕ್ ಪೈಪುಗಳಲ್ಲಿ ಕಶ್ಮಲಗಳು ಸೇರಿ ನೀರು ಹರಿಯಲು ಅಡಚಣೆ ಉಂಟು ಮಾಡುವುದು ಸಾಮಾನ್ಯ. ಹಾಗೇ ಇವುಗಳಿಗೆ ಇಲಿ ಮತ್ತಿತರ ಪ್ರಾಣಿಗಳಿಂದ ಮತ್ತು ನೇಗಿಲು ಹೊಡೆಯುವಾಗ ಹಾಗೂ ಇತರೇ ಕೃಷಿ ಕಾರ್ಯಗಳಲ್ಲಿ ಹಾನಿಯಾಗುವ ಸಂಭವವು ಅಧಿಕವಾಗಿರುತ್ತದೆ. ಇವೆಲ್ಲವುಗಳಿಗೆ ಪರಿಹಾರವಾಗಿ ನಡಕಟ್ಟನ್‌ರವರು ಒಂದು ಪರ್ಯಾಯ ಮಳೆಯಾಶ್ರಿತ ಗುಂಡಿ ನೀರಾವರಿ ಪದ್ಧತಿಯನ್ನು ಜಾರಿಗೆ ತಂದಿದ್ದು ಇದು ಹುಣಸೆಗೆ ಮಾತ್ರವಲ್ಲದೆ ಮಾವು, ತೆಂಗು ಮತ್ತಾವುದೇ ಮರ ಗಿಡಗಳ ಆಧಾರಿತ ತೋಟಗಾರಿಕೆಗೆ ಕಾಮಧೇನು ಆಗುವುದು ಎಂದು ಹೆಮ್ಮೆಯಿಂದ ನುಡಿಯುತ್ತಿರುವರು.




ಈ ವಿಧಾನದ ಪ್ರಕಾರ ನಾಲ್ಕು ಹುಣಸೇ ಗಿಡಗಳ ಮಧ್ಯದಲ್ಲಿ 10 ಅಡಿ ಅಗಲ, 10 ಅಡಿ ಉದ್ದ, 3 ಅಡಿ ಆಳದ ಒಂದೊಂದು ಗುಂಡಿಯನ್ನು ಚಿತ್ರದಲ್ಲಿ ತೋರಿಸಿರುವಂತೆ ನಡಕಟ್ಟನ್‌ರವರು ತೋಡಿರುತ್ತಾರೆ. ಈ ಗುಂಡಿಯೊಳಗೆ ಬುಡದಲ್ಲಿ ಎರಡು ಅಡಿ ಚಟ್ಟ ಮಿಶ್ರಿತ ಕೋಳಿ ಗೊಬ್ಬರದ ಮೇಲೆ 6 ಇಂಚು ಉಪ್ಪು ಮಿಶ್ರಿತ ಮೀನಿನ ಗೊಬ್ಬರ ಹಾಕಿ ಅದರ ಮೇಲೆ 6 ಇಂಚು ಮರಳು ಹಾಕಿ ಭೂಮಿಯ ಮಟ್ಟದವರೆಗೆ ಬರುವಂತೆ ಮಾಡಲಾಗುತ್ತದೆ. ಗುಂಡಿ ತೋಡಿದ ಮಣ್ಣನ್ನು ಸುತ್ತಲು ಬದುವಿನ ರೂಪದಲ್ಲಿ ಹಾಕಿ ಬೇಸಿಗೆಯಲ್ಲಿ ತಿಂಗಳಿಗೊಮ್ಮೆ ಕೆರೆ ಹೊಂಡದಲ್ಲಿ ಶೇಖರಿಸಿದ ನೀರನ್ನು ಹನಿ ನೀರಾವರಿಗೆ ಬದಲಾಗಿ ನೇರವಾಗಿ ಕೊಳವೆಗಳ ಮೂಲಕ ಈ ಗುಂಡಿಯೊಳಗೆ ಹರಿಸಲಾಗುತ್ತದೆ. ಮಳೆಗಾಲದಲ್ಲಿ ಬಿದ್ದ ಹನಿ ಹನಿ ನೀರೂ ವ್ಯರ್ಥವಾಗದಂತೆ ಇದರೊಳಗೆ ಶೇಖರಣೆಯಾಗುವಂತಾಗುತ್ತದೆ. ಈ ಪದ್ಧತಿಯಿಂದಾಗಿ ಶ್ರೇಷ್ಠ ಮಟ್ಟದ

ಸಾವಯವ ಗೊಬ್ಬರ ಮತ್ತು ನೀರಿನ ಅತ್ಯಂತ ಸಮರ್ಪಕ ಪೂರೈಕೆ ಹುಣಸೆ ಗಿಡಗಳಿಗೆ ಆಗುವಂತೆ ನಡಕಟ್ಟಿನ್ ಮಾಡಿರುವರು. ಜೊತೆಗೆ ಹನಿ ನೀರಾವರಿಯ ಅಧಿಕ ಪ್ರಾರಂಭಿಕ ವೆಚ್ಚ, ಅದರ ನ್ಯೂನತೆಗಳೆಲ್ಲವನ್ನು ನಿವಾರಿಸಿಕೊಳ್ಳುವ ಪರ್ಯಾಯ ಕಂಡು ಹಿಡಿದಿರುವರು.

ಕೊಯಿಲು ಮತ್ತು ನಂತರದ ಕಾರ್ಯಕ್ಕೆ ಹುಣಸೇ ಯಂತ್ರಗಳು


ಹದಿನಾರು ಎಕರೆಯಲ್ಲಿ ಸಾವಿರಾರು ಹುಣಸೆ ಗಿಡಗಳನ್ನು ಸುಸ್ಥಿರ ನೀರು ನಿರ್ವಹಣೆ ಮೂಲಕ ಬೆಳೆಯುವಲ್ಲಿ ನಡಕಟ್ಟಿನ್ ಯಶಸ್ವಿಯಾದರು. ನಂತರ, ಕೆಲ ವರ್ಷಗಳಲ್ಲಿ ಆ ಹುಣಸೇ ಮರಗಳು ಫಲ ನೀಡಲು ಶುರುವಾದಾಗ ಒಮ್ಮೆಗೇ ಅವನ್ನು ಕೊಯಿಲು ಮಾಡುವ ನಂತರ ಬೀಜ ತೆಗೆದು ಸಂಸ್ಕರಿಸುವ ಕೆಲಸಕ್ಕಾಗಿ ಆಳುಗಳ ಕೊರತೆ ಎಲ್ಲಾ ಸಮಸ್ಯೆಗಳು ಎದುರಾಯ್ತು. ಈ ಸಮಸ್ಯೆಗಳಿಗೆ ಪರಿಹಾರವಾಗಿ ನಡಕಟ್ಟಿನ್ ಮೂರು ಯಂತ್ರೋಪಕರಣಗಳ ಅನ್ವೇಷಣೆ ಮಾಡುವಂತಾದರು.

ಅ) ಹುಣಸೇಕಾಯಿ ಕೊಯ್ಯುವ ಉಪಕರಣ: ಟ್ರ್ಯಾಕ್ಟರ್ ಟ್ರಾಲಿಗೆ ಚಿತ್ರದಲ್ಲಿ ತೋರಿಸಿರುವಂತೆ ಹಲವು T ಆಕಾರದ ಕಬ್ಬಿಣದ ವಿನ್ಯಾಸಗಳನ್ನು ಜೋಡಿಸಿ ಕೊಕ್ಕೆಗಳಿರುವ ನೂರಾರು ಕಬ್ಬಿಣದ ಸರಪಣಿಗಳನ್ನು ಜೋತು ಬೀಳುವಂತೆ ಮಾಡಲಾಯ್ತು. ಮರಗಳ ಎತ್ತರಕ್ಕೆ ಅನುಗುಣವಾಗಿ ಈ T ಆಕಾರದ ವಿನ್ಯಾಸಗಳನ್ನು ಮೇಲೆ ಕೆಳಗೆ ಮಾಡುವ ಅವಕಾಶವನ್ನೂ ಕಲ್ಪಿಸಿ ಕೊಡಲಾಯ್ತು. ಹುಣಸೆ ಹಣ್ಣುಗಳು ಬಲಿತು ಕೊಯಿಲಿಗೆ ಸಿದ್ಧವಾಗಿರುವಾಗ ಈ ರೀತಿ ವಿನ್ಯಾಸ ಸೇರಿಸಿ ಮಾರ್ಪಡಿಸಿದ ಟ್ರಾಲಿಯನ್ನು ಎರಡು ಸಾಲು ಮರಗಳ ಮಧ್ಯೆ ಹಾಯ್ದು ಬರುವಂತೆ ಮಾಡಲಾಗುವುದು. ಜೋತು ಬಿದ್ದಿರುವ ಈ ಕೊಕ್ಕ ಸರಪಳಿಗಳು ಮರದಾದ್ಯಂತ ಹಾಯ್ದು ಹೋಗುವ ರಭಸಕ್ಕೆ ಬಲಿತ ಹುಣಸೆ ಹಣ್ಣುಗಳು ಟ್ರ್ಯಾಕ್ಟರ್ ಟ್ರಾಲಿಯೊಳಗೆ ಬೀಳುತ್ತವೆ. ಈ ರೀತಿ ಜೋತು ಬಿದ್ದಿರುವ ಕಬ್ಬಿಣದ ಸರಪಳಿಗಳಿಂದ ಹುಣಸೆ ಗಿಡಕ್ಕೆ ಗಾಯವಾದಷ್ಟೂ ಮುಂದಿನ ಸಾಲಿನಲ್ಲಿ ಮರ ಸೊಕ್ಕಿದ್ದು ಚಿಗುರಿ ಮತ್ತಷ್ಟು ಅಧಿಕ ಇಳುವರಿ ನೀಡುವಂತಾಗುತ್ತದೆ ಎಂಬುದು ನಡಕಟ್ಟಿನ್ ಕಂಡುಹಿಡಿದಿರುವ ಮತ್ತೊಂದು ಅನುಶೋಧನೆಯಾಗಿರುತ್ತದೆ. ಈ ಶೋಧನೆ ಇನ್ನೂ ಭ್ರೂಣಾವಸ್ಥೆಯಲ್ಲಿದ್ದು ಇದಕ್ಕೆ 5 ಲಕ್ಷಕ್ಕೂ ಮೀರಿ ಹಣ ಬೇಕಾಗಿರುತ್ತದೆ.



ಆ) ಹುಣಸೆ ಹಣ್ಣಿನಿಂದ ಬೀಜ ಬೇರ್ಪಡಿಸುವ ಯಂತ್ರ: ಹುಣಸೇ ಮರ ಬೆಳಸಿ ಆಯ್ತು. ಅದರ ಹಣ್ಣುಗಳನ್ನು ಕೊಯಿಲು ಮಾಡಲು ಸುಲಭ ವಿಧಾನ ಕಂಡು ಕೊಂಡು ಆಯ್ತು. ನಂತರ ಹುಣಸೇ ಹಣ್ಣೊಳಗಿನ ಬೀಜವನ್ನು ಬೇರ್ಪಡಿಸಿ, ಸಂಸ್ಕರಿಸುವ ವಿಚಾರವಾಗಿ ನಡಕಟ್ಟಿನ್ ತನ್ನೆಲ್ಲಾ ಬುದ್ದಿವಂತಿಕೆ, ಶ್ರಮ ಮತ್ತು ಹಣವನ್ನು ಹಾಕಿ ಒಂದು ಅದ್ಭುತ ಯಂತ್ರವನ್ನೇ ಶೋಧಿಸಬೇಕಾಯ್ತು.


ನಡಕಟ್ಟಿನ್ ಮೊದಲು ನೆಟ್ಟ ಹುಣಸೆ ಗಿಡಗಳು 1995 ರಲ್ಲಿ ಕಾಯಿ ಬಿಡಲು ಶುರುಮಾಡಿದವು. ಆ ವರ್ಷ ಸುಮಾರು 13 ಕ್ವಿಂಟಾಲ್ ಇಳುವರಿ ಬಂದಿತು. ತಾಯಿ, ಹೆಂಡತಿ, ಮಕ್ಕಳೆಲ್ಲಾ ಸೇರಿ ಹುಣಸೆ ಹಣ್ಣಿನಿಂದ ಬೀಜ ಬಿಡಿಸಲು ಶುರುಮಾಡಿದರೂ ತಿಂಗಳುಗಟ್ಟಲೆ ಹಿಡಿಯಿತು. ಇನ್ನು ಪೂರ್ತಿ 1700 ಗಿಡಗಳು ಇಳುವರಿ ಕೊಡಲು ಶುರುಮಾಡಿದರೆ ಮುಂದೇನು ಗತಿಯಪ್ಪ ಎಂದು ಮನೆಮಂದಿಗೆಲ್ಲಾ ಚಿಂತೆ ಶುರುವಾಯಿತು. ಆಗ ನಡಕಟ್ಟಿನ್‌ನ ಅನ್ವೇಷಕ ಬುದ್ದಿ ಮತ್ತೆ ಕೆಲಸ ಮಾಡಲು ಶುರು ಮಾಡಿತು. ಒಂದು ದಿನ ಕೈಗೆ ಸುತ್ತಿಗೆ ಒಂದನ್ನು ತೆಗೆದುಕೊಂಡು ಯಾವ ಬದಿಯಿಂದ ಕಾಯಿಗೆ ಏಟುಕೊಟ್ಟರೆ ಬೀಜ ಸುಲಭವಾಗಿ ಹೊರಹೊಮ್ಮುತ್ತದೆಯೆಂದು ನಡಕಟ್ಟಿನ್ ಕಂಡುಕೊಂಡರು.



ನಂತರ, ಬೆರಳು ಗಾತ್ರದ ತುದಿ ಚೂಪಾಗಿರುವ ಹತ್ತಾರು ಸರಳುಗಳನ್ನು ಪರಸ್ಪರ ವಿರುದ್ಧ ದಿಕ್ಕಿನಿಂದ ಹಿಂದೆ ಮುಂದೆ ಚಲಿಸುವಂತೆ ಮಾಡಿದರೆ ಅವುಗಳ ಮಧ್ಯೆ ಹುಣಸೆಕಾಯಿ ಬೀಳುವಂತಾಗಿ ಒತ್ತಡದಿಂದ ಬೀಜ ಬೇರ್ಪಡುವುದನ್ನು ಕಂಡುಕೊಂಡರು. ಇದಕ್ಕಾಗಿ ಯಂತ್ರದ ಮೂರು ಮಾದರಿಗಳನ್ನು ಮಾಡಿ 6 ತಿಂಗಳು ಪರೀಕ್ಷಿಸಿ ಅಂತಿಮವಾಗಿ ಒಂದು ಯಂತ್ರ ಯಶಸ್ವಿಯಾಗಿ ಕೆಲಸ ಮಾಡುವಂತಾಯ್ತು. ಇದಕ್ಕೆ ಸುಮಾರು 5 ಲಕ್ಷ ಹಣ ತಗುಲಿದ್ದು ಟ್ರ್ಯಾಕ್ಟರ್ ಅಥವಾ ಪಂಪ್‌ಸೆಟ್ ಮೋಟಾರಿಗೆ ಅಳವಡಿಸಿದಲ್ಲಿ ನೂರಾರು ಜನರು ಕಷ್ಟಪಟ್ಟು ಮಾಡುವ ಕೆಲಸವನ್ನು ಒಂದೇ ಯಂತ್ರ ದಿನದಲ್ಲಿ ಮಾಡಲು ಸಾಧ್ಯವಾಗುತ್ತದೆ.

ಇ) ಹುಣಸೆಕಾಯಿ ಕತ್ತರಿಸುವ ಯಂತ್ರ: ಹುಣಸೆ ಕಾಯಿ ಕೊಯ್ಯಿಲು, ಬೀಜ ಬೇರ್ಪಡಿಸಲು ಉಪಾಯ ಕಂಡುಕೊಂಡಾಯ್ತು. ನಂತರ ಅದನ್ನು

ನೇರವಾಗಿ ಮಾರುವ ಬದಲು ಸಂಸ್ಕರಿಸಿದಲ್ಲಿ ಇನ್ನೂ ಅಧಿಕ ಲಾಭ ಸಿಗಬಹುದಲ್ಲವೆ ಎಂದು ನಡಕಟ್ಟಿನ್‌ರ ವ್ಯವಹಾರಿಕ ಬುದ್ಧಿ ಕೆಲಸ ಮಾಡ ತೊಡಗಿತು. ಹುಣಸೆ ತೊಕ್ಕು ಎನ್ನುವ ಉಪ್ಪಿನಕಾಯಿ ತರಹದ ಪದಾರ್ಥಕ್ಕೆ ದಕ್ಷಿಣ ಭಾರತದಲ್ಲೆಡೆ ಬೇಡಿಕೆ ಇದೆ. ಹಾಗೇ, ಹುಣಸೆಯಿಂದ ಖಟ್ಟಾಮೀಠಾ ಜಾಮು ಕೂಡ ತಯಾರಿಸಬಹುದು. ನಡಕಟ್ಟಿನ್ ಹಿಂದೆ ಮುಂದೆ ನೋಡದೆ ಹುಣಸೆಯನ್ನು ಸಂಸ್ಕರಿಸಿ ಈ ಪದಾರ್ಥಗಳ ತಯಾರಿಕೆಗೆ ಕೈ ಹಾಕಿದರು. ಮತ್ತೆ ಎದುರಾಯಿತು ಸಮಸ್ಯೆ. ಬಿರುಸಾದ ನಾರುಸಹಿತ ಹುಣಸೆ ಕಾಯಿಗಳನ್ನು ಅಗಾಧ ಪ್ರಮಾಣದ ತೊಕ್ಕು, ಜಾಮಗಳ ತಯಾರಿಕೆಗೆ ತುಂಡು ತುಂಡು ಮಾಡಿ ಜಜ್ಜಿ ಹದ ಮಾಡುವುದು ಬಹುದೊಡ್ಡ ಸಮಸ್ಯೆಯಾಯಿತು. ಹುಟ್ಟಾ ಅನ್ವೇಷಕ ನಡಕಟ್ಟಿನರ ಆ ಚುರುಕು ಬುದ್ಧಿ ಇಲ್ಲಿಯೂ ಕೆಲಸ ಮಾಡಿ ಹುಣಸೇಕಾಯಿ ಕತ್ತರಿಸುವ ಚಿಕ್ಕದಾದ ಆದರೆ ಅಷ್ಟೇ ಗಟ್ಟಿಮುಟ್ಟಾದ ಯಂತ್ರವೊಂದರ ಅವಿಷ್ಕಾರ (ಚಿತ್ರ) 1994ರಲ್ಲಿ ಮಾಡಿದರು. ಮೊನ್ನೆ ಮೊನ್ನೆಯವರೆಗೂ ನಡಕಟ್ಟಿನ್‌ರ ಪತ್ನಿ ಮತ್ತು ಹೆಣ್ಣು ಮಕ್ಕಳಿಗೆ ಈ ಹುಣಸೆ ತೊಕ್ಕು ಜಾಮ ತಯಾರಿಸುವ ಗುಡಿ ಕೈಗಾರಿಕೆಯಲ್ಲಿ ಸಂಪೂರ್ಣ ತಲ್ಲೀನರಾಗುವಂತೆ ಮಾಡಿದ್ದರೆ ಇಲ್ಲಿ ತಯಾರಾದ ಪದಾರ್ಥಗಳ ಖ್ಯಾತಿ ಉತ್ತರ ಕರ್ನಾಟಕ ದಾಟಿ ಹೈದರಾಬಾದಿನವರೆಗೂ ಹಬ್ಬುವಂತಾಗಿದೆ. ಈಗ ಇಬ್ಬರೂ ಹೆಣ್ಣುಮಕ್ಕಳು ಮದುವೆಯಾಗಿ ಗಂಡನ ಮನೆಗೆ ಹೋಗಿದ್ದು ನಡಕಟ್ಟಿನ್ ಈ ಉದ್ಯೋಗ ಮುಂದುವರಿಸಲು ಕಷ್ಟವಾಗಿದೆ.



ಆರ್ಥಿಕ ಲೆಕ್ಕಾಚಾರಗಳು

ಅ) ಹುಣಸೆ ಕೃಷಿಯಿಂದ: ನಡಕಟ್ಟಿನ್ ನೆಟ್ಟಿರುವ 600 ಹುಣಸೇ ಮರಗಳಿಗೆ ಈಗಾಗಲೇ 15 ವರ್ಷ ತುಂಬಿದ್ದರೆ ಇನ್ನುಳಿದ ಬಹುತೇಕ ಗಿಡಗಳು ದಶ ವಾರ್ಷಿಕ ಆಚರಿಸಲಿವೆ. ಇಪ್ಪತ್ತು ವರ್ಷ ತುಂಬಿದ ಹುಣಸೇ ಗಿಡವೊಂದರಿಂದ ವರ್ಷಕ್ಕೆ ಸರಾಸರಿ ಒಂದು ಕ್ವಿಂಟಾಲ್‌ನಷ್ಟು ಹುಣಸೆ ತಿರುಳು, ಒಂದು ಕ್ವಿಂಟಾಲ್ ಬೀಜ ಮತ್ತು ಮೂರು ಚೀಲಗಳಷ್ಟು ಹಿಂಡಿ ಸಿಗಬಹುದಾಗಿದ್ದು ಇದೆಲ್ಲವುಗಳ ಇಂದಿನ ಒಟ್ಟು ಮೌಲ್ಯ ಕನಿಷ್ಠ ರೂ.2000 ಗಳಾಗಬಹುದಾಗಿದೆ. ಮರವೊಂದಕ್ಕೆ ನಿರ್ವಹಣೆ, ಕೊಯಿತ, ಬೀಜ ಬೇರ್ಪಡಿಸುವುದು ಎಲ್ಲಾ ಸೇರಿದರೂ ಸಾವಿರ ರೂಪಾಯಿ ವೆಚ್ಚ ತಗುಲ ಬಹುದು. ಅಂದರೆ ಇಂದಿನ ಬೆಲೆ ವೆಚ್ಚದಲ್ಲಿ ಹುಣಸೆ ಮರವೊಂದರಿಂದ ನಿವ್ವಳ ವಾರ್ಷಿಕ ಆದಾಯ ಕನಿಷ್ಠ ರೂ.1000 ಸಿಗಬಹುದಾಗಿದ್ದು, ನಡಕಟ್ಟಿನ್ ನೆಟ್ಟು ಬೆಳೆಸಿದ ಎಲ್ಲಾ 1700 ಹುಣಸೆ ಮರಗಳು ಪೂರ್ತಿ ಫಲ ನಿಡುವಂತಾದರೆ ಏನಿಲ್ಲಾ ಅಂದರೂ 17 ಲಕ್ಷ ರೂಪಾಯಿ ವರಮಾನ ಬರಬಹುದಾಗಿದೆ. ಇನ್ನು ಬೆಳೆದ ಹುಣಸೆ ಕಾಯಿಗಳಿಂದ ತೊಕ್ಕು ಮತ್ತು ಜಾಮು ಮಾಡಿ ಮಾರಿದರಂತೂ ನಡಕಟ್ಟಿನ್ ಆದಾಯ ನಾಲ್ಕು ಪಟ್ಟು ಅಧಿಕವಾಗಲಿದೆ.

ಆ) ಯಂತ್ರಗಳಿಂದ: ಇನ್ನು ನಡಕಟ್ಟಿನ್ ಶೋಧಿಸಿರುವ ಯಂತ್ರಗಳಲ್ಲಿ ಕೆಲವನ್ನಾದರೂ ಅಭಿವೃದ್ಧಿಪಡಿಸಿ ಮಾರಾಟ ಮಾಡಿದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಗಳಿಸುವ ಸಾಧ್ಯತೆ ಇದೆ. ಉದಾಹರಣೆಗೆ ಇವರು ಶೋಧಿಸಿರುವ ಹುಣಸೆ ಬೀಜ ಬೇರ್ಪಡಿಸುವ ಯಂತ್ರವೊಂದನ್ನು ತಯಾರಿಸಲು 30 ಸಾವಿರ ರೂಪಾಯಿಗಳು ಖರ್ಚು ತಗುಲಿದ್ದು, ಅದನ್ನು ಇತರರಿಗೆ ಒಂದು ಲಕ್ಷಕ್ಕಾದರೂ ಮಾರಾಟ ಮಾಡಬಹುದಾಗಿದೆ. ವರ್ಷಕ್ಕೆ ಈ ರೀತಿಯ ಕನಿಷ್ಠ ಐದು ಯಂತ್ರಗಳನ್ನು ಮಾಡಿ ಮಾರಾಟ ಮಾಡಿದಲ್ಲಿ ಏನಿಲ್ಲಾ ಅಂದರೂ ಮೂರುವರೆ ಲಕ್ಷ ನಿವ್ವಳ ಆದಾಯ ಇವರಿಗೆ ದೊರಕ ಬಹುದಾಗಿದೆ. ಇದೇ ರೀತಿ, ವರ್ಷಕ್ಕೆ 20 ಸ್ವಯಂಚಾಲಿತ ಬಿತ್ತುವ ಕೂರಿಗೆ, 20 ಬಾಗುವ ಎತ್ತಿನ ಗಾಡಿಗಳು, 20 ನೀರು ಕಾಯಿಸುವ ಬಾಯ್ಲರ್ ಮತ್ತು ಕನಿಷ್ಠ 250 ಟ್ರ್ಯಾಕ್ಟರ್ ಬ್ಲೇಡಿನ ಕುಡಗಳನ್ನು ಹರಿತ ಮಾಡುವ ಸಾಮರ್ಥ್ಯ ತನಗೆ ಇರುವುದಾಗಿ ನಡಕಟ್ಟಿನ್ ತಿಳಿಸುತ್ತಾರೆ. ಈ ಐದೂ ಯಂತ್ರಗಳ

ಸಂಖ್ಯೆ	ಉಪಕರಣಗಳು	ಪ್ರತಿ ಉಪಕರಣಗಳಿಗೆ ತಗಲುವ ಖರ್ಚು ರೂ.ಗಳಲ್ಲಿ	ಪ್ರತಿ ಉಪಕರಣ ಮಾರಾಟದ ಬೆಲೆ ರೂ.ಗಳಲಿ	ಉಪಕರಣಗಳ ಸಂಖ್ಯೆ	ಒಟ್ಟು ಉತ್ಪಾದನಾ ವೆಚ್ಚ ರೂ.ಗಳಲ್ಲಿ	ಒಟ್ಟು ಆದಾಯ ರೂ.ಗಳಲ್ಲಿ
1)	ಹುಣಸೆ ಬೀಜ ಬೇರ್ಪಡಿಸುವಯಂತ್ರ	30,000	90,000	5	1,50,000	4,50,000
2)	ಸ್ವಯಂ ಚಾಲಿತ ಬಿತ್ತುವ ಕೂರಿಗೆ	8,000	28,000	20	1,60,000	5,60,000
3)	ಲಿಫ್ಟಿಂಗ್ ಕಾರ್ಟ್	12,000	38,000	20	2,40,000	7,20,000
4)	ನೀರು ಕಾಯಿಸುವ ಬಾಯಲರ್	3,000	8,000	20	60,000	1,60,000
5)	ಬ್ಲೇಡಿನ ಕುಡ	5,00	1200	250	1,25,000	3,00,000
	ಒಟ್ಟು				7,35,000	21,90,000

ಆರ್ಥಿಕದಾಯಕತೆಯ ಪಟ್ಟಿಕೆಳಗೆ ಕೊಡಲಾಗಿದೆ. ಈ ಎಲ್ಲಾ ಯಂತ್ರಗಳ ನಿರ್ಮಾಣಕ್ಕೆ ಸುಮಾರು 27.3 ಲಕ್ಷ ರೂಪಾಯಿಗಳ ಮೂಲ ಬಂಡವಾಳ, 7.35 ಲಕ್ಷ ರೂಪಾಯಿಗಳ ವಾರ್ಷಿಕ ದುಡಿಯುವ ಬಂಡವಾಳ ಬೇಕಾಗಿದ್ದು ಮೂಲಬಂಡವಾಳದಲ್ಲಿ ಭೂಮಿ, ಕಟ್ಟಡಗಳೂ ಸೇರಿದಂತೆ ಸುಮಾರು ರೂ.8.86 ಲಕ್ಷವನ್ನು ಈಗಾಗಲೇ ತಾನು ಭರಿಸಿರುವುದಾಗಿ ತಿಳಿಸುತ್ತಾರೆ. ಇನ್ನು ಅಗತ್ಯವಿರುವ ರೂ.18.51 ಲಕ್ಷ ಹಣ ಯಾವುದಾದರೂ ಸಾಲದ ರೂಪದಲ್ಲಿ ದೊರೆತಲ್ಲಿ ಅದರಿಂದ ನಡಕಟ್ಟನ್ ತನ್ನ ವಿಶ್ವಶಾಂತಿ ತೋಟವನ್ನು 22 ಲಕ್ಷ ರೂಪಾಯಿಗಳ ಆದಾಯ ಸಿಗುವ ಒಂದು ದೊಡ್ಡ ಕೃಷಿ ಆಧಾರಿತ ಯಂತ್ರಗಳ ಉತ್ಪಾದನೆಯ ಫರ್ಮ್ ಆಗಿ ಪರಿವರ್ತಿಸುವುದಾಗಿ ದೃಢ ವಿಶ್ವಾಸದಿಂದ ಹೇಳುತ್ತಾರೆ. ಕೊಟ್ಟ ಸಾಲದ ಹಣವನ್ನೂ ಶೇ.15.50ರ ಬಡ್ಡಿಯಲ್ಲಿ 10 ವರ್ಷದೊಳಗೆ ಮರು ಪಾವತಿ ಮಾಡುವ ಖಾತರಿಯನ್ನೂ ಕೊಡುತ್ತಾರೆ.

ಜೊತೆಗೆ ನಡಕಟ್ಟನ್‌ರಲ್ಲಿ ಸೇವಾ ಮನೋಭಾವನೆ ಮತ್ತು ಆಧ್ಯಾತ್ಮಿಕ ಪ್ರವೃತ್ತಿ ಹೇಗೆ ಮೇಳೈಸಿದೆ ಎನ್ನುವುದನ್ನು ಆತ ಮನೆಯ ಗೋಡೆಯ ಮೇಲೆ ಸುಂದರವಾಗಿ ತನ್ನ ಬದುಕಿನ ಗುರಿಯ ಬಗ್ಗೆ ಈ ಕೆಳಗಿನಂತೆ ಬರೆದಿಟ್ಟಿರುವುದು ಎತ್ತಿತೋರಿಸುತ್ತದೆ.

"ಕೃಷಿಯಲ್ಲಿ ಏನನ್ನಾದರೂ ಒಂದು ಆವಿಷ್ಕಾರ ಮಾಡಬೇಕೆಂಬ ಹಠ ನನ್ನ ಸರ್ವನಾಶಮಾಡಿತು. ಸಂಪೂರ್ಣ ಆಸ್ತಿ ಕಳೆದುಕೊಂಡಾಗ ಎದೆ ಒಡೆದು ನೀರಾಯಿತು. ಆತ್ಮಹತ್ಯೆಯ ಯೋಚನೆ ನನ್ನ ಹೃದಯಕ್ಕೆ ತಟ್ಟುತ್ತಿತ್ತು. ಕೃಷಿಯ ಬಗ್ಗೆ ಇಷ್ಟು ವರ್ಷಗಳಿಂದ ಮಾಡಿದ ಚಿಂತನೆ ಉಳಿಯಬೇಕೆಂಬ ಒಂದೇ ಕಾರಣಕ್ಕೆ ಬದುಕುವ ಧೈರ್ಯ ಮಾಡಿಕೊಂಡೆ. ದೇವರು ನನ್ನ ಎಲ್ಲಾ ಕಷ್ಟಗಳಿಂದ ಮುಕ್ತಗೊಳಿಸುವ ಸಮಯ ತಂದಿದ್ದಾನೆ. ಉಳಿದ ಆಯುಷ್ಯವನ್ನು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರ ಹಿತರಕ್ಷಣೆಗಾಗಿ ಕೃಷಿ ಸಂಶೋಧನೆಗಳಿಗಾಗಿ ಮುಡುಪಿಡಬೇಕೆಂದು ತೀರ್ಮಾನಿಸಿದ್ದೇನೆ.

ವಿಶ್ವಶಾಂತಿ ಮತ್ತು ಆತ್ಮಹತ್ಯೆ ಸಂರಕ್ಷಣಾ ಸಮಿತಿ ರಚಿಸಬೇಕೆಂದಿದ್ದೇನೆ. ಈ ಸಂಸ್ಥೆಗೆ ಪ್ರತಿ ವರ್ಷ ಬರುವ 1700 ಹುಣಸೆ ಗಿಡಗಳ ಲಕ್ಷಾಂತರ ರೂಪಾಯಿಗಳ ಆದಾಯವನ್ನು ದಾನವಾಗಿ ನಾನಿರುವವರೆಗೆ ನೀಡಬೇಕೆಂದು ತೀರ್ಮಾನಿಸಿದ್ದೇನೆ. ಸಸಿ ನೆಟ್ಟ ಮೇಲೆ ಮರವಾಗಲೇ ಬೇಕು ಎಂಬಂತೆ ಈ ಸಂಸ್ಥೆಯಿಂದ ತುಂಬ ಜನ ಬದುಕುವುದರಲ್ಲಿ ಯಾವುದೇ ಸಂದೇಹವಿಲ್ಲ".

ತಲೆಕೆಳಗಾಗಿರುವ ಲೆಕ್ಕಾಚಾರ

ಆದರೆ ವಾಸ್ತವದಲ್ಲಿ ಈ ಎಲ್ಲಾ ಲೆಕ್ಕಾಚಾರಗಳು ತಲೆಕೆಳಗಾಗಿ ಇಂದು ನಡಕಟ್ಟನ್ ಲಕ್ಷಾಂತರ ರೂಪಾಯಿಗಳ ಸಾಲದ ಹೊರೆಯಲ್ಲಿ ಬೀಳುವಂತಾಗಿರುವರು. ಈ ಎಲ್ಲಾ ಯಂತ್ರಗಳ ಶೋಧನೆಯಿಂದಾಗಿ ತಾವು ಇಂದು 20 ಲಕ್ಷ ರೂಪಾಯಿಗಳ ಸಾಲದ ಹೊರೆ ಹೊರುವಂತಾಗಿರುವುದಾಗಿ ನಡುಕಟ್ಟನ್ ತಿಳಿಸುತ್ತಾರೆ. ಹಾಗೇ, ಇವರ ತಂದೆಯಿಂದ ಬಂದ 64 ಎಕರೆಗಳಲ್ಲಿ ಮುಕ್ಕಾಲು ಪಾಲು ಭೂಮಿ ಈಗಾಗಲೇ ಸಾಲಗಾರರ ಪಾಲಾಗಿರುತ್ತದೆ. ಇವರ ಫಾರಂನ್ನು ರಾಜಕಾರಣಿಗಳಿಂದ ಹಿಡಿದು ಮಠಾಧಿಪತಿಗಳು, ಕೃಷಿವಿಜ್ಞಾನಿಗಳು, ಕೃಷಿ ತೋಟಗಾರಿಕೆ ಇಲಾಖೆಯವರು, ರೈತರು, ವಿದ್ಯಾರ್ಥಿಗಳೆಲ್ಲಾ ಭೇಟಿ ನೀಡಿ ಹೋಗಿರುವರು. ಬರುವ ಎಲ್ಲರಿಂದ ಭರವಸೆ ಮಾತ್ರ ಯಥೇಚ್ಛವಾಗಿ ನಡಕಟ್ಟನ್‌ಗೆ ದೊರೆಯುವಂತಾಯ್ತು. ಪತ್ರಿಕೆ, ಸುದ್ದಿ ಮಾಧ್ಯಮಗಳಂತೂ ಒಂದರ ಮೇಲೊಂದರಂತೆ ಪೈಪೋಟಿ ನಡೆಸಿ ನಡಕಟ್ಟನ್ ಗುಣಗಾನ ಮಾಡಿ ಈತನ ಸಂಶೋಧನೆಗಳ ಬಗ್ಗೆ ಅಬ್ಬರದ ಪ್ರಚಾರ ನೀಡಿದವು. ತನ್ನ ಸಂಶೋಧನೆಗಳನ್ನು ಪೇಟೆಂಟ್ ಮಾಡಿಸುವ ಬಗ್ಗೆ ಚಿಂತಿಸಿ, ದೆಹಲಿಯವರೆಗೂ ಓಡಾಡಿ ಬಂದರೂ ಏನೂ ಪ್ರಯೋಜನವಾಗಲಿಲ್ಲ. ತನ್ನೆಲ್ಲಾ ಶೋಧನೆಗಳನ್ನು ಕೃಷಿ ಆಧಾರಿತ ಕೈಗಾರಿಕೆ ರೂಪದಲ್ಲಿ ಅಭಿವೃದ್ಧಿ ಪಡಿಸಿ ಮಾರುಕಟ್ಟೆ ಏರ್ಪಡಿಸಲು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಿಗೆ ಒಂದು ಮನವಿಪತ್ರ ಸಲ್ಲಿಸಿರುವರು. ಕೊನೆಯ ಪ್ರಯತ್ನವಾಗಿ ಇನ್‌ಫೋಸಿಸ್ ಪ್ರತಿಷ್ಠಾನದ ಧರ್ಮದರ್ಶಿಗಳಾದ ಶ್ರೀಮತಿ ಸುಧಾ ಮೂರ್ತಿಯವರ ಸಹಾಯದ ಮೊರೆ ಹೊಕ್ಕಿರುವರು. ಎಲ್ಲೆಡೆಯಿಂದ ನಿರಾಸಾದಾಯಕ ಪ್ರತಿಕ್ರಿಯೆ ನೋಡಿ ಬೇಸತ್ತು ಕೆಲ ದಿನಗಳ ಹಿಂದೆ ಕುಟುಂಬ ಸಮೇತ ರಾಜ್ಯದ ಕೃಷಿ ಮಂತ್ರಿಗಳ ನಿವಾಸದ ಎದುರು ಉಪವಾಸ ಸತ್ಯಾಗ್ರಹ ಹೂಡುವ ಮಟ್ಟಕ್ಕೂ ಹೋಗಿರುವರು. ಅಂತಿಮ ಅಸ್ತ್ರವಾಗಿ, ನಡಕಟ್ಟನ್ ಆತ್ಮಹತ್ಯೆಯ ಹುಸು ಬೆದರಿಕೆಯನ್ನೂ ಹಾಕುವಂತಾಗಿರುವರು. ಅಂದ ಮೇಲೆ ನಮ್ಮ ಸರ್ಕಾರ ಮತ್ತು ಸಮಾಜ ಈ ನಡಕಟ್ಟನ್ ನೆರವಿಗೆ ಬರುವ ಸಾಧ್ಯತೆಗಳು ಏನಿವೆಯೆಂಬುದನ್ನು ಪರಿಶೀಲಿಸುವುದು ಅತೀ ಅಗತ್ಯ.

ಸುಸ್ಥಿರ ಅಭಿವೃದ್ಧಿಗೊಂದು ಸೂಕ್ತ ಮಾದರಿ

ನಡಕಟ್ಟನ್ ಇಂದು ಒಬ್ಬ ಬರಿದೇ ವ್ಯಕ್ತಿಯಲ್ಲ. ಈತ ಮತ್ತು ಈತನ ಕೃಷಿ ಪ್ರಯೋಗ ಈ ದೇಶದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೇ ಒಂದು ಅತ್ಯಂತ ಸೂಕ್ತವಾದ ಮಾದರಿಯಾಗಬಹುದಾಗಿದೆ. ಈತನ ನೆರವಿಗೆ ಬರುವುದಿರಲಿ, ನಡಕಟ್ಟನ್ ಪ್ರಯೋಗ, ಬದುಕಿನ ರೀತಿಯನ್ನು ನಮ್ಮ ರೈತರ ಏಳಿಗೆಗೆ ಸೂಕ್ತ ರೀತಿಯಲ್ಲಿ ಬಳಸಿಕೊಳ್ಳದಿದ್ದಲ್ಲಿ ಅದೊಂದು ದೊಡ್ಡ ದುರಂತ ಮಾತ್ರವಲ್ಲ, ಮೂರ್ಖತನವಾದೀತು.

ಈ ನಿಟ್ಟಿನಲ್ಲಿ ಅವಶ್ಯಕವಾಗಿ ನಾವಿಂದು ಚಿಂತಿಸಬೇಕಾಗಿರುವ ಕೆಲ ಮಾರ್ಗೋಪಾಯಗಳೆಂದರೆ:

ಅ) ನಡಕಟ್ಟನ್ ಕಂಡುಹಿಡಿದಿರುವ ಹಲವಾರು ಯಂತ್ರಗಳು, ಸಂಶೋಧನೆಗಳಲ್ಲಿ ಕೆಲವನ್ನಾದರೂ ಅಭಿವೃದ್ಧಿ ಪಡಿಸಿ ಅಧಿಕ ಉತ್ಪಾದನೆ ಮಾಡಿ ಮಾರಾಟ ಮಾಡಬಹುದಾಗಿದೆ. ಈ ಬಗ್ಗೆ ಸುಮಾರು 18.5 ಲಕ್ಷ ರೂಪಾಯಿಗಳ ಸಾಲದ ಒಂದು ಯೋಜನೆಯನ್ನು ರಾಜ್ಯ ಸರ್ಕಾರಕ್ಕೆ

ಈಗಾಗಲೇ ಅರ್ಪಿಸಿರುವರು. ಸರ್ಕಾರ ಮತ್ತು ಸಾರ್ವಜನಿಕ ಮೂಲದ ಹಣಕಾಸು ಸಂಸ್ಥೆಗಳು ಇವರ ಯೋಜನೆಯನ್ನು ಪರೀಕ್ಷಿಸಿ ನೆರವು ನೀಡಲು ಮುಂದಾಗಬೇಕಾಗಿದೆ.

ಇದಕ್ಕೆ ಪೂರ್ವಭಾವಿಯಾಗಿ ಇವರ ಶೋಧನೆಗಳಿಗೆ, ಯಂತ್ರೋಪಕರಣಗಳಿಗೆ ಮಾರುಕಟ್ಟೆ ಯಾವ ರೂಪದಲ್ಲಿದೆ, ಎಷ್ಟು ಬೇಡಿಕೆ ಬರಬಹುದು ಇತ್ಯಾದಿ ವಿಚಾರಗಳ ಬಗ್ಗೆ ಒಂದು ಮಾರುಕಟ್ಟೆ ಸಮೀಕ್ಷೆ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಭಾರತೀಯ ನಿರ್ವಹಣಾ ಸಂಸ್ಥೆಗಳಾಗಲೀ ಅಥವಾ ಖಾಸಗಿ ಮೂಲದ ಮಾರುಕಟ್ಟೆ ಸಮೀಕ್ಷೆ ಮತ್ತು ಸಂಶೋಧನಾ ಸಂಸ್ಥೆಗಳ ನೆರವನ್ನಾಗಲೀ ನಡಕಟ್ಟನ್‌ಗೆ ಸಿಗುವಂತೆ ಮಾಡಬೇಕಾಗಿದೆ.

ಆ) ಅಹಮದಾಬಾದಿನ ಭಾರತೀಯ ನಿರ್ವಹಣಾ ಸಂಸ್ಥೆಯ ಪ್ರೊಫೆಸರ್ ಅನಿಲ್ ಗುಪ್ತಾರವರು ತಳಮಟ್ಟದ ಜನರ ಅನುಶೋಧನೆಗಳ ಪರವಾಗಿ ಹೋರಾಡುತ್ತಿರುವ ವ್ಯಕ್ತಿ. ಇವರ ನೇತೃತ್ವದಲ್ಲಿ ಗುಜರಾತ್ ಸರ್ಕಾರ ಗ್ಯಾನ್ (GIAN) ತಳಮಟ್ಟದ ಅನುಶೋಧನೆಗಳ ಅಭಿವೃದ್ಧಿ ಜಾಲ (Grassroots Innovations Augmentation Network) ವನ್ನು ಹುಟ್ಟು ಹಾಕಿದ್ದು ಇದರ ಮೂಲಕ ಈಗಾಗಲೇ ಇಂತಹ ತಳಮಟ್ಟದ ಜನರ ಶೋಧನೆಗಳನ್ನು ವಾಣಿಜ್ಯಗೊಳಿಸುವ ಕಾರ್ಯ ಶುರುವಾಗಿರುತ್ತದೆ. ಗ್ಯಾನ್‌ನ ಈ ಸಹಾಯ ನಡಕಟ್ಟನ್‌ಗೂ ಸಿಗುವಂತಾಗಬೇಕಾಗಿದೆ.

ಇ) ನಡಕಟ್ಟನ್‌ನ ಎಲ್ಲಾ ಅನುಶೋಧನೆಗಳು ಭೌದ್ಧಿಕ ಸನದಿನ ಹಕ್ಕು (Intellectual Property Rights) ಅಥವಾ ಪೇಟೆಂಟ್‌ಗೆ ಹೇಳಿಮಾಡಿಸಿರುವಂತಹ ವಿಚಾರಗಳಾಗಿವೆ. ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಈ ರೀತಿಯ ತಳಮಟ್ಟದ ಜನರ ಅನುಶೋಧನೆಗಳಿಗೆ ಪೇಟೆಂಟ್ ದೊರಕಿಸಲು ಸಹಾಯ ಮಾಡುತ್ತಿದ್ದು ಇದು ನಡಕಟ್ಟನ್‌ರ ಎಲ್ಲಾ ಶೋಧನೆಗಳಿಗೂ ದೊರೆಯುವಂತಾಗಬೇಕಾಗಿದೆ. ಇದರ ಜೊತೆಗೆ ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಈ ರೀತಿಯ ಅನುಶೋಧಕರಿಗೆ ಆರ್ಥಿಕ ಸಹಾಯ ನೀಡಿ ಅವರನ್ನು ಉದ್ದಿಮೆಗಾರರನ್ನಾಗಿ ಮೇಲೆತ್ತುವ ಕಾರ್ಯಕ್ರಮ (Technopreneur Promotion Programme-Tepp) ಒಂದನ್ನು ಶುರುಮಾಡಿರುತ್ತಾದೆ. ನಡಕಟ್ಟನ್‌ರ ಎಂಟು ಶೋಧನೆಗಳಿಗೆ ಸುಮಾರು 8.72 ಲಕ್ಷ ರೂಪಾಯಿಗಳ ಧನ ಸಹಾಯ ಕೇಳುವ ಯೋಜನೆಯೊಂದನ್ನು ಕರ್ನಾಟಕದ ಬೈಫ್ (BAIF) ಸಂಸ್ಥೆ ನಡಕಟ್ಟನ್ ಪರವಾಗಿ ಈಗಾಗಲೇ ತಯಾರಿಸಿ ಇವರ ಮೂಲಕ ಕೇಂದ್ರ ಸರ್ಕಾರಕ್ಕೆ ಕಳೆದ ಆಗಸ್ಟ್‌ನಲ್ಲೇ ಸಲ್ಲಿಸಿರುತ್ತದೆ. ಈ ಸಹಾಯ ನಡಕಟ್ಟನ್‌ರಿಗೆ ಎಷ್ಟು ಜಾಗೃತೆ ದೊರೆತರೂ ಅಷ್ಟು ಅನುಕೂಲ.

ಈ) ತಳಮಟ್ಟದ ಜನರ ಸಂಶೋಧನೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ಮೇಲೆ ಚರ್ಚಿಸಿರುವ ಎಲ್ಲಾ ಉದ್ದೇಶಗಳನ್ನು ಈಡೇರಿಸಲು ಕೇಂದ್ರ ಸರ್ಕಾರದ ಸಹಯೋಗದಿಂದ ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation) ಎಂಬ ಮತ್ತೊಂದು ಸಂಸ್ಥೆಯೂ ಪ್ರಾರಂಭವಾಗಿರುತ್ತದೆ. ಇದರ ವತಿಯಿಂದ, ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಗಳನ್ನು ಈ ವರ್ಷದಿಂದ ಏರ್ಪಡಿಸಿ ಆಕರ್ಷಕ ಬಹುಮಾನಗಳನ್ನೂ ಇಡಲಾಗಿರುತ್ತದೆ. ಇದರ ಮೂಲಕ ಆಯ್ದ ಸೂಕ್ತ ಶೋಧನೆಗಳನ್ನು ಉದ್ದಿಮೆಗಳನ್ನಾಗಿ ಪರಿವರ್ತಿಸುವುದು ಜೊತೆಗೆ ಅವುಗಳಿಗೆ ಭೌದ್ಧಿಕ ಸನದಿನ ಹಕ್ಕನ್ನು ದೊರಕಿಸಿಕೊಡುವುದೂ ಈ ಪ್ರತಿಷ್ಠಾನದ ಗುರಿಯಾಗಿರುತ್ತದೆ. ನಡಕಟ್ಟನ್‌ರ ಎಲ್ಲಾ ಶೋಧನೆಗಳೂ ಈ ನಿಟ್ಟಿನಲ್ಲಿ ಅತ್ಯಂತ ಸೂಕ್ತವಾಗಿದ್ದು ಅವುಗಳನ್ನು ಈ ಸ್ಪರ್ಧೆಗೆ ಒಳಪಡಿಸುವತ್ತ 'ಹಿತ್ತಲಗಿಡ' ಪ್ರಯತ್ನ ನಡೆಸುತ್ತಿದೆ.

ಉ) ಇವೆಲ್ಲಕ್ಕಿಂತ ಮುಖ್ಯವಾಗಿ ರಾಜ್ಯ ಸರ್ಕಾರದ ಕೃಷಿ, ತೋಟಗಾರಿಕೆ, ಅರಣ್ಯ ಮತ್ತಿತರ ಸಂಬಂಧಿಸಿದ ಅಭಿವೃದ್ಧಿ ಇಲಾಖೆಗಳು ಶಿಕ್ಷಣ, ತರಬೇತಿ, ತಂತ್ರಜ್ಞಾನ ವರ್ಗಾವಣೆ, ವಿಸ್ತರಣೆಗಳ ಮೂಲಕ ರೈತ ಸಮುದಾಯದ ಮನ ಪರಿವರ್ತನೆಯ ಆ ಮಹತ್ ಕಾರ್ಯದಲ್ಲಿ ಈ ನಡಕಟ್ಟನ್‌ನಂತಹವರನ್ನು ಬಳಸಿಕೊಳ್ಳುವ ವಿಚಾರ. ಒಬ್ಬ ರೈತ ಈತನ ವಿಶ್ವಶಾಂತಿ ಫಾರಂನಲ್ಲಿ ಒಂದು ದಿನ ಕಳೆದರೆ ಆತನ ಮೇಲಾಗುತ್ತಿರುವ ಗುಣಾತ್ಮಕ ಪರಿಣಾಮ ಹೇಳಲು ಅಸಾಧ್ಯ. ಸಾವಯವ ಕೃಷಿ, ಕೃಷಿ ಅರಣ್ಯ, ನೀರು ಸಂರಕ್ಷಣೆ, ಕೃಷಿ ಹೊಂಡ ಇತ್ಯಾದಿ ಸುಸ್ಥಿರ ಕೃಷಿ ತಂತ್ರಜ್ಞಾನ ವಿಚಾರಗಳ ಮೇಲೆ ಸರ್ಕಾರದ ಇಲಾಖೆಗಳು ವರ್ಷಗಟ್ಟಲೆ ಮಾಡುವ ವಿಸ್ತರಣೆ ಪ್ರಯತ್ನ ನಡಕಟ್ಟನ್ ಫಾರಂನಲ್ಲಿ ಒಂದು ದಿನದೊಳಗೆ ಫಲ ಕಾಣುವಂತಾಗುತ್ತದೆ. ನಮ್ಮ ಕೃಷಿ ಇಲಾಖೆಯಂತೂ ಈ ನಿಟ್ಟಿನಲ್ಲಿ 'ಕೃಷಿ ಮಿತ್ರ'ದಂತಹ ಮಹತ್ವದ ಯೋಜನೆಯನ್ನು ಹಮ್ಮಿಕೊಂಡಿದೆ. ನಡಕಟ್ಟನ್‌ರಂತಹ ಸಹಜ ಕೃಷಿ ಮಿತ್ರರು ನಮಗೆ ಬೇರೆಲ್ಲೂ ಸಿಗಲಾರರು.

ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳು ಸುಸ್ಥಿರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ತಂತ್ರಜ್ಞಾನಗಳ ವರ್ಗಾವಣೆಗೆ ಮಾಡುತ್ತಿರುವ ವೆಚ್ಚವನ್ನು ನಡಕಟ್ಟನ್‌ನಂತಹ ರೈತರಿಗೆ ನೀಡಿ, ಅವರ ಫಾರಂನ್ನು ಅಭಿವೃದ್ಧಿಪಡಿಸಿ, ನಾಡಿನ ರೈತರು ಅಲ್ಲಿಗೆ ಭೇಟಿ ನೀಡಿ, ಶಿಕ್ಷಣ ಪಡೆಯುಂತಹ ವ್ಯವಸ್ಥೆ ಏರ್ಪಾಟಾಗುವಂತೆ ತಕ್ಷಣ ಕ್ರಮ ಕೈಗೊಳ್ಳುವುದು ಅತ್ಯಂತ ಸೂಕ್ತವಾಗಿರುತ್ತದೆ.

ಊ) ಹುಡುಕಿದರೆ ರಾಜ್ಯದ ಮೂಲೆ ಮೂಲೆಯಲ್ಲಿ ನಡಕಟ್ಟನ್ ತರಹದ ಹಲವು ಮಹತ್ವದ ರೈತರು ಸಿಗುತ್ತಾರೆ. ಇವರು ನಾಡಿನ ಗ್ರಾಮೀಣ ಪ್ರಗತಿ ಮತ್ತು ಪರಂಪರೆಗಳ ರುವಾರಿಗಳು. ಇಂತಹ ರೈತರ ನೆರವಿಗೆ ಬಂದು ಅವರನ್ನು ಅಭಿವೃದ್ಧಿಯಲ್ಲಿ ಬಳಸಿಕೊಳ್ಳಲು ರಾಜ್ಯ ಸರ್ಕಾರ ಒಂದು ಪ್ರತ್ಯೇಕ ಪ್ರತಿಷ್ಠಾನ ಸ್ಥಾಪಿಸಿ, ಕೈಗಾರಿಕೋದ್ಯಮಿಗಳು, ಉದ್ದಿಮೆದಾರರು ಮತ್ತೆಲ್ಲೆಡೆಯಿಂದ ಸಂಪನ್ಮೂಲ ಕ್ರೋಢಿಕರಿಸಲು ಮುಂದಾಗಬೇಕಾಗಿದೆ. ನಮ್ಮ ಮಾನ್ಯ ಕೃಷಿ ಸಚಿವರಾದ ಶ್ರೀ ಟಿ.ಬಿ. ಜಯಚಂದ್ರರವರು ಈ ನಿಟ್ಟಿನಲ್ಲಿ ಮುಂದಾಳತ್ವ ವಹಿಸಿದರೆ ಅತ್ಯಂತ ಸೂಕ್ತವಾಗುತ್ತದೆ.

ದೇಶೀಯ ಜಾಣ್ಮೆ

ಮೂಡೆ ಕಟ್ಟಿ ಬೀಜ ಸಂಗ್ರಹಣೆ

ಒಣಗಿದ ಭತ್ತದ ಹುಲ್ಲನ್ನು ಸ್ವಲ್ಪನೆನೆಸಿ, ಆ ಹುಲ್ಲನ್ನು ಹಗ್ಗದಂತೆ ಸುತ್ತುವುದು (ಇದನ್ನು ನೆಲ್ಲುಹುಲ್ಲಿನ ಪೆಂಟೆ ಎಂದು ಹೇಳುತ್ತಾರೆ), ಈ ಪೆಂಟೆಯನ್ನು ಮಾಡಿಕೊಂಡ ಮೇಲೆ 25 ಸೇರು ಹಿಡಿಯುವಂತಹ ಮಡಕೆ ಸುತ್ತಲೂ ಭತ್ತದ ಹುಲ್ಲನ್ನು ಸುತ್ತಿ, ಅದರ ಮೇಲೆ ಪೆಂಟೆ ಹೊಸೆದಿರುವಂತಹ ಹುರಿಯನ್ನು ಮಡಕೆಯ ಸುತ್ತಲೂ ಸುತ್ತಿಕೊಂಡು ಬರಬೇಕು. ಮಡಿಕೆ ತೆಗೆದ ನಂತರ ಧಾನ್ಯಗಳನ್ನು ಅದಕ್ಕೆ ಹಾಕಬೇಕು. ಹಾಕುವಾಗ ಬೇವು, ಲಕ್ಕಿ, ಬಜೆ, ಆಡುಸೋಗೆ, ಮೆಣಸು ಇಂತಹವುಗಳನ್ನು ಹಾಕಿ ಭದ್ರವಾಗಿ ಪೆಂಟೆಯನ್ನುಸುತ್ತಿ ಅದನ್ನು ದೊಣ್ಣೆಯಿಂದ ಬಡಿದು ಭದ್ರವಾಗಿ ಪೆಂಟೆಯನ್ನು ಕೂರಿಸಿ, ಹುರಿಯಿಂದ ಕಟ್ಟುವುದು, ಈಗ ಮೂಡೆಯಾಗುತ್ತದೆ. ಈ ಮೂಡೆಯನ್ನು ಎಲ್ಲಿಗೆ ಬೇಕಾದರೂ ವರ್ಗಾಯಿಸಬಹುದು. ಒಂದು ಸಾರಿ ಮೂಡೆಗೆಂದು ಹೊಸೆದ ಪೆಂಟೆಯನ್ನು 5–6 ಸಾರಿ ಬಳಸಬಹುದು.

-ಸಂಗ್ರಹ: ಚಿತ್ರಶೇಖರ ದೊಡ್ಡ ಹೆಜ್ಜಾಜಿ

ಹೂ ಉದುರುವುದನ್ನು ತಪ್ಪಿಸಲು:

ಮೆಣಸು, ಟೊಮೊಟೊ ಗಿಡಗಳಲ್ಲಿ ಬಿಟ್ಟ ಹೂಗಳು ಕಾಯಿಯಾಗದೆ ರೈತನನ್ನು ನಿರಾಸೆಗೊಳಿಸುವುದುಂಟು. ಗಿಡದಲ್ಲಿನ ಹೂಗಳೆಲ್ಲಾ ಕಾಯಿಯಾದರೆ ಎಷ್ಟೊಂದು ಲಾಭ. ಹೀಗೆಂದು ಯೋಚಿಸಿದ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ರೈತ ರಾಮಚಂದ್ರ ಗೌಡರಿಗೆ ಹೊಳೆದದ್ದು ಕಹಿಬೇವಿನ ಬೀಜದ ಪುಡಿ ಮತ್ತು ಸಗಣಿ. ಎರಡರ ಮಿಶ್ರಣ ಮಾಡಿ ಗಿಡಕ್ಕೆ ಸಿಂಪಡಿಸಿದಾಗ ಹೂ ಉದುರದೆ, ಹೂಗಳೆಲ್ಲಾ ಕಾಯಿಯಾಗಿ ಇಳುವರಿ ದುಪ್ಪಟ್ಟು. ಹತ್ತು ಕೆ.ಜಿ. ಬೇವಿನ ಬೀಜದಿಂದ ಮಾಡಿದ ಪುಡಿ ಹಾಗೂ ಹತ್ತು ಕೆ.ಜಿ. ಸಗಣಿಯಿಂದ ಮಾಡಿದ ದ್ರಾವಣ ಒಂದು ಎಕರೆ ಬೆಳೆಗೆ ಸಿಂಪಡಿಸಲು ಸಾಕಾಗುತ್ತದೆ ಎನ್ನುವುದು ಅವರ ಅನುಭವ.

ಖರ್ಜೂರದಲ್ಲಿ ಗುಣಮಟ್ಟದ ಅಭಿವೃದ್ಧಿ:

ಉದುರುವ ಹೂವನ್ನು ಉಳಿಸಿ, ಗಿಡವೊಂದರಲ್ಲಿ ಹೆಚ್ಚು ಕಾಯಿ, ಒಟ್ಟಾರೆ ಹೆಚ್ಚು ಇಳುವರಿ ಪಡೆಯುವುದು ತಮಿಳುನಾಡಿನ ರೈತರ ಯೋಚನೆ ಯಾದರೆ, ಇದಕ್ಕೆ ವ್ಯತಿರಿಕ್ತವಾಗಿ ಖರ್ಜೂರದ ಗಿಡವೊಂದರಲ್ಲಿ ಕಡಿಮೆ ಹಣ್ಣು ಆದರೂ ಅಧಿಕ ಗಾತ್ರ ಹಾಗೂ ಉತ್ಕೃಷ್ಟ ಗುಣಮಟ್ಟದ ಹಣ್ಣು ಪಡೆಯುವ ಉಪಾಯ ಗುಜರಾತಿನ ಬೂಜ ಜಿಲ್ಲೆಯ ರೈತ ಕಾಂತಿಲಾಲ ದರ್ಜಿಭಾಯಿ ಪಟೇಲ್‌ರವರದ್ದು. ಖರ್ಜೂರದ ಮರದಲ್ಲಿನ ಹೂಗಳಲ್ಲಿ ಶೇಕಡಾ 50 ಭಾಗದಷ್ಟು ಹೂಗಳನ್ನು ಉದುರಿಸಿ ತೆಗೆದುಬಿಡುತ್ತಾರೆ. ಇನ್ನುಳಿದ ಶೇಕಡ 50 ರಷ್ಟು ಹೂಗಳು ದೊಡ್ಡ ಗಾತ್ರ, ಹೆಚ್ಚು ಸಿಹಿಯಾದ ಹಣ್ಣುಗಳನ್ನು ಬಿಡುತ್ತವೆ ಎನ್ನುವುದು ಇವರ ಅಂಬೋಣ. ಇದು ಅವರು ತಮ್ಮ ತಂದೆಯಿಂದ ಕಲಿತ ಪಾಠವಂತೆ.

ಮಣ್ಣು ಸಂರಕ್ಷಣೆ:

ಮಳೆಯಲ್ಲಿ ಕೊಚ್ಚಿ ಹರಿದು ಬರುವ ಮೇಲ್ಮಣ್ಣುಹರಿದು ಹಾಳಾಗಿ ಹೋಗುತ್ತದೆ. ಹೀಗೆ ವ್ಯರ್ಥವಾಗಿ ಕೊಚ್ಚಿಹೋಗುವ ಬದಲು ವ್ಯವಸಾಯದ ಜಮಾನಿನ ಬಳಕೆಗೆ ಬಳಸಿದರೆ, ತಮ್ಮ ಜಮೀನು ಫಲವತ್ತಾಗುವುದು ಖಂಡಿತ ಎಂದು ನಿರ್ಧರಿಸಿದ ಗುಜರಾತಿನ ಮೇಘರಾಜ ತಾಲ್ಲೂಕಿನ ಕಲಿಯಾಕುವ ಗ್ರಾಮದ ರೈತ ಮಹೇಶಭಾಯಿ ಲಕಭಾಯಿ ಹೂಡಿದ ಉಪಾಯ ಹೀಗಿದೆ. ಬೆಟ್ಟದಿಂದ ಹರಿದು ಬರುವ ನೀರಿಗೆ ಕಾಲುವೆ ಮಾಡಿ ಫಲವತ್ತಾದ ಮಣ್ಣ ಹೊತ್ತು ತರುವ ನೀರು ಸೀದಾ ತನ್ನ ಜಮಾನಿಗೇ ಬರುವಂತೆ ಮಾಡಿದ್ದಾರೆ. ತಮ್ಮ ಭೂಮಿಗೆ ಆಗಿ ಹೆಚ್ಚಾದ ನೀರು ಮತ್ತೆ ಮುಂದಿನವರ ಜಮೀನಿಗೆ ಹೀಗೆ ಹಂತ ಹಂತವಾಗಿ ಸಂಪೂರ್ಣ ಉಪಯೋಗ.

ನಾಡಿನಾ ಮಣ್ಣಿಗೆ ಕಾಡಿನಾ ಸೊಪ್ಪು:

ಗುಜರಾತಿನ ಬನಸ್ಕಾಂತ ಜಿಲ್ಲೆಯ ರೈತ ಕದಬಾಯಿ ಕೇಶಭಾಯಿ ಕಾಡಿನಲ್ಲಿ ಮರದಿಂದ ಉದುರಿ ಬಿದ್ದ ರಾಶಿ ಎಲೆಗಳನ್ನು ಗುಡಿಸಿ ತಂದು ಗೋಧಿ ಬೆಳೆ ತೆಗೆದು ಮುಗಿದು ಖಾಲಿ ಬಿದ್ದಿದ್ದ ಜಮಾನಿನಲ್ಲೆಲ್ಲಾ ಹರಡಿದರು. ಎಲೆಗಳೆಲ್ಲಾ ಚೆನ್ನಾಗಿ ಒಣಗಿದ ನಂತರ, ಅದರ ಜೊತೆಗೆ ಹೊಲದಲ್ಲಿ ಅಳಿದುಳಿದ ಬೆಳೆ ಅವಶೇಷಗಳು, ಕಳೆ ಎಲ್ಲವನ್ನೂ ಒಟ್ಟಾಗಿ ಗುಡಿಸಿ ರಾಶಿ ಮಾಡಿ ಸುಟ್ಟು ಬೂದಿ ಮಾಡುತ್ತಾರಂತೆ. ಈ ಬೂದಿಯನ್ನು ಹೊಲದಲ್ಲಿ ಹರಡಿ ಮಣ್ಣಿನಲ್ಲಿ ಚೆನ್ನಾಗಿ ಮಿಶ್ರ ಮಾಡಿದರೆ, ಮಣ್ಣಿನ ಫಲವತ್ತತೆ ಉತ್ತಮ ಗೊಳ್ಳುವುದಂತೆ. ಈ ಪದ್ಧತಿ ಗುಜರಾತಿನ ದಾಂತೆ ಪ್ರಾಂತ್ಯದ ಹಲವಾರು ರೈತರು ಅನುಸರಿಸುತ್ತಿದ್ದಾರೆ.

ಮೂಲ: ಹನೀಬೀ 11(1) 2000

ತೊಗರಿ ಕಾಯಿಕೊರಕ ನಿಯಂತ್ರಿಸಲು

ತೊಗರಿ ಬೆಳೆಗೆ ಕಾಯಿಕೊರಕ ಹುಳದ ಭಾದೆಯಿಂದ ಬೇಸತ್ತ ನಮ್ಮ ಉತ್ತರ ಕರ್ನಾಟಕದ ರೈತರು ಆತ್ಮ ಹತ್ಯೆಗೆ ಇಳಿದಿರುವುದು ನಮಗಿನ್ನೂ ಮರೆತಿಲ್ಲ. ಇದೇ ಕಾಯಿಕೊರಕವನ್ನು ಸುಲಭ ರೀತಿಯಲ್ಲಿ ನಿಯಂತ್ರಿಸುವ ವಿಧಾನವೊಂದನ್ನು ನಮ್ಮ ಹಿರಿಯ ರೈತ ಮಿತ್ರ ಶ್ರೀಚೆನ್ನಪ್ಪ ಗೌಡರು ಕಂಡು ಹಿಡಿದಿರುವರು.

ತೊಗರಿಯನ್ನು ಸಾಮಾನ್ಯವಾಗಿ ಜೂನ್-ಜುಲೈ ತಿಂಗಳುಗಳಲ್ಲಿ ಬಿತ್ತುವುದು ರೂಢಿಯಲ್ಲಿದೆ. ಇದು ನಂತರ ಹೂ ಬಿಡಲು ಶುರುಮಾಡುವಾಗ ನೈರುತ್ಯ ಮಾನ್‌ಸೂನ್ ಗಾಳಿ ಬಲವಾಗಿ ಬೀಸುತ್ತಿದ್ದು, ಈ ಗಾಳಿಯೇ ತೊಗರಿಯ ಕಾಯಿಕೊರಕ ಮುಂತಾದ ಪೀಢೆಗಳಿಗೆ ಆಹ್ವಾನ ನೀಡುತ್ತದೆ ಎಂಬುದು ಚೆನ್ನಪ್ಪ ಗೌಡರ ಅಭಿಪ್ರಾಯ. ಇದನ್ನು ತಪ್ಪಿಸಲು, ತೊಗರಿ ಬಿತ್ತನೆಯನ್ನು ಆಗಸ್ಟ್ ಮಧ್ಯದವರೆಗೆ ಮುಂದೂಡಿದರೆ, ಅದು ಹೂ ಬಿಡುವ ವೇಳೆಗೆ ಡಿಸೆಂಬರ್ ತಿಂಗಳ ಮೂಡ (ಥಂಡಿ) ಗಾಳಿ ಬೀಸುತ್ತಿದ್ದು ಇದು ತೊಗರಿಯ ಪೀಡೆಗಳಿಗೆ ಅಷ್ಟೇನೂ ಪ್ರೋತ್ಸಾಹ ನೀಡುವುದಿಲ್ಲ ಎಂಬುದು ಇವರ ವಾದ. ಈ ಪ್ರಯೋಗವನ್ನು ಚೆನ್ನಪ್ಪ ಗೌಡರು ಈ ವರ್ಷ ಸ್ವತ: ತಮ್ಮ ಹೊಲದಲ್ಲೇ ಮಾಡಲಿದ್ದು ಫಲಿತಾಂಶಕ್ಕೆ ಕಾದು ನೋಡಬೇಕಾಗಿದೆ.

ಸೇವಂತಿಗೆಯಿಂದ ಗಂಟುಹುಳ ನಿಯಂತ್ರಣ

ಟೊಮೋಟೊ, ಮೆಣಸಿನಕಾಯಿ ಬೆಳೆಯ ಸುತ್ತ ತಮಿಳುನಾಡಿನ ಗಾಂಧಿ ನಗರ ಜಿಲ್ಲೆಯ, ವಚ್ಚಾಲಕುಂಡು ಗ್ರಾಮದ ನಿವಾಸಿ ಎಸ್. ಕುಪ್ಪುಸ್ವಾಮಿ ಸೇವಂತಿಗೆ ಬೆಳೆಸುತ್ತಾರೆ. ಇದು ಚಂದಕ್ಕಲ್ಲ, ಹೀಗೆ ಬೆಳೆಸಿದ ಸೇವಂತಿಗೆಯ ವಾಸನೆ ಟೊಮೊಟೊ, ಮೆಣಸಿನಕಾಯಿ ಬೆಳೆಗೆ ಗಂಟುಹುಳು (Nematode) ಕಾಟವನ್ನು ತಪ್ಪಿಸುತ್ತದಂತೆ. ಕುಪ್ಪುಸ್ವಾಮಿಯವರ ಇನ್ನೆರಡು ಸೊಪ್ಪಿನ ಕಷಾಯದ ಕಿವಿಮಾತುಗಳೂ ಇವೆ.

1. ಪುದೀನಾ *(Mentha satva)*ದ ಎಲೆಯ ದ್ರಾವಣದಲ್ಲಿ ಭತ್ತದ ಬೀಜಗಳನ್ನು 24 ಗಂಟೆಗಳ ಕಾಲ ನೆನಸಿ ಬಿತ್ತನೆ ಮಾಡುವುದರಿಂದ, ಭತ್ತದ ಬೆಳೆಗೆ ಬೀಳುವ ಕೆಂಪು ಚುಕ್ಕೆ ರೋಗ ನಿಯಂತ್ರಣದಲ್ಲಿರುವುದೇ ಅಲ್ಲದೆ, ಗಿಡಗಳು ಕೂಡಾ ಹೆಚ್ಚು ಸೊಂಪಾಗಿ, ಸತ್ವಯುತವಾಗಿ ಬೆಳೆಯುವುದಂತೆ.

2. ಅದೇ ರೀತಿ ಬೊಗನ್‌ವಿಲಾ *(Bougainvillea glabra)* ಎಲೆಯ ದ್ರಾವಣದಲ್ಲಿ ಟೊಮೊಟೊ ಬೀಜಗಳನ್ನು ನನೆಸಿ ಬಿತ್ತನೆ ಮಾಡುವುದರಿಂದ ಸಸಿ ಸೊರಗುವ ಕಾಯಿಲೆ ಹತೋಟಿಗೆ ಬರುವುದಂತೆ. 20ಮಿ.ಲೀ. ಸೊಪ್ಪಿನ ದ್ರಾವಣನ್ನು ಒಂದು ಲೀಟರ್ ನೀರಿನಲ್ಲಿ ಬೆರೆಸಿ, ಈ ದ್ರಾವಣದಲ್ಲಿ ಟೊಮೊಟೊ ಬೀಜಗಳನ್ನು ಸುಮಾರು 6 ಗಂಟೆಗಳ ಕಾಲ ನೆನೆಸಿಡಬೇಕಂತೆ.

ಗಿಡಹೇನು *(Aphids)* ಓಡಿಸಲು ಸಗಣಿ ಮತ್ತು ಬೂದಿ

ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪಾಪರಪಟ್ಟಿ ಊರಿನ ಎಸ್. ಪಾಂಡುರಂಗನ್‌ರವರ ಪ್ರಕಾರ 10 ಕೆ.ಜಿ. ಸಗಣಿಯನ್ನು ಚೆನ್ನಾಗಿ ಒಣಗಿಸಿ, ಪುಡಿಮಾಡಿ ಬೂದಿಯೊಂದಿಗೆ ಬೆರೆಸಿ ಮುಂಜಾವಿನಲ್ಲಿ ಎಲೆಗಳ ಮೇಲೆ ಉದುರಿಸುವುದರಿಂದ ಗಿಡಹೇನನ್ನು ಓಡಿಸಬಹುದಂತೆ.

(ಇದೇ ರೀತಿ ಮುಂಜಾವಿನಲ್ಲಿ ಗಿಡಗಳ ಮೇಲೆ ಬೂದಿ ಉದುರಿಸುವುದರಿಂದ ಗಿಡ ಹೇನು ನಿಯಂತ್ರಣಕ್ಕೆ ಬರುತ್ತದೆ ಎನ್ನುವ ಅನುಭವ ಮಲೆನಾಡಿನ ರೈತಮಹಿಳೆಯರದೂ ಕೂಡ– ಸಂ.)

ಶೇಂಗಾದ ಜೋಡಿ ಹೆಸರುಕಾಳು

ಗುಜರಾತಿನ ಬೂಜ್ ಜಿಲ್ಲೆಯ ಅಶ್ವಿನಿಭಾಯಿ ಕಲ್ಯಾಣಭಾಯಿ ಒಮ್ಮೆ ಶೇಂಗಾ ಬೆಳೆ ಬೆಳೆಸುವಾಗ ಜೊತೆಗೆ ಹೆಸರುಕಾಳನ್ನೂ ಹಾಕಿದರಂತೆ. ಆಶ್ಚರ್ಯವೆಂದರೆ, ಆ ವರ್ಷ ಅಕ್ಕಪಕ್ಕದ ಹೊಲಗಳಲ್ಲಿ ಕಂಡುಬಂದ ಎಲೆ ಚುಕ್ಕೆ ರೋಗ ಅವರ ಶೇಂಗಾದ ಸಸ್ಯಗಳಿಗೆ ಮಾತ್ರ ತಟ್ಟಿರಲಿಲ್ಲವಂತೆ. ಇದು ಬಹುಶಃ ಹೆಸರುಕಾಳುಗಳ ಪ್ರಭಾವ ಇರಬಹುದೆಂದು ಮುಂದಿನ ವರ್ಷವೂ ಅದನ್ನೇ ಪುನರಾವರ್ತಿಸಿದಾಗ ಫಲಿತಾಂಶ ಖಚಿತ. ಹೆಸರುಕಾಳನ್ನು ಶೇಂಗಾದ ಜೊತೆಗೆ ಬೆಳೆದರೆ, ಶೇಂಗಾದ ಗಿಡಗಳಿಗೆ ಎಲೆಚುಕ್ಕೆ ರೋಗ ಬರುವುದಿಲ್ಲ. ಈ ಅನುಭವವನ್ನೇ ಪರಿಷ್ಕರಿಸಿ, ಈಗ 4 ಸಾಲು ಶೇಂಗಾದ ಬೆಳೆ ಮಧ್ಯದಲ್ಲಿ ಒಂದು ಸಾಲು ಹೆಸರುಕಾಳು ಬೆಳೆಸುವುದು ಹೆಚ್ಚು ಸೂಕ್ತ ಎಂದು ಹೇಳುತ್ತಾರೆ. ಕಳೆದ ಐದು ವರ್ಷಗಳಿಂದ ಅವರು ಈ ರೀತಿ ಶೇಂಗಾ ಬೆಳೆಯುವುದನ್ನು ನೋಡಿದ ಅಕ್ಕಪಕ್ಕದ ರೈತರೂ ಕೂಡ ಈಗ ಅವರನ್ನೇ ಅನುಸರಿಸಲಾರಂಭಿಸಿದ್ದಾರಂತೆ.

ಶುಂಠಿಯ ಜೊತೆಗೆ ಎಕ್ಕ!

ಶುಂಠಿಗೆ ಹುಳು, ಕೀಟ, ರೋಗದ ಬಾಧೆ ಬರಬಾರದೆಂದರೆ, ಜೊತೆಗೆ ಎಕ್ಕ ಬೆಳೆಯಿರಿ ಎನ್ನುತ್ತಾರೆ ಗುಜರಾತಿನ ಸಬರಕಾಂತ ಜಿಲ್ಲೆಯ ಬಚ್ಚುಭಾಯಿ ಎಂ. ಪಾಂಡರ್. ಎಕ್ಕದ ವಾಸನೆ ಹುಳುಗಳನ್ನು ದೂರವಿಡುತ್ತದೆ ಎನ್ನುವುದು ಆ ಪ್ರಾಂತ್ಯದ ಜನರೆಲ್ಲರ ಅನುಭವವಂತೆ.

- ಮೂಲ: ಹನೀಬೀ 11 (1), 2000

ಕೀಟನಾಶಕವಾಗಿ ಚೆಂಡು ಹೂ ಎಂದ ರೈತ–ಹೌದೆಂದು ಒಪ್ಪಿದೆ ವಿಜ್ಞಾನ

ಚೆಂಡುಹೂವನ್ನು ತರಕಾರಿ ಬೆಳೆಯ ಮಧ್ಯೆ, ಬದುಗಳಲ್ಲಿ ಬೆಳೆದರೆ ಕೀಟನಾಶಕದ ಗುಣವಿದೆ ಎಂಬುವುದು ನಮ್ಮ ಅನೇಕ ರೈತರ ಅನುಭವದ ಪಾಠ. ಇದೀಗ ಕೆನಡದಲ್ಲಿ ನಡೆದ ಸಂಶೋಧನೆ, ಇದನ್ನು ವೈಜ್ಞಾನಿಕವಾಗಿ ಅನುಮೋದಿಸಿದೆ. ಪರ್ಯಾಯ ಬೆಳೆ ಪದ್ಧತಿಯಂತೆ, ಚೆಂಡು ಹೂವನ್ನು ಒಂದು ಬೆಳೆತೆಗೆದ ನಂತರ ಬೆಳೆದರೆ, ಅಂತಹ ಭೂಮಿಯಲ್ಲಿ ಗಂಟು ಹುಳದ ಭಾದೆ ಕನಿಷ್ಠವಾಗುತ್ತದೆ ಎನ್ನುತ್ತಾರೆ ಕೆನಡಾದ ವಿಜ್ಞಾನಿಗಳು. ಇಷ್ಟೇ ಅಲ್ಲ ಚೆಂಡುಹೂವಿನ ದ್ರಾವಣವನ್ನು ಸಿಂಪಡಿಸಿರುವುದರಿಂದ ಸೊಳ್ಳೆಯ ಮರಿಗಳನ್ನು ಕೂಡಾ ನಾಶ ಮಾಡಬಹುದಂತೆ. ಅಷ್ಟೇ ಅಲ್ಲ, ಆ ವಿಜ್ಞಾನಿಗಳ ಹೇಳಿಕೆಯಂತೆ, ತರಕಾರಿ ಬೆಳೆ ತೆಗೆಯುವಾಗ, ಜೊತೆಯಲ್ಲಿ ಅಲ್ಲಲ್ಲಿ ಒಂದೆರಡು ಚೆಂಡು ಹೂವಿನ ಸಸ್ಯಗಳನ್ನು ಹಾಕಿ, ತರಕಾರಿ ಬೆಳೆದಾದ ಮೇಲೆ ಈ ಚೆಂಡು ಹೂವಿನ ಗಿಡಗಳನ್ನು ಬುಡ ಸಮೇತ ಕಿತ್ತು ಮತ್ತೆ ಮಣ್ಣಿಗೆ ಸೇರಿಸುವುದರಿಂದ ಮುಂದಿನ ಬೆಳೆಗೆ ಗಂಟು ಹುಳುವಿನ ಕಾಟ ಖಂಡಿತಾ ಇರದು.

ಗಂಟುಹುಳದ ಮತ್ತೊಂದು ಹತೋಟಿ ವಿಧಾನ

ತಮಿಳುನಾಡಿನ ವಿರುದುನಗರ ಜಿಲ್ಲೆಯ ರೈತ ಶಂಕರಲಿಂಗಂನವರ ಬಾಳೆಯ ತೋಟಕ್ಕೆ ಯಾವಾಗಲೂ ಗಂಟುಹುಳುವಿನ ಕಾಟ. ಇದರಿಂದ ಬಾಳೆಯ ತೋಟವನ್ನು ಮುಕ್ತಗೊಳಿಸಲು ಅವರು ಹುಡುಕಿಕೊಂಡ ಉಪಾಯ ಹೀಗಿದೆ. ಭೂಮಿಯನ್ನು ಸಿದ್ಧಗೊಳಿಸುವ ಸಮಯದಲ್ಲೇ ಎಕರೆಗೆ 60 ಗಾಡಿ ಚೆನ್ನಾಗಿ ಕೊಳೆತ ಗೊಬ್ಬರ ಹಾಕಿ ಕನಿಷ್ಠ 6 ಬಾರಿ ಚೆನ್ನಾಗಿ ಉಳುಮೆ ಮಾಡುತ್ತಾರೆ. ನಂತರ ಮಡಿಗಳನ್ನು ಸಿದ್ಧಪಡಿಸಿ, ಅದರ ಎರಡೂ ಬದಿಯಲ್ಲಿ ಆರು ಅಡಿ ಅಂತರದಲ್ಲಿ ಬಾಳೆಯ ಸಸಿಗಳನ್ನು ನೆಡುತ್ತಾರೆ. ಹೀಗೆ ಸಸಿ ನೆಟ್ಟ 60 ದಿನಗಳ ನಂತರ, ಬೇವು ಮತ್ತು ಹರಳಿನ ಹಿಂಡಿಯನ್ನು ಸಮಪ್ರಮಾಣದಲ್ಲಿ ಬೆರೆಸಿ, ಪ್ರತೀ ಗಿಡದ ಬುಡಕ್ಕೆ 25–30ಗ್ರಾಂ. ಹಾಕುತ್ತಾರೆ. ಇಷ್ಟಲ್ಲದೇ ಗಿಡ ನೆಟ್ಟು 8 ತಿಂಗಳ ನಂತರ, ಪ್ರತೀ ಗಿಡದ ಬುಡಕ್ಕೆ 50 ಗ್ರಾಂ. ಶೇಂಗಾ ಹಿಂಡಿ ಹಾಕುತ್ತಾರೆ. ಈ ರೀತಿಯ ಬೇಸಾಯ ಕ್ರಮದಿಂದ ಗಂಟು ಹುಳುವಿನ ಕಾಟ ತಡೆಯಬಹುದು ಎನ್ನುತ್ತದೆ ಶಂಕರಲಿಂಗಂನವರ ಅನುಭವ.

- ಮೂಲ: ಹನೀಬೀ 11 (1), 2000

ಮಾಗಡಿ ತಾಲೂಕಿನ ಕರಿಬಸವಯ್ಯನವರ ನಾಟೀ ಪಶು ಚಿಕಿತ್ಸೆ ಕ್ರಮಗಳು

- ಡಿ.ಎಂ. ಚಿತ್ರ ಶೇಖರ್

ಸುಮಾರು 68 ವರ್ಷ ವಯಸ್ಸಿನ ಕರಿಬಸವಯ್ಯನವರು, ಮಾಗಡಿ ಪಕ್ಕದ ಐತಿಹಾಸಿಕ ಸ್ಥಳವಾದ ಕೆಂಪೇಗೌಡನ ಸಾವನದುರ್ಗದ, ಕಲ್ಯಾಣವಡೆಯರ ಮಠದ ನಿವಾಸಿ. ಸುಮಾರು 10–12 ವರ್ಷಗಳಿಂದಲೂ ತಮ್ಮ ಸುತ್ತಮುತ್ತಲ ಹಳ್ಳಿಗಳ ದನಕರುಗಳಿಗೆ ಇವರೇ ಪ್ರಮುಖ ವೈದ್ಯರು. ಇವರು ವೈದ್ಯಕೀಯವನ್ನು ಕಲಿತದ್ದು ಬಣ್ಣಸೊಡಯ್ಯನವರಿಂದ. ಇವರ ವೈದ್ಯಕೀಯ ಪದ್ಧತಿಗೆ ಪ್ರೇರಣೆಯೆಂದರೆ ಸಾವನದುರ್ಗದ ಅರಣ್ಯದಲ್ಲಿ ಸಿಗುವಂತಹ ಔಷಧಿ ಸಸ್ಯಗಳು. ಇವರು ವೈದ್ಯಕೀಯಕ್ಕೆ ಯಾವುದೇ ಸಂಭಾವನೆಯನ್ನು ಪಡೆಯುವುದಿಲ್ಲ. ಇವರು ಬಹುವಾಗಿ ಔಷಧಿ ಕೊಡುವ ಕಾಯಿಲೆ ಎಂದರೆ ಬಾವು.

ಬಾವು: ಬಾವುಗಳಲ್ಲಿ ಹಲವಾರು ವಿಧಗಳಿವೆ. ಕೆಚ್ಚಲ ಬಾವು, ಹೊಟ್ಟೆಬಾವು, ತಲೆಬಾವು. ತಲೆಬಾವು ಬಂದರೆ ಪಶುಗಳು ಬದುಕಿ ಉಳಿಯುವುದೇ ಕಷ್ಟ, ಈ ರೋಗ ಬಂದರೆ ಪಶುಗಳ ಕಣ್ಣು ಬಳೆಗಳು ಬಿಟ್ಟುಕೊಳ್ಳುತ್ತವೆ. ಕಣ್ಣು ಕಾಣಿಸುವುದಿಲ್ಲ, ಕಣ್ಣಿನಲ್ಲಿ ನೀರು ಸುರಿಸುತ್ತವೆ. ಈ ರೋಗ ಬಂದ 8 ಗಂಟೆಯೊಳಗೆ ಔಷಧಿಯನ್ನು ನೀಡಬೇಕು. ಹೊಟ್ಟೆಬಾವು ಬಂದರೆ ದೇಹದ ಯಾವುದೇ ಭಾಗದಲ್ಲೂ ಬರಬಹುದು, ಕೆಚ್ಚಲ ಬಾವು ಬಂದರೆ, ಹಸುಗಳು ಹಾಲು ಕೊಡುವುದಿಲ್ಲ, ಹಾಲಿನಲ್ಲಿ ರಕ್ತ ಬರುತ್ತದೆ. ಈ ಎಲ್ಲಾ ಬಾವುಗಳಿಗೆ ಔಷಧ ಕ್ರಮ ಎಂದರೆ: 1. ಆಲು ಕುಂಟಿಕೆ, 2. ಇಸುಮುದಾರಿ ಸೊಪ್ಪು 3. ಮಹಾಮಾರಿ, 4. ಸಂಪಿಗೆ

ಮೇಲಿನ ನಾಲ್ಕು ಸೊಪ್ಪುಗಳನ್ನು ಅರೆದು ನೀರಿಗೆ ಸೇರಿಸಿ ಕಾಯಿಲೆಯ ಸ್ಥಿತಿಗತಿಯ ಮೇಲೆ ದಿನಕ್ಕೆ 2–3 ಗೊಟ್ಟ ಹಾಕಬೇಕು. ಇದೇ ಔಷಧಿಯನ್ನು ಪಶುವಿನ ಮೇಲ್ಭಾಗದಲ್ಲಿ ಸವರಬೇಕು. ತಲೆ ಬಾವಿಗೆ ಮರದ ಸಂಪಿಗೆ ಚಕ್ಕೆಯನ್ನು ಅರೆದು ಮೇಕೆ ಹಾಲಿನಲ್ಲಿ ಹುಯ್ಯಬೇಕು. ನಂತರ ಇದನ್ನು ತಲೆಯ ಭಾಗಕ್ಕೂ ಸವರಬೇಕು. ಇದರ ಜೊತೆಗೆ ಮೇಲಿನ ಔಷಧಿಯನ್ನು ಕುಡಿಸಬೇಕು. ತಲೆಬಾವಿನ ತೀವ್ರತೆ ಜಾಸ್ತಿಯಿದ್ದರೆ ಕಲ್ಲುದೊಪ್ಪ, ಎಗ್ಗಡಜದ ಸೊಪ್ಪು ಸೇರಿಸಿ ಹೊಗೆ ಕೊಡಬೇಕು. ಕರುಳು ಬಾವು ಬಂದರೆ, ಇದೇ ಔಷಧಿಯನ್ನು ಗುದದ್ವಾರದಲ್ಲಿ ಕೊಡಬೇಕಾಗುತ್ತದೆ. ಈ ಮೇಲಿನ ಯಾವುದೇ ಔಷಧಿಯನ್ನು ಗರ್ಭಧರಿಸಿದ ಹಸು, ಎಮ್ಮೆಗಳಿಗೆ, ಹೊಟ್ಟೆಗೆ ಕೊಡಬಾರದು. ಹೊರಮೈ ಮೇಲೆ ಮಾತ್ರ ಹಚ್ಚಬೇಕು ಎಂದು ಹೇಳುತ್ತಾರೆ.

ಪಿನಾಸಿ ಕಾಯಿಲೆಗೆ: ಈ ಕಾಯಿಲೆಯ ಸೂಚನೆ, ಪಶುವು ಉಸಿರಾಟದಲ್ಲಿ ಗೊರಗುಟ್ಟುವುದು, ಮೂಗಿನಿಂದ ಗೊರ ಗೊರ ಎಂಬ ಶಬ್ದ ಬರುತ್ತದೆ. ಗೊಣ್ಣೆ ಸುರಿಸುತ್ತದೆ. ಇದಕ್ಕೆ ಔಷಧ ಕ್ರಮವೆಂದರೆ ಗದ್ದೆಯಲ್ಲಿ ಸಿಗುವ ನೀರುಗುಳ್ಳೆಯನ್ನು ಚಚ್ಚಿ ಅರೆದು, ದಿನಕ್ಕೆ 2 ಬಾರಿಯಂತೆ 10–12 ದಿವಸ ಕುಡಿಸಬೇಕು.

ಕಣ್ಣಿನ ನೋತಿ (ಕಣ್ಣುಗಳಲ್ಲಿ ಗುಳ್ಳೆಗಳು ಬರುವಂತಹುದು):– ಈ ರೋಗದಿಂದ ಯಾವುದೇ ಪಶುವಿಗೆ ಕಣ್ಣು ಹೋಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದಕ್ಕೆ ಗ್ರಂಧಿಗೆ ಅಂಗಡಿಯಲ್ಲಿ ಸಿಗುವಂತಹ ಸಾಮಾನುಗಳಾದ ಕರ್ಪೂರ, ರಸಕರ್ಪೂರ, ರಸಸಿಂಧೂರ, ಕರಿಮೈಲುತುತ್ತ, ಸ್ಪಟಿಕ ಇವುಗಳನ್ನು ಹಿತ್ತಾಳೆ ಅಥವಾ ಕಂಚು ಪಾತ್ರೆಯಲ್ಲಿ ಅರೆದು ಹಸುವಿನ ಬೆಣ್ಣೆಯನ್ನು ಬೆರೆಸಿ ದೇವಗಣಿಗಲೆ ಹಾಲು ಸೇರಿಸಿ ಕಣ್ಣಿಗೆ ಇಡಬೇಕು. ಇದನ್ನು ಇಟ್ಟ ಮೇಲೆ ಒಂದು ಗಂಟೆ ಪಶುವನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಏಕೆಂದರೆ ಕಾಲಿನಿಂದ ಕೆರೆದುಕೊಳ್ಳತ್ತವೆ.

ನರಡಿ ಕಾಯಿಲೆ: ಈ ರೋಗಕ್ಕೆ ಇವರು ಕೊಡುವಂತಹ ಔಷಧವೆಂದರೆ ದೊಮ್ಮೆಗೆಡ್ಡೆ, ಮೆಣಸು ಮತ್ತು ಅರಿಶಿಣವನ್ನು ಚಚ್ಚಿ ನೀರಿನೊಂದಿಗೆ ಕುಡಿಸಬೇಕು. 2 ಸಾರಿ ಕುಡಿಸುವುದರೊಳಗೆ ಈ ಕಾಯಿಲೆ ಗುಣವಾಗುತ್ತದೆಯಂತೆ.

ಸಲೆಕಾಯಿಲೆ: ಈ ಕಾಯಿಲೆ ಕಾಣಿಸಿಕೊಂಡಾಗ ಕಿವಿ ಕೊಂಬು ತಣ್ಣಗೆ ಇರುತ್ತವೆ. ಕಿವಿ ಮರಗಟ್ಟಿರುತ್ತದೆ, ಮೇವು ತಿನ್ನುವುದಿಲ್ಲ, ಜೊಲ್ಲು ಸುರಿಸುತ್ತವೆ. ಇದಕ್ಕೆ ಸಿಹಿಬೇವಿನ ಎಲೆ ತಿನ್ನಿಸುವುದು ಅಥವಾ ಮೆಣಸು, ಬೆಳ್ಳುಳ್ಳಿ, ಹುಣಸೆಹಣ್ಣು ತಿನ್ನಿಸುವುದು, ಇಲ್ಲವಾದರೆ ವೀಳ್ಯದೆಲೆ, ಬೆಲ್ಲ, ಈರುಳ್ಳಿ ತಿನ್ನಿಸಿದರೆ ಕಾಯಿಲೆ ಗುಣವಾಗುತ್ತದೆಯಂತೆ, ಇದನ್ನು ಒಂದು ಅಥವಾ ಎರಡು ಸಾರಿ ಕುಡಿಸಿದರೆ ಸಾಕು.

ದನಕರುಗಳು ಉಚ್ಚುವುದಕ್ಕೆ: ಅಚ್ಚೆಸೊಪ್ಪು, ರಸಬಾಳೆ ಗೆಡ್ಡೆ, ಮಾವಿನ ಮರದ ಸೊಪ್ಪು, ಎಳನೀರಿನ ಜೊತೆಯಲ್ಲಿ ಅರೆದು ಒಂದು ಅಥವಾ ಎರಡು ಸಾರಿ ಕುಡಿಸಿದರೆ ಸಾಕು, ಬೇದಿ ನಿಲ್ಲುತ್ತದೆ ಎಂಬುದು ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ಜನರ ಅನುಭವ.

ಹಸುವಿಗೂ ಬೇಕೇ ಹೊಗೆಸೊಪ್ಪು: ಗುಜರಾತಿನ ಬನಸ್ಕಾಂತ ಜಿಲ್ಲೆಯ ಈಶ್ವರ ಬಾಯಿ ಬಾಬುಬಾಯಿಯ ಮನೆಯಲ್ಲಿ ಕಳೆದ ಏಳು ವರ್ಷಗಳಿಂದಲೂ ಹೊಗೆಸೊಪ್ಪಿನ ಬಳಕೆ! ಆದರೆ ಅವರಿಗಾಗಿ ಅಲ್ಲ ತಮ್ಮ ಹಸುಗಳಿಗಾಗಿ! ಹಸುವಿನ ಮೈ ಮೇಲೆ ಬೀಳುವ ಉಣ್ಣೆಯ ಕಾಟ ತಪ್ಪಿಸಲು ಅವರು ಹೊಗೆಸೊಪ್ಪು ಬಳಸುತ್ತಾರೆ. 25 ಗ್ರಾಂ. ಹೊಗೆಸೊಪ್ಪನ್ನು ಚೆನ್ನಾಗಿ ಪುಡಿ ಮಾಡಿ ಒಂದರಿಂದ ಒಂದೂವರೆ ಲೀಟರ್ ನೀರಿನಲ್ಲಿ ಚೆನ್ನಾಗಿ ಕದಡಿ ಸುಮಾರು 3 ಗಂಟೆಗಳ ಕಾಲ ಹಾಗೆಯೇ ಬಿಡುತ್ತಾರೆ. ನಂತರ 20 ಲೀಟರ್ ನೀರಿನಲ್ಲಿ ಅದನ್ನು ಬೆರೆಸಿ ತೆಳು ದ್ರಾವಣ ತಯಾರಿಸಿ, ಹತ್ತಿಯ ಬಟ್ಟೆಯನ್ನು ಅದರಲ್ಲಿ ಅದ್ದಿ ತೆಗೆದು ಹಸುವಿನ ಮೈಯನ್ನೆಲ್ಲಾ ಉಜ್ಜುತ್ತಾರಂತೆ. ಹಸುವಿನ ಮೈಯಲ್ಲಿರುವ ಉಣ್ಣೆಯ ಕಾಟ ನಿವಾರಣೆಯಾಗುವವರೆಗೂ ಇದೇ ಕ್ರಮವನ್ನು ಪುನರಾವರ್ತಿಸುತ್ತಾರಂತೆ.

ಹೀಗೊಂದು ಗಾಯಕ್ಕೆ ಮುಲಾಮು: ಚೆನ್ನಾಗಿ ಕುಟ್ಟಿ ಪುಡಿ ಮಾಡಿದ ಎಕ್ಕದ ತೊಗಟೆಯನ್ನು ಸುಮಾರು 50ಗ್ರಾಂ ತುಪ್ಪದಲ್ಲಿ ಚೆನ್ನಾಗಿ ಕಲಸಿ, ಸಿದ್ಧಗೊಳಿಸಿದ ಮುಲಾಮನ್ನು ಪ್ರಾಣಿಗಳ ಮೈಮೇಲಿನ ಗಾಯಕ್ಕೆ ಹಚ್ಚಿ ಪಟ್ಟಿ ಕಟ್ಟಿ ಸುಮಾರು 15 ದಿನಗಳ ಕಾಲ ಬಿಟ್ಟರೆ, ಅದೆಂತಹ ಗಾಯವೇ ಆಗಲಿ ಸಂಪೂರ್ಣ ಗುಣ ಖಂಡಿತಾ ಎನ್ನುತ್ತಾರೆ, ಗುಜರಾತಿನ ಅಹಮದಾಬಾದ್ ಜಿಲ್ಲೆಯ ಮಲ್ಜಿಭಾಯಿ ದೇಸಾಯಿ.

- ಮೂಲ: ಹನೀಬೀ 11 (1), 2000

ಸಾಂಪ್ರದಾಯಿಕ ಪದ್ಧತಿಗಳಿಂದ ಗೆರಸು/ಕಾಲುಬಾಯಿ ರೋಗದ ಹತೋಟಿ

ಕಾಲು ಬಾಯಿ ರೋಗವು ಒಂದು ನಂಜಾಣು ರೋಗವಾಗಿದ್ದು, ತೀವ್ರವಾದ ಸಂದರ್ಭಗಳಲ್ಲಿ ಹಸುಗಳು ಸಾವನ್ನಪ್ಪುತ್ತವೆ. ಈ ರೋಗವನ್ನು ತಡೆಗಟ್ಟಲು ಮತ್ತು ಹತೋಟಿ ಮಾಡಲು ಸಾಕಷ್ಟು ವೈಜ್ಞಾನಿಕ ಮಾರ್ಗಗಳನ್ನು ಕಂಡು ಹಿಡಿದಿದ್ದಾರೆ. ಅಂತೆಯೇ ರೈತರು ಸಹ ತಮ್ಮದೇ ಆದ 50ಕ್ಕೂ ಹೆಚ್ಚು ಸಾಂಪ್ರದಾಯಿಕ ಪದ್ಧತಿಗಳನ್ನೂ ಕಂಡುಕೊಂಡಿದ್ದಾರೆ. ಈ ರೋಗವನ್ನು ನಿರ್ಮೂಲನೆ ಮಾಡಲು ವೈಜ್ಞಾನಿಕ ಮತ್ತು ಸಾಂಪ್ರದಾಯಿಕ ಪದ್ಧತಿಗಳ ಸಮ್ಮಿಲನ ಅತ್ಯವಶ್ಯಕ.

ಮೊದಲ ಹಂತದಲ್ಲಿ ಕಾಲುಬಾಯಿ ರೋಗವು ಮಳೆಗಾಲದಲ್ಲಿ ಹಸುಗಳನ್ನು ಧಾಳಿ ಮಾಡುತ್ತದೆ. ಈ ರೋಗದ ಸಾಮಾನ್ಯ ಲಕ್ಷಣಗಳೆಂದರೆ, ಹೆಚ್ಚಾದ ದೇಹದ ಉಷ್ಣಾಂಶ. ಗೊರಸುಗಳಲ್ಲಿ ಮತ್ತು ಬಾಯಿಯಲ್ಲಿ ಹುಣ್ಣುಗಳಾಗುತ್ತವೆ.

ರೋಗಪೀಡಿತ ಹಸುಗಳು ಮೇಯುವುದನ್ನು ನಿಲ್ಲಿಸುತ್ತವೆ. ಎಗರಲಾರಂಭಿಸುತ್ತವೆ ಮತ್ತು ಗೊರಸನ್ನು ನೆಲಕ್ಕೆ ಸತತವಾಗಿ ಉಜ್ಜುತ್ತಿರುತ್ತವೆ. ರೋಗ ಪೀಡಿತ ಹಸುಗಳು ಮೇವು ತಿನ್ನುವುದನ್ನು ನಿಲ್ಲಿಸುವುದರಿಂದ, ಹಾಲು ಉತ್ಪಾದನೆ ಗಣನೀಯವಾಗಿ ಕಡಿಮೆಯಾಗುತ್ತದೆ. ಈ ಪದ್ಧತಿಯಿಂದ ಹಸುವಿನ ಮೇಲೆ ಯಾವುದೇ ಪರ್ಯಾಯ ದುಷ್ಪರಿಣಾಮಗಳಾಗುವುದಿಲ್ಲ. ಸ್ಥಳೀಯ ಗಿಡಗಳ ರಸವನ್ನು ಉಪಯೋಗಿಸಿ ಹುಣ್ಣುಗಳನ್ನು ವಾಸಿ ಮಾಡ ಬಹುದಾಗಿದೆ. ಶೇಕಡ 60ರಿಂದ 70ರಷ್ಟು ರೋಗ ನಿವಾರಣೆಯನ್ನು ಮಾಡಿರುವುದು ಕಂಡುಬಂದಿದೆ.

ಗಾಯಗಳ ಬಾಹ್ಯ ಉಪಚಾರಕ್ಕೆ ಸಸ್ಯ ಜನ್ಯ ವಸ್ತುಗಳ ಬಳಕೆ:

ರೋಗಪೀಡಿತ ಹಸುಗಳ ಬಾಯಿ ಮತ್ತು ಗೊರಸಿನ ಗಾಯಗಳಿಗೆ ಸಸ್ಯದ ರಸ ಅಥವಾ ಅನೇಕ ಸಸ್ಯ ಜನ್ಯ ವಸ್ತುಗಳನ್ನು ಬಳಸಿ ರೋಗವನ್ನು ಹತೋಟಿಗೆ ತರ ಬಹುದು.

1. ಕ್ಲೆರೋಡೆಂಡ್ರಾನ್ *(Clerodendron inerme)* ಎಂಬ ಸಸ್ಯದ ಎಲೆಯನ್ನು ಅರೆದು, ಮಂಜನವನ್ನು ಗಾಯಗಳಿಗೆ ಹಚ್ಚುವುದರಿಂದ ಗಾಯ ವಾಸಿಯಾಗುತ್ತದೆ. ಹೊಂಗೆ *(Pongamia pinnata)* ಹೂವಿನ ರಸವನ್ನು ಮತ್ತು ಮುತ್ತುಗದ *(Butea monospermia)* ಮರದಿಂದ ಹೊರ ಸೂಸುವ ಅಂಟನ್ನು ಗೊರಸುಗಳ ಸಂಧಿಗೆ ಹಚ್ಚಿ ಗಾಯ ವಾಸಿ ಮಾಡ ಬಹುದು. ಈ ತರಹದ ಉಪಚಾರಗಳನ್ನು ಒಂದು ವಾರದವರೆಗೆ ಮುಂದುವರೆಸುವುದರಿಂದ ಶೇಕಡ 70 ರಷ್ಟು ರೋಗವನ್ನು ಗುಣಪಡಿಸಬಹುದು.

2. ರೋಗಪೀಡಿತ ಗೊರಸುಗಳಿಗೆ ಸಾಸಿವೆ ಎಣ್ಣೆಯನ್ನು ಉಜ್ಜುವುದು ಸಹ ಪರಿಣಾಮಕಾರಿಯಾಗಿ ಗಾಯಗಳನ್ನು ವಾಸಿ ಮಾಡುತ್ತದೆ.

3. ಸಿಸ್ಸು *(Dalbergia sisso)* ಮರದ ಮತ್ತು ಹುಣಸೆ ಮರದ ತೊಗಟೆಯಿಂದ ತೆಗೆದ ರಸವನ್ನು ಗಾಯಗಳಿಗೆ ಹಚ್ಚಬಹುದು.

4. ಸೀತಾಫಲದ ಎಲೆಗಳ ಮಂಜನದೊಂದಿಗೆ, ಬಜೆ ಹಾಗೂ ಸೆಸ್‌ಬೇನಿಯಾ ಎಲೆಗಳ ಮಂಜನವನ್ನು ಬೆರೆಸಿ ಗಾಯಗಳಿಗೆ ಹಚ್ಚಬಹುದು.

5. ಹುಣಸೆ ಹಣ್ಣಿನ ಮಂಜನವನ್ನು ಸೂಕ್ತ ಎಣ್ಣೆ (ಜಿಂಜಲಿ ಎಣ್ಣೆ)ಯೊಂದಿಗೆ ಬೆರೆಸಿ ಗಾಯಗಳಿಗೆ ಹಚ್ಚಬಹುದು.

6. ಬಿಲ್ವಪತ್ರೆ *(Aegle marmelos)* ಕಾಯಿಯ ಮಂಜನವನ್ನು ಮುತ್ತುಗದ ಅಂಟಿನಲ್ಲಿ ಬೆರೆಸಿ ಗಾಯಕ್ಕೆ ಹಚ್ಚುವುದರಿಂದಲೂ ಉತ್ತಮ ಫಲ ನಿರೀಕ್ಷಿಸಬಹುದು.

7. ಸ್ನಾಯುಗಳ ಮೇಲೆ ಮತ್ತು ಗಾಯಗಳ ಮೇಲೆ ಈರುಳ್ಳಿ ಮತ್ತು ಸಾಸಿವೆ ಎಣ್ಣೆಯ ಮಿಶ್ರಣವನ್ನು ಸವರುವುದರಿಂದ ಈ ರೋಗವನ್ನು ಪರಿಣಾಮ ಕಾರಿಯಾಗಿ ನಿವಾರಿಸಬಹುದು.

8. ಸಜ್ಜೆಯ ಮೇವಿನ ಆಹಾರವನ್ನು, ಆಹಾರಕ್ಕೆ ಬಳಸುವ ಎಣ್ಣೆಯೊಂದಿಗೆ ಬೆರೆಸಿ, ಬೆಳ್ಳುಳ್ಳಿಯನ್ನು ಹಾಕಿ ಹಸುಗಳಿಗೆ ತಿನ್ನಿಸಬಹುದು.

9. ಜಜ್ಜಿದ ಮುತ್ತುಗದ ತೊಗಟೆ, 100 ಗ್ರಾಂ ಬೆಲ್ಲ, 25 ಗ್ರಾಂ ಟೀ ಪುಡಿ ಇವೆಲ್ಲವನ್ನು ಅರ್ಧ ಲೀಟರ್ ನೀರಿನಲ್ಲಿ ಬೆರೆಸಿ ದ್ರಾವಣ ಮಾಡಿ ಹಸುಗಳಿಗೆ ಕುಡಿಸಬಹುದು.

10. ಸುಕ್ಕು ನಾರಿಪಾಲ ಎಂಬ ಹುಲ್ಲಿನ ರಸ, ಎಕ್ಕದ ಎಲೆ ಹಾಗೂ ಬೇವಿನ ಎಲೆಗಳಿಂದ ತಯಾರಿಸಿದ ರಸವನ್ನು ಕುಡಿಸುವುದು ಪರಿಣಾಮಕಾರಿ ಫಲ ನೀಡುತ್ತದೆ. ಈ ರಸಗಳೊಂದಿಗೆ ಗಂಧದ ಎಲೆಯ ರಸವನ್ನೂ ಬೆರೆಸಬಹುದು.

11. ಬಾಳೆ ಹಣ್ಣನ್ನು, ಹರಳೆಣ್ಣೆಯಲ್ಲಿ ಒಂದು ರಾತ್ರಿ ನೆನೆಸಿ ಹಸುಗಳಿಗೆ ತಿನ್ನಿಸಬಹುದು.

12. ಮುತ್ತುಗದ ಎಲೆಯ ರಸ, ತುಳಸಿ ಎಲೆ ರಸ ಮತ್ತು ಬೇವಿನ ಮರದ ತೊಗಟೆಯ ರಸವನ್ನು ಕುಡಿಸುವುದು ಉತ್ತಮ ಪದ್ಧತಿಯಾಗಿದೆ.

13. ಆಂಧ್ರ ಪ್ರದೇಶದ ಅನೇಕ ರೈತರು ಬಾಳೆಹಣ್ಣನ್ನು, ಮುತ್ತುಗದ ತೊಗಟೆ ರಸ, ಕೊತ್ತಂಬರಿ, ಲಕ್ಕಿ *(Vitex negerndo)*, ದೊಡ್ಡ ತಂಗಡಿ *(Cassia auriculata)* ಸೊಪ್ಪನ್ನು ಬೆರೆಸಿ ಬಳಸಿ ಈ ರೋಗವನ್ನು ಹತೋಟಿ ಮಾಡುತ್ತಾರೆ.

ಸಸ್ಯಜನ್ಯ ವಸ್ತುಗಳೊಂದಿಗೆ ಪ್ರಾಣಿಜನ್ಯ ವಸ್ತುಗಳ ಬಳಕೆ:

14. ಗುಜರಾತಿನಲ್ಲಿ ಮೀನಿನ ಗೇರುಗಳನ್ನು ಒಣಗಿಸಿ, ಪುಡಿ ಮಾಡಿ ಅದನ್ನು ಗೋವಿನ ಗಂಜಲದಲ್ಲಿ ಬೆರೆಸಿ, ಗಾಯಗಳ ಮೇಲೆ ಸಿಂಪಡಿಸುತ್ತಾರೆ.

15. ಕೆಲವೊಮ್ಮೆ ಒಣಗಿದ ಮೀನುಗಳನ್ನು ಸುಟ್ಟು, ಅದರ ಪುಡಿಯನ್ನು ಗಾಯದ ಮೇಲೆ ಉದುರಿಸಲಾಗುತ್ತದೆ.

16. ಚರ್ಮವನ್ನು ಸುಟ್ಟು ಅದರ ಪುಡಿಯನ್ನು ಕಡಲೇ ಕಾಯಿ ಎಣ್ಣೆ ಅಥವಾ ಸಾಸಿವೆ ಎಣ್ಣೆಯಲ್ಲಿ ಬೆರೆಸಿ, ಗಾಯಗಳಿಗೆ ಹಚ್ಚಬಹುದು.

17. ಕೊಟ್ಟಿಗೆಯಲ್ಲಿ ಬೇವಿನ ಎಲೆಗಳನ್ನು ಮತ್ತು ಒಣಗಿದ ಮೀನುಗಳನ್ನು ಸುಟ್ಟು ಹೊಗೆ ಹಾಕಬಹುದು.

- ಮೂಲ: ಹನೀಬೀ 11 (2), 2000

ಅನುವಾದ: ಶಶಿಕಲ ಎಸ್.ಜೆ., ಸ್ನಾತಕೋತ್ತರ ವಿದ್ಯಾರ್ಥಿನಿ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

ಜಯಣ್ಣನವರ ಕೆಲವು ಪಶುವೈದ್ಯಕೀಯ ಪದ್ಧತಿಗಳು

- ಡಿ.ಎಂ. ಚಿತ್ರ ಶೇಖರ್

ಮಾಗಡಿ ತಾಲೂಕಿನ ಪ್ರಸಿದ್ಧ ಪಶುವೈದ್ಯನೆಂದರೆ ಜಯಣ್ಣ. ಇವರು ಕುದೂರು ಹೋಬಳಿಯ, ಕೋಡಿಹಳ್ಳಿಯಲ್ಲಿ ವಾಸವಾಗಿದ್ದು ಸುಮಾರು 25–30 ಹಳ್ಳಿಗಳ ದನಕರುಗಳಿಗೆ ಕಾಯಿಲೆ ಬಂದರೆ ಇವರದೇ ಚಿಕಿತ್ಸೆ. ಇವರು ವಂಶಪಾರಂಪರಿಕವಾಗಿ ನಾಟಿ ಪಶುವೈದ್ಯಕೀಯವನ್ನು ನಡೆಸುತ್ತಾ ಬಂದಿದ್ದಾರೆ. ತಮ್ಮ ಅಜ್ಜ ಹಾಗೂ ತಂದೆಯಿಂದ ಪರಿಪಕ್ವವಾಗಿ ಕಲಿತಿರುವ ಇವರು, ಪಶುಗಳಿಗೆ ಬರುವ ಪ್ರಮುಖ ಕೆಲ ರೋಗಗಳ ಔಷಧಿಯ ವಿವರ ಹೀಗಿದೆ:

1. ಸೆಲೆ: ಈ ರೋಗವು ಸಾಮಾನ್ಯವಾಗಿ ಮಳೆಗಾಲ ಪ್ರಾರಂಭದ ದಿನಗಳಲ್ಲಿ ಬರುತ್ತದೆ, ಸೆಲೆ ರೋಗದಲ್ಲಿ ಮೂರು ವಿಧಗಳನ್ನು ಗುರುತಿಸುತ್ತಾರೆ. ಅವುಗಳೆಂದರೆ : **(ಅ)ಆನ್‌ಸೆಲೆ:–** ಈ ರೋಗ ಕಾಣಿಸಿಕೊಂಡಾಗ ಪಶುವು ಮೇವು ತಿನ್ನುವುದಿಲ್ಲ, ಜೊಲ್ಲು ಸುರಿಸುತ್ತದೆ, ಮೈ ಉರಿ ಬಂದಿರುತ್ತದೆ(ಕೂದಲು ಎದ್ದು ಕಾಣುತ್ತದೆ). **(ಆ) ಒಣಸೆಲೆ:–** ಈ ಕಾಯಿಲೆ ಬಂದ ಅರ್ಧ ಗಂಟೆಯಲ್ಲಿ ಕೆಮ್ಮಲು ಶುರು ಮಾಡುತ್ತದೆ, ನಂತರ ಮೈ ನಡುಕ ಬರುತ್ತದೆ ಮತ್ತು **(ಇ) ಹಿಡಿಕಲು ಸೆಲೆ:–** ಹೊಟ್ಟೆ ಉಬ್ಬರ ಬರುವುದು, ಜೊಲ್ಲು ಸುರಿಸುವುದು, ಕುಂಟುವುದು. ಈ ಮೂರು ರೀತಿಯ ರೋಗಕ್ಕೂ ಒಂದೇ ರೀತಿಯಾದ ಔಷಧಿ. ಬುಗಡಿ ಸೊಪ್ಪು *(Vallaris solanacea)*, ದತ್ತೂರಿ ಕುಡಿ *(Datura facestosa)*, ಚಜ್ಜಲಿ ಚಕ್ಕೆ, ಉಗಣಿ ಕುಡಿ, ಈರೆಮದ್ದಿನ ಸೊಪ್ಪು, ಎಕ್ಕದ *(Calotropis gigantia)* ಬೇರಿನ ತಿಗುಡು, ಸಾಸಿವೆ, ಲವಂಗ, ಬೆಳ್ಳುಳ್ಳಿ, ಹೊವಿನ ಕಾಳು ಇವುಗಳನ್ನೆಲ್ಲ ಸೇರಿಸಿ, ಚೆನ್ನಾಗಿ ಅರೆದು ಹಸುವಿನ ಹಾಲಿನೊಂದಿಗೆ ಬೆರೆಸಿ ದಿನಕ್ಕೆ ಎರಡು ಗೊಟ್ಟ ಹಾಕಬೇಕು. 3–4 ದಿನಗಳ ಕಾಲ ಬಿಸಿ ನೀರನ್ನು ಕುಡಿಸಬೇಕು.

2. ಈರಿದೊಮ್ಮೆ ಹುಣ್ಣು: ಈ ರೋಗ ಬಂದರೆ ದನಗಳು ಕೆಲಸದಲ್ಲಿ ಸೋಲುತ್ತವೆ. ಬಿಸಿಲಿನಲ್ಲಿ ಒಂದು ರೀತಿಯ ವೇದನೆಯನ್ನು ಅನುಭವಿಸುತ್ತವೆ. ಪಕ್ಕೆಯಲ್ಲಿ ಎಳೆತ ಶುರುವಾಗುತ್ತದೆ. ಇದಕ್ಕೆ ಔಷಧಿ ಕ್ರಮವೆಂದರೆ ಬೆಟ್ಟದ ತುಂಬೆಗಿಡ, ಕಾಡುಮೆಣಸಿನ ಬೇರು, ಎಕ್ಕದ ಬೇರು, ಯಲಚಿ ಚಕ್ಕೆ ಇವುಗಳನ್ನೆಲ್ಲ ಚೆನ್ನಾಗಿ ಅರೆದುಕೊಂಡು ಗ್ರಂಥಿಗೆ ಅಂಗಡಿ ಸಾಮಾನುಗಳನ್ನು ಚೆನ್ನಾಗಿ ಒಣಗಿಸಿ ನಂತರ ಗಂಧದ ರೀತಿ ತೇಯ್ದು, ಇವುಗಳನ್ನು ಒಟ್ಟಿಗೆ ಸೇರಿಸಿ ಮೇಕೆ ಹಾಲು ಮತ್ತು ಈಚಲು ಹೆಂಡಕ್ಕೆ ಸೇರಿಸಿಕೊಂಡು (ಈಚಲು ಹೆಂಡ ಸಿಗದಿದ್ದ ಪಕ್ಷದಲ್ಲಿ ಬಿಸಿನೀರನ್ನು ಬೆರೆಸಿಕೊಳ್ಳಬಹುದು) ದಿನಕ್ಕೆ ಒಂದು ಗೊಟ್ಟದಂತೆ ಎರಡು ಅಥವಾ ಮೂರು ದಿವಸ ಹಾಕಬೇಕು.

3. ಚಪ್ಪೆರೋಗ: ಈ ಕಾಯಿಲೆಯ ಲಕ್ಷಣವೆಂದರೆ, ಕಾಲುಗಳ ಚಪ್ಪೆಗಳು ಊತ ಬರುತ್ತದೆ. ಈ ಊತ ಕಾಣಿಸಿಕೊಂಡ 24 ಗಂಟೆಗಳಲ್ಲಿ ನೀರು ಆಹಾರ ಬಿಡುತ್ತದೆ. ಈ ಕಾಯಿಲೆ ಕಾಣಿಸಿಕೊಂಡ 24 ಗಂಟೆಗಳಲ್ಲಿಯೇ ಔಷಧಿಯನ್ನು ಕೊಡಬೇಕು. ಇದನ್ನು ಹಂದಿ ರೋಗವೆಂದೂ ಕರೆಯುತ್ತಾರೆ. ಈ ರೋಗಕ್ಕೆ ಔಷಧ ಉಪಚಾರವೆಂದರೆ, ಮಂಗರವಳ್ಳಿ ಗಿಡದ ರಸ ಒಂದು ಪಾವು, ಕತ್ತಾಳೆಯ ಎಲೆಯ ರಸ ಅರ್ಧಪಾವು, ಸಾಸಿವೆ ಪುಡಿ 40 ಗ್ರಾಂ, ರಾಗಿಹಿಟ್ಟು ಅರ್ಧಪಾವು ಇವುಗಳನ್ನೆಲ್ಲ ಕೂಡಿಸಿ ಅರೆದು ಕುಡಿಸಿ, ಉಳಿದಿದ್ದನ್ನು ಬಾವಿರುವ ಜಾಗದಲ್ಲಿ ಬಿಸಿಮಾಡಿ ಹಾಕುವುದು.

4. ರಕ್ತಬೇದಿ: ಬಿಳಿ ದಾಸವಾಳದ ಸೊಪ್ಪು, ದಾಳಿಂಬೆ ಕಾಯಿ, ಗೋಣಿ ಮೊಗ್ಗು, ಕೆಂಪುಕಲ್ಲುಸಕ್ಕರೆ, ಕಲ್ಲುನಾರು , ಎಳ ನೀರಿನಲ್ಲಿ ದಿನಕ್ಕೆ ಎರಡು ಸಾರಿ ಕುಡಿಸುವುದು. ನಿಲ್ಲದಿದ್ದರೆ ಕೋಳಿ ಮೊಟ್ಟೆ, ಕೊತ್ತಂಬರಿ ಸೊಪ್ಪು ಕೊಡಬಹುದು ಇದರಿಂದ ರಕ್ತಬೇದಿ ನಿಲ್ಲುತ್ತದೆ.

5. ಬಾವು: ಬಾವಿನ ಸೊಪ್ಪು, ಜಗಸುತ್ತಿನಗೆಡ್ಡೆ, ಬಿಳಿಸೂಲಿಸೊಪ್ಪು, ಸರ್ಮೆಸುದ್ದಿ, ಮಳೆಕಾಳಿನ ಸೊಪ್ಪು, ವಿಷಮದಾರಿ *(Clerodendron inerme)*, ಕೆಂಪುಗಾಣಕ್ಕೆ ಗ್ರಂಥಿಗೆ ಅಂಗಡಿ ಸಾಮಾನು, ಹಸುವಿನ ಮಜ್ಜಿಗೆಯಲ್ಲಿ ಸೇರಿಸಿ ದಿನಕ್ಕೆ ಮೂರು ಸಾರಿ ಕುಡಿಸುವುದು. ಕೆಚ್ಚಲ ಬಾವು ಇದ್ದರೆ ಮೇಲಿನ ಪೇಸ್ಟ್ ಮಾಡಿ ದಿನಕ್ಕೊಂದಾವರ್ತಿ ಮೂರು ದಿನ ಕೆಚ್ಚಲಿಗೆ ಹಚ್ಚುವುದು.

6. ಕಟ್ಟಪಿಂಜರಿ: ಈ ರೋಗದ ಲಕ್ಷಣವೆಂದರೆ ಹೊಟ್ಟೆಯುಬ್ಬರ ಬಂದು ತಕ್ಷಣ ಸಾಯುತ್ತದೆ. ಈ ಕಾಯಿಲೆಗೆ ಸೇದುಗೊಡತಿ ಸೊಪ್ಪು, ಬಿಳಿ ಕೊಂಡ ಮಾವು, ಕೋಳಿಮೊಟ್ಟೆ, ಕುಂಬಳ ಬೀಜ ಇವುಗಳನ್ನು ಸೇರಿ ಅರೆದು ಹಸುವಿನ ಹಾಲಿನೊಂದಿಗೆ, ದಿನಕ್ಕೆ ಮೂರುಸಾರಿ ಒಂದೊಂದು ಗೊಟ್ಟ ಹಾಕಬೇಕು.

7. ನಾಗರಹಾವು ಕಡಿದರೆ: ನಾಗರ ಹಾವಿನ ವಿಷದ ತೀಕ್ಷ್ಣತೆ ಜಾಸ್ತಿ ಇರುವುದರಿಂದ, ಬೇರೆ ಹಾವು ಕಡಿದಾಗ ಕೊಡುವಂತಹ ಔಷಧಗಳು ಸಾಲದು. ಇದಕ್ಕೆ ಅರಿಕಾಲ ಚಕ್ಕೆ, ಸಂಪಿಗೆ ಚಕ್ಕೆ, ಮುತ್ತುಗದ ಚಕ್ಕೆ , ಈಶ್ವರಿ ಸೊಪ್ಪು, ಆಡುಮುಟ್ಟದ ಸೊಪ್ಪು, ಮೆಟ್ನಿ ಚಕ್ಕೆ ಇವುಗಳನ್ನೆಲ್ಲ ಮಜ್ಜಿಗೆಯಲ್ಲಿ ಅರೆದು ಕುಡಿಸಬೇಕು ನಂತರ ಇದನ್ನೇ ಮೈಗೆ ಸವರುವುದು.

ನೆನಪಿಡಿ

ಜಮೀನಿನ ಮೇಲ್ಮಣ್ಣು ಅತ್ಯಮೂಲ್ಯವಾದದ್ದು. ರಾಸಾಯನಿಕ ಗೊಬ್ಬರಗಳಂತೆ, ಸಾವಯವ ಪದಾರ್ಥಗಳಂತೆ ಇದು ಅಂಗಡಿಯಲ್ಲಿ ಸಿಗುವುದಿಲ್ಲ. ಮರ-ಗಿಡಗಳು ಮತ್ತು ಹುಲ್ಲು-ಕಳೆಗಳು ಫಲವತ್ತಾದ ಮೇಲ್ಮಣ್ಣನ್ನು ಕೊಚ್ಚಿ ಹೋಗದಂತೆ ತಡೆಯುತ್ತವೆ. ಇವು ಇಲ್ಲದಿದ್ದರೆ ಮಣ್ಣು ಕೊಚ್ಚಣಿಯ ಪ್ರಮಾಣ ಬೋಳು ಜಮೀನುಗಳಲ್ಲಿ 400 ಪಟ್ಟು ಹೆಚ್ಚು ಇರುತ್ತದೆ.

ಭಾರತದಲ್ಲಿ ಮಣ್ಣು ಸವಕಳಿ ವಿಪರೀತವಾಗಿದೆ. ಒಂದು ಎಕರೆಯಲ್ಲಿ ಪ್ರತೀ ವರ್ಷವೂ ಆರೂವರೆ ಟನ್ ಸತ್ವಯುತವಾದ ಮಣ್ಣು ನೀರಿನೊಂದಿಗೆ ಹರಿದುಕೊಂಡು ಹೋಗುತ್ತಿದೆ. ಇಡೀ ದೇಶದಲ್ಲಿ ಪ್ರತೀ ವರ್ಷವೂ 53,340 ಲಕ್ಷ ಟನ್ ಮಣ್ಣು ರೈತರ ಜಮೀನು ಬಿಟ್ಟು ಬೇರೆಡೆಗೆ ಹೋಗುತ್ತಿದೆ. ಇದೇ ಮಣ್ಣನ್ನು ಉಪಯೋಗಿಸಿ ಇಟ್ಟಿಗೆ ಮಾಡಿದರೆ ಕೇರಳದಿಂದ ಕಾಶ್ಮೀರದವರೆಗೆ ಈಗಿರುವ ಎಲ್ಲಾ ಜನರ ವಸತಿಗಾಗಿ ಮನೆಗಳನ್ನು ಕಟ್ಟಬಹುದು. 53,340 ಲಕ್ಷ ಟನ್ ಮಣ್ಣಿನಲ್ಲಿ ಸಮುದ್ರಗಳಿಗೆ ಶೇಕಡ 29ರಷ್ಟು, ಆಣೆಕಟ್ಟುಗಳಿಗೆ ಶೇ.10ರಷ್ಟು. ಉಳಿದದ್ದು ಕೆರೆ, ಕೊಳ್ಳ, ನದಿ ಬಯಲು, ಮುಂತಾದೆಡೆಗೆ ಸೇರುವುದುಂಟು.

ಹೀಗಿದ್ದಾಗ ನಾವೆಷ್ಟು ಜನ ಮಣ್ಣು-ನೀರನ್ನು ಸಂರಕ್ಷಿಸುತ್ತಿದ್ದೇವೆ ? ಜಮೀನಿಗೆ ಹಸಿರಿನ ಕವಚವನ್ನು ತೊಡಿಸಿರುವವರು ಎಷ್ಟು ಮಂದಿ ? ವಿಪರೀತ ಉಳುಮೆ ಮಾಡಿ ಜಮೀನನ್ನು ಬೋಳು ಮಾಡುವುದರ ಬದಲಿಗೆ ಬಿದ್ದ ಮಳೆಯ ನೀರು ಓಡದಂತೆ ಸಸ್ಯಗಳಿಂದ, ಇಂಗು ಗುಂಡಿಗಳಿಂದ ಅಡೆತಡೆ ನಿರ್ಮಿಸಿದರೆ ಭೂಮಿ ತಾಯಿಗೆ ಸಂತೋಷವಾಗುತ್ತದೆ, ನಾವೆಲ್ಲಾ ಸುಖಿಗಳಾಗಿ ಬಾಳಬಹುದು.

ಕೃಪೆ: ವಿಜಯ್ ಅಂಗಡಿ, ಪರಿಸರ ಪ್ರಿಯ ಕೃಷಿಕರ ವೇದಿಕೆ, ಹಾಸನ

ರೈತ ಮತ್ತು ಟ್ರ್ಯಾಕ್ಟರ್

ಪ್ರತಿ ಹಳ್ಳಿಯಲ್ಲಿ ಹತ್ತಾರು ಟ್ರ್ಯಾಕ್ಟರ್‌ಗಳು ಕೆಲಸ ಇಲ್ಲದೆ ನಿಂತಿವೆ. ಟ್ರ್ಯಾಕ್ಟರ್ ಕಂಪೆನಿಗಳು ದಿನ ದಿನಕ್ಕೆ ಬೆಲೆ ಹೆಚ್ಚಿಸುತ್ತಿವೆ. ಸಾಲ ಕೊಡಲು ಬ್ಯಾಂಕ್ ಮ್ಯಾನೇಜರ್‌ಗಳು ಹಳ್ಳಿ ಹಳ್ಳಿಗೆ ಗ್ರಾಹಕರನ್ನು ಹುಡುಕಿಕೊಂಡು ಅಲೆಯುತ್ತಿದ್ದಾರೆ. ಏಕೆಂದರೆ, ನಬಾರ್ಡ್‌ನವರ ಮರು ಸಾಲ ವ್ಯವಸ್ಥೆ ಯೋಜನೆಯಂತೆ, ಟ್ರ್ಯಾಕ್ಟರ್ ಕಂತು ಸುಸ್ತಿಯಾದಾಗ ಸುಲಭವಾಗಿ ಟ್ರ್ಯಾಕ್ಟರ್ ಸೀಜ್ ಮಾಡಬಹುದಾದ್ದರಿಂದ. ಆದರೆ, ರೈತ ಯೋಚಿಸಬೇಕು, ಒಂದು ಟ್ರ್ಯಾಕ್ಟರ್ ಬೆಲೆ ಮೂರು ಲಕ್ಷದ ಮೂವತ್ತು ಸಾವಿರ ಇದನ್ನು ಒಂಬತ್ತು ವರ್ಷದಲ್ಲಿ ಮರು ಪಾವತಿ ಮಾಡುವಷ್ಟರಲ್ಲಿ 8 ಲಕ್ಷವಾಗಿರುತ್ತದೆ. ಇದನ್ನು ಟ್ರ್ಯಾಕ್ಟರ್ ಕೊಂಡು ಲಾಭ ಗಳಿಸುವ ಹುಮ್ಮಸ್ಸಿನಲ್ಲಿ ಖರ್ಚು– ವೆಚ್ಚಗಳನ್ನು ಮುಂದಾಲೋಚಿಸಿ ಲೆಕ್ಕ ಹಾಕುವುದಿಲ್ಲ. ಹಿಂದೆ ಖಡ್ಡಾಯವಾಗಿ 30ರಿಂದ 35 ಎಕರೆ ಪಾಣಿ ರೈತನ ಹೆಸರಿನಲ್ಲಿದ್ದರೆ ಮಾತ್ರ ಟ್ರ್ಯಾಕ್ಟರ್ ಸಾಲ ದೊರೆಯುತ್ತಿದ್ದು, ಎಲ್ಲರೂ ಟ್ರ್ಯಾಕ್ಟರ್ ಕೊಳ್ಳಲಾಗದೆ, ಬಾಡಿಗೆಗೆ ಪಡೆಯುತ್ತಿದ್ದುದರಿಂದ, ಟ್ರ್ಯಾಕ್ಟರ್ ಕೊಂಡವನಿಗೆ ಸ್ವಲ್ಪಮಟ್ಟಿಗಾದರೂ ಲಾಭವಾಗುತ್ತಿತ್ತು. ಈಗ 7–8 ಎಕರೆ ಇದ್ದರೂ ಸಾಲ ದೊರೆಯುವ ವ್ಯವಸ್ಥೆ ಇರುವುದರಿಂದ ದಿನದಿಂದ ದಿನಕ್ಕೆ ಟ್ರ್ಯಾಕ್ಟರ್ ಖರೀದಿಯ ಸಂಖ್ಯೆ ಹೆಚ್ಚಾಗಿ, ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ರೈತನೇ ಹತಾಶನಾಗಿರುವಾಗ, ಡೀಸಲ್, ಬಿಡಿಭಾಗಗಳ ಬೆಲೆ ಹೆಚ್ಚಳ ಹಾಗೂ ಡ್ರೈವರ್ ಸಂಬಳಗಳಂತಹ ನಿರ್ವಹಣಾ ವೆಚ್ಚಕ್ಕಾಗಿ ಕಂತು ಕಟ್ಟಲು ಹಣ ಇಲ್ಲದೆ, ಅನೇಕವು ಕೆಟ್ಟು ನಿಂತಿದ್ದರೆ, ನೂರಾರು ಟ್ರ್ಯಾಕ್ಟರ್‌ಗಳು ಜಪ್ತಿಯಾಗುತ್ತಿವೆ.

ಇಷ್ಟೇ ಅಲ್ಲದೆ ಕೃಷಿಗೆ ಬೇಕಾದ ಸಾವಯವ ಗೊಬ್ಬರ ಜಾನುವಾರುಗಳಿಂದ ದೊರೆಯುತ್ತಿತ್ತು. ಟ್ರ್ಯಾಕ್ಟರ್‌ನಿಂದಾಗಿ ಜಾನುವಾರುಗಳ ಸಂಖ್ಯೆ ಕಡಿಮೆಯಾಗಿ, ಹಣ ತೆತ್ತು, ಕೊಂಡ ಗೊಬ್ಬರದಿಂದಲೂ ನಷ್ಟ ಹೊಂದುವಂತಾಗಿದೆ.

ಸಾಮಾಜಿಕವಾಗಿ, ಕೆಲವು ಅವಿಭಕ್ತ ಕುಟುಂಬದಲ್ಲಿ ಟ್ರ್ಯಾಕ್ಟರ್ ಒಬ್ಬನ ನಿರ್ವಹಣೆಯಲ್ಲಿರುತ್ತದೆ. ಹಣ ಗಳಿಸಿದಂತೆ ದಿನೇ ದಿನೇ ಅವನ ಜೀವನ ಶೈಲಿ ಬದಲಾಗುತ್ತಾ ಇನ್ನಿತರ ಕುಟುಂಬದ ಸದಸ್ಯರು ಸಹಿಸದಾದಾಗ, ಆ ಕುಟುಂಬದ ಒಗ್ಗಟ್ಟು ಮುರಿದಂತೆಯೇ ಸರಿ. ಅಂದಾಕ್ಷಣ ಟ್ರ್ಯಾಕ್ಟರ್ ತೆಗೆದುಕೊಳ್ಳಬಾರದೆಂಬ ಲೆಕ್ಕಾಚಾರವಲ್ಲ. 40 ಎಕರೆಗಿಂತ ಜಾಸ್ತಿ ಜಮೀನಿದ್ದರೆ ಕೊಳ್ಳುವ ಬಗ್ಗೆ ಯೋಚಿಸಬೇಕೇ ಹೊರತು, ಬಾಡಿಗೆಗೆ ಓಡಿಸಿ ಕಂತು ಕಟ್ಟಿದರಾಯಿತು ಎಂದು ಯೋಚಿಸುವುದು ಸರಿಯಲ್ಲ. ಇದರಿಂದ ತನ್ನ ಬೇಸಾಯದ ಕೆಲಸವನ್ನು ಮುಂದೂಡಿ ಬಾಡಿಗೆಗಾಗಿ ಓಡಿಸಿ ಕಾಲಕಾಲಕ್ಕೆ ವ್ಯವಸಾಯ ಮಾಡದೆ ಉತ್ಪನ್ನ ಕಡಿಮೆಯಾಗಿ, ದುಡಿದ ಬಾಡಿಗೆ ರಿಪೇರಿಗೆ, ಕಂತಿಗೆ ಸಾಕಾಗದಾಗ ಸಂಸಾರಕ್ಕೆ ಬೇಕಾದ ಕನಿಷ್ಠ ಸೌಲಭ್ಯಗಳೊಂದಿಗೆ ಮಕ್ಕಳ ವಿದ್ಯಾಭ್ಯಾಸಕ್ಕೂ ಕುತ್ತು ಬರುವ ಅಪಾಯವಿದೆ. ಇದನ್ನು ತಪ್ಪಿಸಿಕೊಳ್ಳಲು ಜಮೀನು ಮಾರಬೇಕಾಗಬಹುದು. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು, ಅನುಭವಸ್ಥರ, ನಾಲ್ಕಾರು ವರ್ಷಗಳಿಂದ ಟ್ರ್ಯಾಕ್ಟರ್ ಇಟ್ಟಿರುವವರಿಂದ ಸಲಹೆ ಪಡೆದು, ಚರ್ಚಿಸಿ ನಿರ್ಧರಿಸುವುದು ಸೂಕ್ತ.

- ಜಿ.ಆರ್. ರಂಗೇಗೌಡ, ಗೋಣಿ ತುಮಕೂರು ಅಂಚೆ
ತುಮಕೂರು - 572 227

ಬೇಸಾಯಕ್ಕೆ ಕಿವಿ ಮಾತು

ಮಣ್ಣುರೂಪಾಂತರವಾಗಲು ಅನೇಕ ವರ್ಷಗಳು ಬೇಕಾಗಿದೆ. ಈ ಮಣ್ಣಿಗೆ ಜೀವ ತುಂಬಲು ಬ್ಯಾಕ್ಟೀರಿಯಗಳು, ಎರೆಹುಳು, ಮಣ್ಣು ಮುಕ್ಕ– ಗೆದ್ದಲು ಇತ್ಯಾದಿ ಜೀವಿಗಳು ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತವೆ. ಮಣ್ಣಿಗೆ ಸೇರಿಸಿದ ಯಾವುದೇ ಪ್ರಕೃತಿಯ ಗೊಬ್ಬರಗಳನ್ನು ಮಣ್ಣಿನಲ್ಲಿರುವ ಜೀವಿಗಳು ತಿಂದು, ಸಸ್ಯಗಳಿಗೆ ಬೇಕಾದ ಆಹಾರವನ್ನು ಒದಗಿಸುತ್ತದೆ. ಅಂದರೆ, ರಾಸಾಯನಿಕ ರೂಪ ಕೊಟ್ಟು ಸಸ್ಯಗಳಿಗೆ ಪೂರೈಸುತ್ತವೆ. ಈ ಕಾರ್ಯವನ್ನು ಬ್ಯಾಕ್ಟೀರಿಯಾಗಳು ನಿರ್ವಹಿಸಿದರೆ, ಎರೆಹುಳುಗಳು ಸಸ್ಯಗಳ ತ್ಯಾಜ್ಯವಸ್ತುಗಳನ್ನು ತಿಂದು ಗೊಬ್ಬರದ ರೂಪ ಕೊಡುತ್ತವೆ. ತಾವು ಜೀವಿಸಿರಲು ಸುರಂಗಗಳನ್ನು ನಿರ್ಮಿಸುವುದರಿಂದ ನೀರು, ಗಾಳಿ ಸಸ್ಯಗಳಿಗೆ ಸುಲಭವಾಗಿ ದೊರೆಯುತ್ತದೆ. ಮಣ್ಣು ಮುಕ್ಕ (ಎರೆಹುಳು) 1/2 ಅಡಿಯಿಂದ 1 ಅಡಿ ಉದ್ದವಾಗಿದ್ದು ಎರಡೂ ಕಡೆ ಚೂಪಾದ ಮೂತಿಯುಳ್ಳದ್ದಾಗಿದ್ದು, ಕಪ್ಪಾದ ಬಣ್ಣದಿಂದ, ಹಳದಿ ಚುಕ್ಕೆಗಳಿಂದ ಕೂಡಿರತ್ತದೆ. ಈ ಜೀವಿ ಕಂಡರೆ ಸಾಕು, ಮಣ್ಣು ಫಲವತ್ತಾಗಿದೆ ಎಂದು ನಿರ್ಧಯವಾಗಿ ಹೇಳಬಹುದು. ಇದು ಮಣ್ಣನ್ನು ತಿಂದು ಹೆಚ್ಚು ಫಲವತ್ತಾಗಿ ರೂಪಾಂತರಿಸುತ್ತದೆ. ಗೆದ್ದಲು ಹುಳು ಕೂಡ ಇಬ್ಬನಿ ನೀರಿನಿಂದ ನೆನೆದ ಕಸಕಡ್ಡಿಗಳನ್ನು ಮಣ್ಣಿಗೆ ಸೇರಿಸುತ್ತದೆ. ಗಾಯಗಳಿಗೆ ಗೆದ್ದಲು ಮಣ್ಣನ್ನು, ಹಾಲು ತುಪ್ಪದಲ್ಲಿ ಮಿಶ್ರ ಮಾಡಿ ಲೇಪಿಸಿದರೆ ಗುಣವಾಗುತ್ತದೆಯೆಂಬ ವಾಡಿಕೆ ಇಂದಿಗೂ ಇದೆ.

ನೀರು ಬೆಳೆಗಳಿಗೆ ಎಷ್ಟು ಅವಶ್ಯಕವೋ ಅಷ್ಟೇ ಅಪಾಯಕಾರಿ. ಮಣ್ಣಿನಲ್ಲಿ ನೀರು ಹೆಚ್ಚಿದರೆ ಶಕ್ತಿ ಕುಂದುತ್ತದೆ. ಕಣಗಳು ಒತ್ತಾಗಿ ಸೇರಿ ಸಸ್ಯಗಳಿಗೆ ಗಾಳಿ ದೊರಕದಂತಾಗಿ ಬೆಳೆಗಳು ಹಳದಿ ಬಣ್ಣಕ್ಕೆ ತಿರುಗಿ ಬೆಳವಣಿಗೆ ಕಡಿಮೆಯಾಗುತ್ತದೆ. ನೀರು ಕಡಿಮೆಯಾದರೆ ಮಣ್ಣಿನಲ್ಲಿರುವ ಪೋಷಕಾಂಶಗಳನ್ನು ಸಸ್ಯಗಳು ಪಡೆಯುವಲ್ಲಿ ವಿಫಲವಾಗುತ್ತವೆ. ಗಾಳಿ, ಸಸ್ಯಗಳಿಗೆ ಉಸಿರಾಡಲು, ಆಹಾರ ತಯಾರಿಸಲು ಅವಶ್ಯಕವಾಗಿದ್ದು ಬೇರುಗಳಿಗೆ ಗಾಳಿ ದೊರಕದೇ ಇದ್ದರೆ ಬೆಳವಣಿಗೆ ಕುಂಠಿತವಾಗುತ್ತದೆ.

ಮಣ್ಣಿಗೆ ಶಕ್ತಿ ಕೊಡಲು ಕಾಂಪೋಸ್ಟ್ ಗೊಬ್ಬರ, ಕೆರೆ ಕಟ್ಟೆ ಗೋಡು, ಸಸ್ಯಗಳ ಉಳಿಕೆ ಭಾಗಗಳನ್ನು ಸೇರಿಸಬೇಕು. ಒಟ್ಟಾರೆ ಎಷ್ಟು ತೂಕದ ಬೆಳೆ ಹೊರ ತೆಗೆಯುತ್ತೇವೋ ಅಷ್ಟೇ ಪ್ರಮಾಣದ ತ್ಯಾಜ್ಯ ವಸ್ತುಗಳನ್ನು ಸೇರಿಸುತ್ತಿರಬೇಕು. ಈ ಕಾರ್ಯ ನಿರಂತರವಾಗಿ ಸಾಗಿದರೆ ಮಣ್ಣಿನ ಆರೋಗ್ಯ ಉತ್ತಮವಾಗಿರುತ್ತದೆ.

- ಬಿ.ಬಸವರಾಜು ಸಂತೇಶಿವರ, ಹಾಸನ

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ, ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ಸಾವಯವ ಕೃಷಿಕ ದೇವರಾವ್‌ರ ದೇಶೀಯ ತಳಿಗಳು

ದಕ್ಷಿಣ ಕನ್ನಡ ಜಿಲ್ಲೆ ಪರ್ಯಾಯ ಸಾವಯವ ಕೃಷಿ ಪ್ರಯೋಗದಲ್ಲಿ ಒಂದು ವಿಶಿಷ್ಟವಾದ ಜಿಲ್ಲೆ ಎಂದರೆ ತಪ್ಪಾಗಲಾರದು. ಈ ನಿಟ್ಟಿನಲ್ಲಿ ಎಲೆಮರೆಯ ಕಾಯಿಯಂತೆ ಇರುವ ಎಷ್ಟೋ ಸಾವಯವ ಕೃಷಿಕ ಕುಟುಂಬಗಳನ್ನು ಇಲ್ಲಿ ಕಾಣಬಹುದು. ಅಂತಹ ಕುಟುಂಬಗಳಲ್ಲಿ ಒಂದು ಬಿ. ಕೆ. ದೇವರಾವ್ ಕುಟುಂಬ.

ದೇವರಾವ್ ಕುಟುಂಬವು ಸಹ ಕೆಲವು ವರ್ಷಗಳ ಕಾಲ ರಾಸಾಯನಿಕ ಗೊಬ್ಬರವನ್ನು ಬಳಕೆ ಮಾಡಿದ್ದು ಇದರಿಂದ ಆದ ದುಷ್ಪರಿಣಾಮವನ್ನು ಗಮನಿಸಿ, ತಮ್ಮ ಪೂರ್ವಿಕರಿಂದ ಅನುಸರಿಸುತ್ತಿದ್ದ ಕೃಷಿ ಪದ್ಧತಿಯನ್ನೇ ಮುಂದುವರಿಸಲು ಪ್ರಾರಂಭಿದರು.

ಪರಮೇಶ್ವರರಾವ್ ಅಭಿಪ್ರಾಯದಂತೆ "ಈ ಭೂಮಿ ನಮ್ಮದಲ್ಲ, ಗಾಳಿ ನಮ್ಮದಲ್ಲ, ನೀರೂ ನಮ್ಮದಲ್ಲ, ಎಲ್ಲ ಹಿರಿಯರಿಂದ ಬಳುವಳಿಯಾಗಿ ಬಂದುದು. ಆದುದರಿಂದ ನೀರು, ಗಾಳಿ, ಭೂಮಿಯನ್ನು ಕಲುಷಿತಗೊಳಿಸುವ ಹಕ್ಕು ನಮಗಿಲ್ಲ, ನಾವು ನಮ್ಮ ಹಿರಿಯರಿಂದ ಯಾವ ರೀತಿ ಪಡೆದಿದ್ದೇವೋ, ಹಾಗೆಯೇ ನಮ್ಮ ಕಿರಿಯರಿಗೆ ನಾವು ಕೊಡುವುದು ನಮ್ಮ ಕರ್ತವ್ಯವಾಗಿದೆ ".

ಶ್ರೀ ಬಂಗಾರಿ ಕಿಲ್ಲೂರು ದೇವರಾವ್ ಅವರಿಗೆ ಪಿತ್ರಾರ್ಜಿತವಾಗಿ ಬಂದ 30 ಎಕರೆ ಭೂಮಿ ಇದೆ. ಇದರಲ್ಲಿ 4 ಎಕರೆಯಲ್ಲಿ ಭತ್ತ, ಸುಮಾರು 2 ಎಕರೆಯಲ್ಲಿ ಅಡಿಕೆ, 250 ತೆಂಗು, ಗೇರು ಬೆಳೆಯಲಾಗಿದೆ. ಇವುಗಳೊಂದಿಗೆ ಉಪಬೆಳೆಯಾಗಿ ಮೆಣಸು, ಮನೆಯ ಉಪಯೋಗಕ್ಕೆ ಸ್ಥಳೀಯ ತರಕಾರಿಗಳು ಮತ್ತು ಮಲೆನಾಡಿನ ಸಾಂಪ್ರದಾಯಿಕ ಗಿಡ್ಡತಳಿಗಳ ಹಸುಗಳು, ಇವೇ ಇವರ ಆಸ್ತಿ. ಗೋಬರ್ ಗ್ಯಾಸ್ ಸ್ಲರಿಯಿಂದ ಕಾಂಪೋಸ್ಟ್ ತಯಾರಿಕೆ. ತಳಿಗಳ ಇಳುವರಿಯ ಮೇಲೆ ಗೊಬ್ಬರದ ಪ್ರಮಾಣ ನಿಗದಿ ಮಾಡುತ್ತಾರೆ.

ಬಿ. ಕೆ. ದೇವರಾವ್ ಕುಟುಂಬದವರು ಭತ್ತದ ಹಳೆ ತಳಿಗಳ ಬೀಜ ಸಂರಕ್ಷಣೆಗೆ ಹೆಚ್ಚು ಕಾಳಜಿ ವಹಿಸಿದವರು. 30 ವರ್ಷಗಳ ಹಿಂದೆ 55ಕ್ಕೂ ಹೆಚ್ಚು ಭತ್ತದ ತಳಿಗಳು ಮಿತ್ತಬಾಗಿಲು ಗ್ರಾಮದಲ್ಲಿಯೇ ಇತ್ತಂತೆ. ಆದರೆ ಇಂದು 33 ತಳಿಗಳು ಮಾತ್ರ ಉಳಿದಿವೆಯಂತೆ, ಇದರಲ್ಲಿ ತಮ್ಮ ಸುತ್ತ ಮುತ್ತಲಲ್ಲಿ ಲಭ್ಯವಾದ 22 ಭತ್ತದ ತಳಿಗಳನ್ನು ದೇವರಾಯರೇ ತಂದು, ನೆಟ್ಟು ಬೆಳಸಿದ್ದಾರೆ. ಈ ತಳಿಗಳಲ್ಲಿ ಹೆಚ್ಚಿನವು ಹಳೆಯ ತಲೆಮಾರಿನವು. ದೇವರಾವ್‌ರು ಸಣ್ಣವರಾಗಿದ್ದಾಗ ನೂರಕ್ಕೂ ಹೆಚ್ಚು ತಳಿ ವೈವಿಧ್ಯತೆ ಮಿತ್ತಬಾಗಿಲಿನಲ್ಲೆ ಇತ್ತು ಎಂದು ಹೇಳುತ್ತಾರೆ. ಒಂದೊಂದು ತಳಿಯದ್ದೂ ಒಂದೊಂದು ವಿಶೇಷತೆ. ಪೈರಿನ ಎತ್ತರ, ಭತ್ತದ ಬಣ್ಣ, ಅಕ್ಕಿ ರುಚಿ ಹೀಗೆ ಹತ್ತು ಹಲವು. ದೇವರಾವ್ ಅವರ ತಾಯಿ ಹೇಳುತ್ತಾರೆ, ಕುಂಕುಮ ಭತ್ತ ಇತ್ತಂತೆ, ಅದರ ತೆನೆ ಸಂಪೂರ್ಣ ಕುಂಕುಮ ವರ್ಣದಂತೆ. ಈ ಭತ್ತದ ಅವಲಕ್ಕಿ ತುಂಬ ರುಚಿಯೆಂದು ಹೇಳುತ್ತಾರೆ. ಹೀಗೆ ಒಂದೊಂದು ತಳಿಯೂ ಒಂದೊಂದು ಅಡಿಗೆಗೆ ರುಚಿಯಂತೆ. ದೇವರಾವ್‌ರ ಮಗ ಪರಮೇಶ್ವರರಾವ್ ಅವರು ಸುಮಾರು 22 ತಳಿಗಳ ಬಗ್ಗೆ ಹೇಳಿದರು, ಅದರಲ್ಲಿ ಕೆಲವು ಇಂತಿವೆ:

ಅತಿಕರಯ: ಇದು ತುಂಬ ಸತ್ವ ಭರಿತ ಹಾಗು ಔಷಧೀಯ ಬಳಕೆಯಲ್ಲಿ ಉಪಯೋಗಿಸುತ್ತಿದ್ದರಂತೆ. ಡಿಸಂಬರ್‌ನಿಂದ ಮಾರ್ಚ್ ತನಕ ತೆನೆ ಬರುವ ಇದು ಸಮಯ ತಪ್ಪಿದರೆ ತೆನೆ ಬರುವುದಿಲ್ಲ. ಇದಕ್ಕೆ 120 ದಿನಕ್ಕೂ ಹೆಚ್ಚು ಅವಧಿ ಬೇಕಾಗುತ್ತದೆಯಂತೆ. ಇದು ಸಹಜ ಕೃಷಿಯಲ್ಲಿ ಬೆಳೆಸಲು ಅನುಕೂಲಕರ ತಳಿ ಎಂದು ಅಭಿಪ್ರಾಯ ಪಡುತ್ತಾರೆ.

ರಾಜಕಯಮೆ: ಎತ್ತರ ಬೆಳೆಯುವಂತಹ ಇದು ಸಹಜ ಕೃಷಿಯಲ್ಲಿ ಬೆಳೆಯಲು ಅನುಕೂಲಕರ. ದುಂಡಾಗಿರುವ ಅಕ್ಕಿ ತುಂಬ ರುಚಿ. 170 ದಿನಗಳ ದೀರ್ಘ ಬೆಳೆ.

ಕರಿಯ ಜೇಬಿ: ಎತ್ತರ ಬೆಳೆ, ಕಾವೇರಿ ಸಂಕ್ರಮಣದ ಕಾಲದಲ್ಲಿ ನೇಜಿ ಹಾಕದಿದ್ದಲ್ಲಿ ತೆನೆ ಸರಿಯಾಗಿ ಬರುವುದಿಲ್ಲ. ರುಚಿಯಾದ ಅಕ್ಕಿಯೊಂದಿಗೆ ಜಾನುವಾರುಗಳಿಗೂ ರುಚಿಕರವಾದ ಹುಲ್ಲು. ತೆನೆಯನ್ನು ಕಾಡುವ ತಿಗಣೆಯನ್ನು ದೂರ ಇಡುತ್ತದೆ.

ಗಂಧಸಾಲೆ: ಬಹಳ ಎತ್ತರ ಬೆಳೆಯುವ ಇದು ದೀರ್ಘಾವಧಿಯ ಬೆಳೆ. ಹೆಸರಿಗನುಗುಣವಾಗಿ ಸುವಾಸನೆಯುಕ್ತವಾಗಿ, ಸಣ್ಣಕ್ಕಿಯಾಗಿ ತಿಂಡಿಗೆ ರುಚಿಕರವಾಗಿದ್ದು ತೆನೆ ಬಂದ 20 ದಿನದಲ್ಲಿ ಕೊಯ್ಲು.

ಕಯಮೆ: ಎತ್ತರದ ಬೆಳೆ. ರುಚಿ ಹಾಗೂ ಕೆಂಬಣ್ಣದ ಅಕ್ಕಿ. ಕನಿಷ್ಠ ಗೊಬ್ಬರವೂ ಬೇಕಿಲ್ಲ. ಮಳೆ ಇದ್ದಷ್ಟೂ ಬೆಳೆ.

ಮಸೂರಿ: ಒಳ್ಳೆ ರುಚಿಯನ್ನು ಹೊಂದಿದ್ದರೂ, ಹಳೆಯ ಅಕ್ಕಿಯಾದಷ್ಟು ಇನ್ನೂ ರುಚಿ ಹಾಗೂ ನೋಡಲೂ ಶ್ರೇಷ್ಠ ಮಟ್ಟದ ಅಕ್ಕಿ. ಸ್ವಲ್ಪ ಮಟ್ಟಿಗೆ ಕಾಂಡ ಕೊರಕ ಹುಳದ ಸಮಸ್ಯೆ ಇದೆ. ಒಳ್ಳೆಯ ಇಳುವರಿ ಇದೆ.

ಆಲ್ಕಂಡೆ: ಕಯಮೆಯಂತೆಯೇ ಇದ್ದು, ದಂಡು ಸೇರಿ ಎಲ್ಲವೂ ಕೆಂಪು, ಕಸ ತೆಗೆಯಲು ಸುಲಭವಾಗಿದ್ದು, ಎಣೆಲು ಬೆಳೆಯಾಗಿದೆ.

ಕಾವಳ ಕಣ್ಣು: ಎತ್ತರದ ಹಾಗೂ ಮಧ್ಯಮ ಅವಧಿಯ ಬೆಳೆಯಾಗಿದ್ದು, ಭತ್ತದ ತುದಿ ಬೊಟ್ಟನ್ನು ಒಳಗೊಂಡಿದ್ದು, ತೆನೆ ಬರುವಾಗ ಇಡೀ ಪೈರು ಕುಂಕುಮದಂತೆ ಕೆಂಪಾಗಿ ಕಾಣುತ್ತದೆ.

ಕುಳಂಜ ಪಿಳ್ಳೆ: ಎತ್ತರದ ಬೆಳೆ. ಕೆಂಪಗಿನ ಹಾಗು ಸ್ವಲ್ಪ ಸಣ್ಣದಾದ ಭತ್ತ. ಬಿತ್ತನೆಗೆ ಯೋಗ್ಯವಾಗಿದ್ದು ಕಡಿಮೆ ಅವಧಿಯ 75 ದಿನಗಳಲ್ಲಿ ಕೊಯ್ಯಬಹುದಾಗಿದೆ.

ಮೊರದ್ದ: ಎತ್ತರವಾಗಿ ಬೆಳೆಯುವ, ದೊಡ್ಡ ಗಾತ್ರದ, ಸ್ಥಳೀಯ ತಳಿಯಾಗಿದ್ದು, ಕೆಂಪನೆಯ, ಅಲ್ಪಾವಧಿಯ 90 ದಿನಗಳಲ್ಲಿ ಕೊಯ್ಯಬಹುದಾಗಿದೆ. ಕುಳಂಜ ಪಿಳ್ಳೆ ಮತ್ತು ಇದು 3 ಬೆಳೆಗೂ ಆಗುವಂತಹದು.

ಕಂಡ್ರೆ ಕುಟ್ಟಿ: ಎತ್ತರ ತಳಿಯ ಇದನ್ನು ಉಬರಮುಂಡ ಎಂದೂ ಕರೆಯುತ್ತಾರೆ. ಸುಗ್ಗಿ ಬೆಳೆಗೆ ಹೇಳಿ ಮಾಡಿಸಿದ್ದು, ಸಾಧಾರಣ ರುಚಿಯುಳ್ಳ ಇದಕ್ಕೆ ಫಲವತ್ತಾದ ಗದ್ದೆ ಬೇಕು. 165 ದಿನದ ಬೆಳೆ.

ಕುಟ್ಟಿಕಯಮೆ: ಎತ್ತರ ತಳಿಯ ಇದಕ್ಕೆ ಗೊಬ್ಬರ ಅಷ್ಟಾಗಿ ಬೇಕಾಗಿಲ್ಲ, ರೋಗದ ಬಾಧೆಯೂ ಕಡಿಮೆ, ಒಳ್ಳೆಯ ರುಚಿಯನ್ನೊಳಗೊಂಡಿದೆ.

ಅತಿಕಾಯ: ಎತ್ತರದ ತಳಿಯಾಗಿದ್ದು, ಕೆಂಪನೆ ಬಣ್ಣದ ಇದು ಚಳಿಯಾದಷ್ಟು ಚೆನ್ನಾಗಿ ಬರುತ್ತದೆ. ಸುಗ್ಗಿ ಬೆಳೆಯ ಅತಿಕಾಯ ಅಕ್ಕಿಯ ಗಂಜಿ ರುಚಿಯಾಗಿದ್ದು, 110 ದಿನದ ಮಧ್ಯಮ ಅವಧಿಯ ಬೆಳೆ.

ಸುಗ್ಗಿ ಕಯಮೆ: ಎತ್ತರದ ತಳಿಯಾಗಿದ್ದು, ಕುಟ್ಟಿ ಕಯಮೆಯಂತೆಯೇ, ರುಚಿಯಾಗಿದ್ದು ಗೊಬ್ಬರ ಅಷ್ಟಾಗಿ ಅಗತ್ಯವಿಲ್ಲ ಹಾಗೂ ರೋಗದ ಬಾಧೆಯೂ ಕಡಿಮೆ.

ಅಳಿವಿನಂಚಿನಲ್ಲಿ ಜೀವ ವಿವಿಧತೆ

*ಇದ್ದಕ್ಕಿದ್ದಂತೆ ಸಸ್ಯ ಸಂಪತ್ತು, ಜೀವ ವೈವಿಧ್ಯತೆ ಕುರಿತು ಕಳಕಳಿಯ ಮಾತುಗಳು ವಿಶ್ವ ವಾಣಿಜ್ಯ ಸಂಸ್ಥೆ, ಗ್ಯಾಟ್, ಸಿ.ಬಿ.ಡಿ **(Convention on Biological Diversity)** ಹೀಗೇ ವಿಶ್ವ ಮಟ್ಟದ ಇತ್ತೀಚಿಗಿನ ಹಲವಾರು ಸಂಸ್ಥೆ ಮತ್ತು ಒಡಂಬಡಿಕೆಗಳ ಹಿನ್ನಲೆಯಲ್ಲಿ ಕೇಳಿಬರುತ್ತಿವೆ. ಏನು ಇವೆಲ್ಲಾ ? ಸಸ್ಯ ಸಂಪತ್ತು, ಜೀವ ವೈವಿಧ್ಯತೆ ಕಣ್ಮರೆಯಾಗುವುದೆಂದರೇನು?*

- *ಪ್ರಾಣಿಗಳ ದೇಶೀಯ ತಳಿಗಳು ವರ್ಷಕ್ಕೆ ಶೇಕಡಾ 5ರ ಪ್ರಮಾಣದಲ್ಲಿ ಕಣ್ಮರೆಯಾಗುತ್ತಿವೆ. ಪ್ರಸಕ್ತ ಇರುವ ತಳಿಗಳಲ್ಲೂ ಸುಮಾರು ಮೂರನೇ ಒಂದು ಭಾಗದಷ್ಟು ವಿನಾಶದ ಅಂಚಿನಲ್ಲಿವೆ.*
- *ಉಷ್ಣ ವಲಯದ ಕಾಡುಗಳು ನಿಮಿಷಕ್ಕೆ 29 ಹೆ. ನಷ್ಟು ಅಥವಾ ವರ್ಷಕ್ಕೆ ಶೇಕಡಾ 1 ರಷ್ಟು ನಾಶವಾಗುತ್ತಿವೆ.*
- *ಶೇಕಡಾ 70 ರಷ್ಟು ಸಮುದ್ರ, ಜೀವಿಗಳು ವಿನಾಶದ ಅಂಚಿನಲ್ಲಿವೆ.*
- *ಶೇಕಡಾ 60 ರಷ್ಟು ಹವಳ ದಿಬ್ಬಗಳು ಅಪಾಯದ ಸ್ಥಿತಿ ತಲುಪಿವೆ.*
- *34,000 ಸಸ್ಯ ಪ್ರಭೇಧಗಳು ಅರ್ಥಾತ್ ಶೇಕಡಾ 12.5 ರಷ್ಟು ಜಗತ್ತಿನ ಸಸ್ಯ ಸಂಕುಲ ಅಪಾಯದ ಸ್ಥಿತಿಯಲ್ಲಿವೆ.*
- *ಒಂದು ಸಸ್ಯ ಪ್ರಭೇದ ನಾಶವಾಗುವಾಗ ಅದರ ಜೊತೆಯಲ್ಲೇ ಸೂಕ್ಷ್ಮಾಣು ಜೀವಿಗಳು, ಬ್ಯಾಕ್ಟೀರಿಯಾ, ಫಂಗೈ, ಹೀಗೇ ಅದರ ಮೇಲೆ ಆಧಾರಿತ ಸುಮಾರು 30 ಇತರ ಜೀವ ಪ್ರಭೇಧಗಳೂ ಕಣ್ಮರೆಯಾಗುವುದು ಒಟ್ಟಾರೆ ನಮ್ಮ ಮುಂದೆ ಎಂಥ ದುರಂತ ಕಾದಿದೆ ಎಂಬುದರ ಸಂಕೇತವೆ ?*

ಕೀಟ ನಾಶಕದ ವಿರುದ್ಧ ಬಂಡೆದ್ದ ಪಡ್ರೆ ಜನರು

ಕರ್ನಾಟಕ ಹಾಗೂ ಕೇರಳದ ನಡುವೆ ಇರುವ ಹಳ್ಳಿ 'ಪಡ್ರೆ'. ಕಳೆದ 30 ವರ್ಷಗಳಿಂದ ಹೆಲಿಕಾಪ್ಟರ್‌ಗಳ ಮುಖಾಂತರ 'ಎಂಡೋಸಲ್ಫಾನ್' (Endosulfon) ಎಂಬ ಕ್ರಿಮಿನಾಶಕವನ್ನು 'ಪ್ಲಾಂಟೇಶನ್ ಕಾರ್ಪೊರೇಷನ್ ಆಫ್ ಕೇರಳ '(Plantation Corporation of Kerala) ಎನ್ನ ಮಕಜೆ ಪಂಚಾಯಿತಿಗೆ ಸೇರಿದ ಹಳ್ಳಿಗಳ ಸುತ್ತಮುತ್ತೆಲ್ಲಾ ಸಿಂಪಡಿಸುತ್ತಾ ಬಂದಿದೆ. 'ಪಡ್ರೆ' ಇಂತಹ ಹಳ್ಳಿಗಳಲ್ಲಿ ಒಂದು. ಗೇರು ಬೆಳೆಗೆ ಕಾಟ ಕೊಡುವ ಒಂದು ಜಾತಿಯ ಸೊಳ್ಳೆ (Tea Mosquito) ಯನ್ನು ಹತೋಟಿಯಲ್ಲಿಡಲು ಔಷಧಿ ಸಿಂಪಡಿಸುತ್ತಾರೆ. ಉದ್ದೇಶವೇನೋ ಸರಿ; ಆದರೆ ಬಾನಿನಿಂದ ಸಿಂಪಡಿಸುವಾಗ ಬಾವಿ, ಕೆರೆಗಳಿಗೂ ಔಷಧಿ ಬೀಳುತ್ತದೆ. ಪರಿಣಾಮ ! ಅಧಿಕ ಪ್ರಮಾಣದಲ್ಲಿ ಕಂಡು ಬರುವ ಕ್ಯಾನ್ಸರ್, ಮಾನಸಿಕ ಕಾಯಿಲೆಗಳು ಇವುಗಳಿಗೆಲ್ಲಾ ಈ 'ಎಂಡೋಸಲ್ಫಾನ್' ಕಾರಣ ಎಂಬುದು ಪಡ್ರೆ ಹಳ್ಳಿಯಲ್ಲಿ ಸುಮಾರು 16 ವರ್ಷಗಳಿಂದ ವೈದ್ಯವೃತ್ತಿ ನಡೆಸುತ್ತಿರುವ ಡಾ. ಮೋಹನ್ ಕುಮಾರ್ ಅಭಿಪ್ರಾಯ. ಬರೀ ಮನುಷ್ಯರಷ್ಟೇ ಅಲ್ಲ. ಪ್ರಾಣಿ-ಪಕ್ಷಿಗಳ ಮೇಲೂ ಇದು ಸಾಕಷ್ಟು ದುಷ್ಪರಿಣಾಮ ಬೀರಿದೆ ಎನ್ನುತ್ತಾರೆ ಹಳ್ಳಿಗರು. 'ಪಡ್ರೆ' ಗ್ರಾಮದ ಹಳ್ಳಿಗರೀಗ ಜಾಗ್ರತರಾಗಿದ್ದಾರೆ. 'ಎಂಡೋಸಲ್ಫಾನ್' ಸಿಂಪಡಣೆ ವಿರುದ್ಧ ಆಂದೋಲನವನ್ನೇ ಆರಂಭಿಸಿದ್ದಾರೆ. ಈ ಔಷಧಿಯ ದುಷ್ಪರಿಣಾಮದ ಕುರಿತು ಸರಿಯಾದ ತನಿಖೆ ನಡೆಸಿ, ನೊಂದವರಿಗೆ ಸೂಕ್ತ ಪರಿಹಾರ ಒದಗಿಸುವಂತೆ, ಸ್ಥಳೀಯ ಪಂಚಾಯಿತಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದೆ.

ಮೂಲ: ಡೆಕ್ಕನ್ ಹೆರಾಲ್ಡ್, ಜನವರಿ 16, 2001

ಫಾರ್ ಈಸ್ಟರ್ನ್ ರಿವ್ಯೂ ಪತ್ರಿಕೆಯ ಸಂಶೋಧನಾ ಚಿನ್ನದ ಪ್ರಶಸ್ತಿ ಪ್ರೊ.ಅನಿಲ್ ಗುಪ್ತ ಹಾಗೂ ಸೃಷ್ಟಿ ಮಡಿಲಿಗೆ

ಅಕ್ಟೋಬರ್ 26, 2000 ದ ಫಾರ್ ಈಸ್ಟರ್ನ್ ರಿವ್ಯೂ (Far Eastern Review) ಪತ್ರಿಕೆಯಲ್ಲಿ ಪ್ರಕಟಿತ ಲೇಖನವನ್ನು ಆಧರಿಸಿ, ಪತ್ರಿಕಯ ಸಂಶೋಧನಾ ಚಿನ್ನದ ಪ್ರಶಸ್ತಿ; ಪ್ರೊ.ಅನಿಲ್ ಗುಪ್ತಾರವರಿಗೆ ಅರ್ಥಾತ್ ಅವರ 'ಸೃಷ್ಟಿ' (SRISTI - Society for Research and Initiatives for Sustainable Technologies and Innovations)ಗೆ ಸಂದಿದೆ. ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಆ ಸಂಶೋಧನೆಯನ್ನು ಉಪಯುಕ್ತಗೊಳಿಸುವ ಹಾಗೂ ಮೌಲ್ಯ ಸೇರಿಸುವ ಪ್ರೊ.ಅನಿಲ್ ಗುಪ್ತಾರ ಪ್ರಯತ್ನಕ್ಕೆ ಸಂದ ಗೌರವ ಈ ಪ್ರಶಸ್ತಿ.

ಅಹಮದಾಬಾದಿನ ಭಾರತೀಯ ನಿರ್ವಹಣಾ ಸಂಸ್ಥೆ (Indian Institute of Management) ಯಲ್ಲಿ ಪ್ರೊಫೆಸರ್ ಆಗಿರುವ ಅನಿಲ್ ಗುಪ್ತಾರವರು ತಳ ಮಟ್ಟದ ಸಂಶೋಧಕರ ಹುಡುಕಾಟ ಹಾಗೂ ನೆರವಿಗಾಗಿ ಸ್ಥಾಪಿಸಿದ ಸಂಸ್ಥೆ ಸೃಷ್ಟಿ. ಸೃಷ್ಟಿಯ ಅಂಗ ಭಾಗವೇ ಹನೀಬೀ ನೆಟ್‌ವರ್ಕ್. ವಿವಿಧ ಪ್ರಾಂತ್ಯ, ಭಾಷೆಯ ಜನರ ತಳಮಟ್ಟದ ಆದರೆ ಗುರುತರ ಸಂಶೋಧನೆ, ಜ್ಞಾನ ಸಂಪತ್ತು, ಜೀವ ವೈವಿಧ್ಯತೆ ಇವನ್ನೆಲ್ಲಾ ಗುರುತಿಸಿ, ದಾಖಲಿಸಿ, ಹರಡುವ ಪತ್ರಿಕಾ ಮಾಧ್ಯಮ ಇದು. ಜೇನು ನೊಣದಂತೆ ಸಂಗ್ರಹಿಸಿ ಪಸರಿಸುವ ಕೆಲಸ ಇದು.

ಕನ್ನಡ, ತಮಿಳು, ತೆಲುಗು, ಪಂಜಾಬಿ, ಹಿಂದಿ, ಗುಜರಾತಿ ಹೀಗೆ ಆರು ದೇಶೀಯ ಭಾಷೆಗಳಲ್ಲಿ ಹಾಗೂ ಇಂಗ್ಲೀಷ್ ಮತ್ತು ಸ್ಪಾನಿಷ್ ಭಾಷೆಗಳಲ್ಲಿ ಹಬ್ಬಿರುವ ಈ ಹನೀಬೀ ನೆಟ್‌ವರ್ಕ್ ಈಗಾಗಲೇ ಸುಮಾರು 10,000 ಶೋಧನೆಗಳನ್ನು ಗುರುತಿಸಿ ದಾಖಲಿಸಿದೆ. 'ಸೃಷ್ಟಿ' ಈ ರೀತಿಯ ಹಲವಾರು ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಅವರ ಸಂಶೋಧನೆಗಳಿಗೆ ಪೇಟೆಂಟ್ ಕೊಡಿಸಲು ಪ್ರಯತ್ನಿಸಿದೆ. ಮಾತ್ರವಲ್ಲ, ಅಂತಹ ಸಂಶೋಧಕರಿಗೆ ಮೂಲ ಬಂಡವಾಳದ ನೆರವು ಒದಗಿಸಿ, ಉದ್ಯಮ ಸ್ಥಾಪಿಸಲೂ ಸಹಾಯಕವಾಗಿದೆ. ಈ ರೀತಿಯ ನೆರವಿನ ಒಂದು ಉದಾಹರಣೆಯೆಂದರೆ, ಗುಜರಾತಿನ ಒಬ್ಬ ದೇಶೀಯ ಸಂಶೋಧಕ ಅಮೃತಭಾಯಿ, ಅಮೃತಭಾಯಿಯ ಬಾಗುವ ಎತ್ತಿನ ಗಾಡಿ 'ಆರುಣಿ'ಯ ಐದು ವರ್ಷದ ಪೇಟೆಂಟ್‌ನ ಲೈಸನ್ಸ್‌ನಿಂದ ದೊರೆತ ಹಣ ಸುಮಾರು ರೂ. 84,000.

ಈ ರೀತಿಯ ತಳಮಟ್ಟದ ಸಂಶೋಧಕರ ನೆರವಿಗಾಗಿ ಮೂಲ ಬಂಡವಾಳ ಒದಗಿಸುವ ಉದ್ದೇಶದಿಂದ ಪ್ರೊ.ಗುಪ್ತಾರವರು ಹುಟ್ಟು ಹಾಕಿದ ಸಂಸ್ಥೆ 'ಗ್ಯಾನ್' (Gujarat Grassroot Innovations Augmentation Network). ಈ ರೀತಿಯ ನೆರವನ್ನು ರಾಷ್ಟ್ರಮಟ್ಟದಲ್ಲಿ ಬಲಗೊಳಿಸುವ ಉದ್ದೇಶದಿಂದ, ಕೇಂದ್ರ ಸರಕಾರದ ನೆರವಿನಿಂದ ರಾಷ್ಟ್ರೀಯ ಸಂಶೋಧನಾ ಸಂಸ್ಥೆ [National Innovation Foundation (NIF)]ಯನ್ನು ಕೂಡಾ ಪ್ರೊ. ಗುಪ್ತಾರವರು ಹುಟ್ಟು ಹಾಕಿದ್ದಾರೆ. ಈ NIFನ ವತಿಯಿಂದ ತಳಮಟ್ಟದ ಶೋಧಕರನ್ನು ಗುರುತಿಸಿ, ಬಹುಮಾನ ಕೊಟ್ಟು ಉತ್ತೇಜಿಸುವ ಯೋಜನೆಯನ್ನು ಶುರು ಮಾಡಲಾಗಿದ್ದು ಸಾಕಷ್ಟು ದೊಡ್ಡ ಪ್ರಮಾಣ ದಲ್ಲಿ ಈ ಹುಡುಕಾಟ ಆರಂಭವಾಗಿದೆ.

ಪ್ರೊ. ಅನಿಲ್ ಗುಪ್ತಾರವರ ಯೋಜನೆಗಳು, ಕನಸುಗಳು ಹಲವಾರು. ತಳಮಟ್ಟದ ಸಂಶೋಧನೆಗೆ ಮೌಲ್ಯ ಸೇರಿಸಿ, ಆಧುನಿಕ ಮಾಹಿತಿ ತಂತ್ರಜ್ಞಾನ, ಆಧುನಿಕ ವಿಜ್ಞಾನದ ಬೆಸುಗೆ ಹಾಕಿ ಪಾರಂಪಾರಿಕ, ಸ್ಥಳೀಯ ಜ್ಞಾನ ಹಾಗೂ ಶೋಧನೆಗಳನ್ನು ಮಾಹಿತಿ ತಂತ್ರಜ್ಞಾನದಲ್ಲಿ ದಾಖಲಿಸಿ, ಪಸರಿಸುವ ಅವರ ಇನ್ನೊಂದು ಯೋಜನೆ INFO-DEV ಪ್ರಾಜೆಕ್ಟ್. ಹೀಗೆ ಹಲವು ಕನಸು, ಯೋಜನೆಗಳ ಹರಿಕಾರ ಪ್ರೊ.ಅನಿಲ್ ಗುಪ್ತಾರಿಗೆ ಸಂದ ಪ್ರಶಸ್ತಿಗೆ 'ಹಿತ್ತಲಗಿಡ' ಅಭಿನಂದನೆ ಸಲ್ಲಿಸುತ್ತದೆ. ಹಾಗೂ ಈ ಯೋಜನೆಗಳ ಅಂಗವಾಗಿರುವ ಬಗ್ಗೆ ಹಿತ್ತಲಗಿಡ ಹೆಮ್ಮೆ ಪಡುತ್ತದೆ.

ಕುಷ್ಠ ರೋಗಕ್ಕೆ ನಷ್ಟವಿಲ್ಲದ ನಾಟೀ ಔಷಧಿಗಳು

ಕುಷ್ಠರೋಗ ಅನುವಂಶಿಕವಾಗಿ ಬರುವಂತಹ ರೋಗ. ಈ ರೋಗಕ್ಕೆ ಇಂದು ಅಲೋಪತಿ ಔಷಧಿಗಳು ಉಂಟು. ಹಾಗೆಯೇ ಈ ರೋಗವನ್ನು ಗುಣಪಡಿಸುವಂತಹ ಹಲವಾರು ಗಿಡಮೂಲಿಕೆಗಳು ಇವೆ. ಮಾಗಡಿ ಆರ್. ಗುರುದೇವ್ ಅವರು 'ಕರ್ನಾಟಕದಲ್ಲಿ ಔಷಧಿ ಸಸ್ಯಗಳು ಮಾಲಿಕೆಯಲ್ಲಿ' ಇಂತಹ ಸುಮಾರು ಎಂಟು ಸಸ್ಯಗಳನ್ನು ಹೆಸರಿಸಿದ್ದಾರೆ. ಅವುಗಳ ಉಪಯೋಗದ ಪರಿಚಯ ಕೆಳಗೆ ಕೊಡಲಾಗಿದೆ.

1.ಅಮೃತ ಬಳ್ಳಿ (*Tinosporacor difolia*) :- ಈ ಗಿಡವನ್ನು ಇತ್ತೀಚಿನ ದಿನಗಳಲ್ಲಿ ನಗರವಾಸಿಗಳು ತಮ್ಮ ಮನೆಗಳ ಮುಂದೆ ಅಲಂಕಾರಿಕ ಬಳ್ಳಿ ಗಿಡವಾಗಿ ಬೆಳೆಸುತ್ತಿದ್ದಾರೆ. ಬೇಸಿಗೆಯಲ್ಲಿ ಎಲೆಯುದುರುವ ಈ ಬಳ್ಳಿಯು, ಕಳ್ಳಿ ಕುರುಚಲು ಗಿಡ ಇಂತಹ ಬೇರೆ ಜಾತಿಯ ಸಸ್ಯಗಳನ್ನೊಳಗೊಂಡು ಹಬ್ಬುತ್ತದೆ. ಈ ಬಳ್ಳಿಯನ್ನು ಕುಷ್ಠರೋಗಕ್ಕೆ ಬಳಸುವ ವಿಧಾನ ಹೀಗಿದೆ. ಬಳ್ಳಿಯ ಕಾಂಡದಿಂದ ಆಗ ತಾನೆ ತೆಗೆದ 7-14 ಮಿ.ಲೀ. ರಸಕ್ಕೆ ಜೇನುತುಪ್ಪ ಸೇರಿಸಿ ದಿನಕ್ಕೆ ಎರಡು ಬಾರಿ ಕುಡಿಯಬೇಕಾಗುತ್ತದೆ. ಹಾಗೆಯೇ ಈ ಬಳ್ಳಿಯನ್ನು ಜ್ವರ, ಉನ್ಮಾದ, ಕ್ಷಯ, ತೊನ್ನು ಇಂತಹ ಕಾಯಿಲೆಗಳಿಗೆ ಬಳಸುವುದಲ್ಲದೆ, ಹಾವು ಕಡಿದ ಪಶುಗಳಿಗೆ ಇದರ ರಸ ಕುಡಿಸುವುದರಿಂದ ವಿಷ ನಿವಾರಣೆಯಾಗುತ್ತದೆ.

2.ಕಡವಲ (*Anthocephalus indicus*): - 20-30 ಅಡಿ ಎತ್ತರ ಬೆಳೆಯುವ ಈ ಮರವು ಪಶ್ಚಿಮ ಘಟ್ಟದ ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಬೆಳೆಯುತ್ತದೆ. ನೇರಳೆ ಬಣ್ಣದ ಈ ಮರವು ನೋಡಲು ಆಕರ್ಷಕವಾಗಿರುತ್ತದೆ. ಇದರ ತೊಗಟೆ ನಯವಾಗಿರುತ್ತದೆ. ಈ ಮರದ 5 ಅಂಶಗಳನ್ನು (ಬೇರು, ಎಲೆ, ಕಾಂಡ, ಚಿಗುರು, ಹೂ ಅಥವಾ ಕಾಯಿ) ಜೇನುತುಪ್ಪ ಸೇರಿಸಿ ತಿನ್ನುವುದರಿಂದ ಕುಷ್ಠರೋಗ ವಾಸಿಯಾಗುತ್ತದೆ.

3.ಕಣಗಿಲೆ (*Nerium indicum miller*): -ಹಬ್ಬ ಹರಿದಿನಗಳಲ್ಲಿ ಕಳಸಗಳನ್ನು ಅಲಂಕರಿಸಲು, ದೇವರನ್ನು ಪೂಜಿಸಲು ಬಳಸುವ ಈ ಗಿಡವು ತುಂಬ ವಿಷಕಾರಿಯಾಗಿದ್ದು, ಇದರ ಯಾವುದೇ ಭಾಗ ಹೊಟ್ಟೆಗೆ ಸೇರಿದರೆ ಪ್ರಾಣಾಪಾಯವೇ ಸಂಭವಿಸಬಹುದು. ಆದುದರಿಂದ ಈ ಮೂಲಿಕೆಯನ್ನು ವೈದ್ಯರ ನೆರವಿನಿಂದಲೇ ಉಪಯೋಗಿಸಬೇಕಾಗುತ್ತದೆ. ಇದರ ತೊಗಟೆಯ ಕಷಾಯಕ್ಕೆ ಸಮ ಪ್ರಮಾಣದಲ್ಲಿ ಸಾಸಿವೆ ಎಣ್ಣೆ ಸೇರಿಸಿ ಮಸೆಣ್ಣೆ ಮಾಡಿ ಲೇಪಿಸಬೇಕಾಗುತ್ತದೆ.

4. ಕರಡಿಕಣ್ಣಿನ ಗೆಡ್ಡೆ (*Gloriosa superba*): - ಇದು ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ಪೊದೆಗಳ ಮಧ್ಯೆ ಬೆಳೆಯುವ ಪರಾವಲಂಬಿ. ಈ ಬಳ್ಳಿಯ ಬುಡದಲ್ಲಿ ಗೆಡ್ಡೆ ಇರುತ್ತದೆ, ಈ ಗೆಡ್ಡೆಯು ತುಂಬ ವಿಷಯುಕ್ತವಾಗಿರುತ್ತದೆ. ಈ ಗೆಡ್ಡೆಯನ್ನು ಔಷಧಿಗಳಿಗೆ ಬಳಸಬೇಕಾದರೆ ವೈದ್ಯರ ಸಲಹೆ ಮುಖ್ಯವಾಗಿರುತ್ತದೆ. ಈ ಕರಡಿಕಣ್ಣಿನ ಗೆಡ್ಡೆಯನ್ನು ಚೆನ್ನಾಗಿ ಶುದ್ಧಿಗೊಳಿಸಿ ಗೊತ್ತಾದ ಪ್ರಮಾಣದಲ್ಲಿ ಸೇವಿಸುವುದರಿಂದ, ಕುಷ್ಠ, ಮೂಲವ್ಯಾಧಿ, ಗುನ್ನೆರಿಯಾ ಇಂತಹ ಕಾಯಿಲೆಗಳು ವಾಸಿಯಾಗುವುದಲ್ಲದೆ, ಹಾವು, ಚೇಳು ಕಡಿದಾಗ, ಕಡಿದ ಜಾಗಕ್ಕೆ ಹಚ್ಚುತ್ತಾರೆ. (ವಿ.ಸೂ. ಈ ಗಿಡದ ಎಲೆಯನ್ನು ಯಾವುದೇ ಕಾರಣಕ್ಕೂ ಸೇವಿಸಬಾರದು) ಈ ಗೆಡ್ಡೆಯನ್ನು ಪಶುಚಿಕಿತ್ಸೆಯಲ್ಲಿ ಬಳಸುತ್ತಾರೆ.

5.ನಾಡು ಬಾದಾಮಿ (*Terminalia catappa*):– ರಸ್ತೆ ಬದಿಗಳಲ್ಲಿ, ಉದ್ಯಾನವನಗಳಲ್ಲಿ ಅಲಂಕಾರಿಕವಾಗಿ ಬೆಳೆಸುವ ಈ ಮರವು 10-80 ಅಡಿ ಎತ್ತರಕ್ಕೆ ಬೆಳೆಯುತ್ತದೆ. ಡಿಸೆಂಬರ್– ಜನವರಿಯಲ್ಲಿ ಎಲೆಗಳನ್ನು ಉದುರಿಸುತ್ತದೆ. ಇದು ಒಣಹವೆ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಈ ಮರದ ಚಿಗುರೆಲೆಗಳನ್ನು ಅರೆದು ಹಚ್ಚುವುದರಿಂದ ಇಸುಬು, ಕಜ್ಜಿ, ಕುಷ್ಠ, ಇಂತಹ ಚರ್ಮರೋಗಗಳು ವಾಸಿಯಾಗುತ್ತವೆ.

6.ಬಿಳಿ ಎಕ್ಕ (*Calotraopis procera*):– ಧಾರ್ಮಿಕವಾಗಿ ಗೌರವಿಸುವ ಈ ಗಿಡವನ್ನು ದೇವಾಲಯಗಳ ಪಕ್ಕದಲ್ಲಿ ಹೆಚ್ಚಾಗಿ ಬೆಳೆಸುವುದನ್ನು ಕಾಣಬಹುದು. (ಎಕ್ಕದಲ್ಲಿ ಎರಡು ಜಾತಿಗಳಿವೆ. ಬಿಳಿ ಹೂ ಬಿಡುವುದು ಬಿಳಿಎಕ್ಕ, ಕರಿ ಹೂ ಬಿಡುವುದು ಕರಿ ಎಕ್ಕ (*Calotropis gigatea*) ಇದನ್ನು ಔಷಧ ರೂಪದಲ್ಲಿ ಉಪಯೋಗಿಸಬೇಕಾದಲ್ಲಿ, ನೆರಳಿನಲ್ಲಿ ಒಣಗಿಸಿ ಚೂರ್ಣ ಮಾಡಿ ಹಸು ಮತ್ತು ಎಮ್ಮೆ ಹಾಲಿನಲ್ಲಿ ಸಂಸ್ಕರಿಸಿ ಉಪಯೋಗಿಸಿದರೆ ಇದರಿಂದ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು. ಈ ಎಕ್ಕದ ಹೂವನ್ನು ಚೆನ್ನಾಗಿ ಒಣಗಿಸಿ ಪುಡಿಮಾಡಿಟ್ಟುಕೊಂಡು ಒಂದು ಗುಲಗಂಜಿ ಪ್ರಮಾಣದ ಪುಡಿಯನ್ನು ಒಂದು ಚಮಚ ಜೇನುತುಪ್ಪಕ್ಕೆ ಸೇರಿಸಿ ಹಲವು ದಿವಸ ಸೇವಿಸುವುದರಿಂದ ಪ್ರಾಥಮಿಕ ಹಂತದ ಕುಷ್ಠ ರೋಗವು ಹತೋಟಿಗೆ ಬರುತ್ತದೆ. ಈ ಎಕ್ಕದ ಗಿಡವನ್ನು ಇತರ ಹಲವಾರು ಕಾಯಿಲೆಗಳಿಗೂ ಬಳಸುತ್ತಾರಲ್ಲದೆ, ಪಶು ಚಿಕಿತ್ಸೆಯಲ್ಲಿಯೂ ಉಪಯೋಗಕ್ಕೆ ಬರುತ್ತದೆ.

7. ಹೊಂಗೆ ಮರ (*Pongamia pinnata*):– ಬಯಲು ಸೀಮೆಯ ರೈತರ ಮಿತ್ರನಾಗಿರುವ ಈ ಮರವು ಬಡವರ ಮನೆ ಬೆಳಕಿನ ಜ್ಯೋತಿಗೆ ಎಣ್ಣೆಯಾಗಿ, ರೈತನ ಕೆಸರುಗದ್ದೆಗೆ ಹಸಿರೆಲೆ ಗೊಬ್ಬರವಾಗಿ, ಬೀಜದಿಂದ ಎಣ್ಣೆ ತೆಗೆದುಬಿಟ್ಟ ಹಿಂಡಿಯ ಮೇಲು ಗೊಬ್ಬರವಾಗಿ, ಬೇಸಿಗೆಯಲ್ಲಿ ಎಲೆಯುದುರಿ ಒಣಗಿದ ತರಗೆಲೆ ಗೊಬ್ಬರವಾಗಿ, ವಸಂತನ ಆಗಮನದಲ್ಲಿ ಯಥೇಚ್ಛವಾಗಿ ಬಿಡುವ ಹೂವು ಗೊಬ್ಬರವಾಗಿ ಉಪಯೋಗಕ್ಕೆ ಬರುವುದಲ್ಲದೆ, ಮನುಷ್ಯ ಮತ್ತು ಪಶುಗಳ ಹಲವಾರು ರೋಗಗಳಿಗೂ ಇದು ಉಪಯುಕ್ತ. ಒಂದು ಹಿಡಿ ಹೊಂಗೆ ಎಲೆ ಕಷಾಯ ತಯಾರಿಸಿಕೊಂಡು ದಿನಕ್ಕೆ ಎರಡು ಬಾರಿಯಂತೆ ಒಂದು ತಿಂಗಳು ಸೇವಿಸಿ, ಕುಷ್ಠದ ಗಾಯಕ್ಕೆ ಹೊಂಗೆಯ ಎಣ್ಣೆಯನ್ನು ಹಚ್ಚುವುದಲ್ಲದೆ, ಸ್ನಾನಕ್ಕೆ ಹೊಂಗೆಯ ಸೊಪ್ಪಿನ ಕಷಾಯ ಬಳಸಿದರೆ, ಕುಷ್ಠರೋಗ ವಾಸಿಯಾಗುತ್ತದೆ. ಈ ಲೇಖನದಲ್ಲಿ ಕುಷ್ಠರೋಗಕ್ಕೆಂದು ಹೇಳಿರುವ ಔಷಧಿ ಗಿಡಗಳಲ್ಲಿ ಕೆಲವು ಕ್ಷಯ, ತೊನ್ನು ಇಂತಹ ರೋಗಗಳಿಗೂ ಔಷಧಿಯಾಗಿವೆ.

ಬೆಂಗಳೂರು ಸಮೀಪದ ಹುರುಳಿ ಚಿಕ್ಕನ ಹಳ್ಳಿ ಮಹಿಳೆಯರ ಔಷಧಿ ಸಸ್ಯಗಳ ಜ್ಞಾನ

ದಾಳಿಂಬೆ ಚಿಗುರು (*Punica granatum*): ಬೇದಿಯಾಗುತ್ತಿದ್ದರೆ, ಈ ಚಿಗುರನ್ನು ಹುರಿದು ಚಟ್ನಿ ಮಾಡಿ ತಿಂದರೆ ಬೇದಿ ನಿಲ್ಲುತ್ತದೆ ಹಾಗು ಮೈಗೆ ಒಳ್ಳೆಯದು ಮತ್ತು ಇದರ ಹೂವನ್ನು ಎಳೆ ಮಕ್ಕಳ ತುಟಿಗೆ ಹಚ್ಚಿದರೆ ತುಂಬ ಕೆಂಪಾಗುತ್ತದೆ.

ದೊಡ್ಡಪತ್ರೆ(*Coleus amboinicus*): ಈ ಎಲೆಯನ್ನು ಕುಟ್ಟಿ ರಸ ತೆಗೆದು ಕುಡಿದರೆ ಕಫಾ ಕಟ್ಟಿದ್ದರೆ ಹೋಗುತ್ತದೆ.

ಬೇರ್ ಬಗಡಿ ಅಥವ ಮಂಗನ ಬಳ್ಳಿ (*Vallaris solanacea*): ಕಿವಿ ನೋವು ಬರುವಂತಹವರಿಗೆ ಇದನ್ನು ಕೆಂಡದಲ್ಲಿ ಹಾಕಿ ಸುಟ್ಟು ಇದರ ರಸ ತೆಗೆದು ಒಂದು ಚೂರು ಕಲ್ಲು ಉಪ್ಪು ಹಾಕಿ ಕಿವಿಗೆ ಬಿಟ್ಟುಕೊಂಡರೆ ನೋವು ನಿವಾರಣೆಯಾಗುತ್ತದೆ.

ಕಡುಕಾಯಿ (*Anthocephalus cadamba*): ಈ ಕಾಯಿಯನ್ನು ಮಜ್ಜಿಗೆಯಲ್ಲಿ ಅರೆದು ಹಚ್ಚಿದರೆ ಬಾಯಿ ಹುಣ್ಣು ಹೋಗುತ್ತದೆ.

ಹಾಲು ಮೂಲಂಗಿ (*Lactuca runcinata*): ಕಾಲು ಊತ ಬಂದರೆ ಇದರ ಸೊಪ್ಪಿನ ಜೊತೆಯಲ್ಲಿ ಅಕ್ಕಿ ಕಾಳನ್ನು ಹಾಕಿಕೊಂಡು ನೀರು ಹಾಕದೆ ರುಬ್ಬಿ ನಂತರ ಇದಕ್ಕೆ ಉಪ್ಪನ್ನು ಹಾಕಿ ಕುದಿಸಿ ಹಚ್ಚಬೇಕು.

ಹಸಿ ಬೆಟ್ಟದ ನೆಲ್ಲಿಕಾಯಿ (*Emblica officinalis*): ಮಂದ ಬುದ್ಧಿ ಇರುವಂತಹವರಿಗೆ ಇದರ ರಸವನ್ನು ತೆಗೆದು ಸ್ವಲ್ಪ ಉಪ್ಪು ಹಾಕಿ ದಿನನಿತ್ಯ ಕೊಡಬೇಕು.

ಮಾವಿನ ಎಲೆ: ಮಾವಿನ ಎಲೆಯನ್ನು ಒಣಗಿಸಿ ಇದರ ಜೊತೆಗೆ ಮೆಣಸು, ಉಪ್ಪು, ಲವಂಗ, ಹಾಕಿ ಪುಡಿ ಮಾಡಿ, ಹಲ್ಲು ಉಜ್ಜಿದರೆ ಹಲ್ಲಿನಲ್ಲಿ ಕರೆ ಕಟ್ಟಿದ್ದರೆ ಹೋಗುತ್ತದೆ.

ಮೆಣಸು ಎಲೆ: ಹುಳುಕು ಹಲ್ಲಿನ ನೋವು ಬರುವಂತಹವರಿಗೆ ಮೆಣಸಿನ ಎಲೆಯನ್ನು ಜಜ್ಜಿ ಸ್ವಲ್ಪ ಉಪ್ಪು ಹಾಕಿ ಹಲ್ಲಿನ ತೂತಿನಲ್ಲಿಟ್ಟರೆ, ಹಲ್ಲು ನೋವು ಬರುವುದಿಲ್ಲ.

ಒಣಗಿದ ನೆಲ್ಲಿಕಾಯಿ (*Emblica officinalis*): ನೆಲ್ಲಿಕಾಯಿ ಮತ್ತು ದಾಸವಾಳ ಹೂವನ್ನು ರುಬ್ಬಿ ತಲೆಗೆ ಹಚ್ಚಿದರೆ ಕೂದಲು ಉದುರುವುದು ನಿಲ್ಲುತ್ತದೆ.

ದಾಳಿಂಬೆ ಹಣ್ಣಿನ ಸಿಪ್ಪೆ (*Punica granatum*): ಈ ಸಿಪ್ಪೆಯನ್ನು ಗಂಧದೊಡನೆ ತೇಯ್ದು ಮಜ್ಜಿಗೆಯಲ್ಲಿ ಹಾಕಿ ಕೊಟ್ಟರೆ, ದೊಡ್ಡವರಿಗಾಗಲಿ–ಮಕ್ಕಳಿಗಾಗಲಿ ಉಷ್ಣದಿಂದ ಬೇದಿಯಾಗುತ್ತಿದ್ದರೆ ನಿಂತು ಹೋಗುತ್ತದೆ.

ಅರಾರೋಟ್: ಉಷ್ಣದಿಂದಾಗುವ ಬೇದಿಗೆ ಅರಾರೋಟ್ ಪುಡಿ ಮಾಡಿ ಅಥವಾ ಗಂಜಿ ಮಾಡಿ ಕುಡಿದರೆ ತತ್‌ಕ್ಷಣ ನಿಲ್ಲುತ್ತದೆ.

ತುಂಬೆಸೊಪ್ಪು (*Leucas zyelanica*): ಬಾಣಂತಿಯರಿಗೆ ಕೈಕಾಲು ಹಿಡಿದುಕೊಂಡರೆ ತುಂಬೆ ಸೊಪ್ಪನ್ನು ಹಾಕಿ ಕಾಯಿಸಿದ ನೀರಿನಿಂದ ಸ್ನಾನ ಮಾಡಿದರೆ ಒಳ್ಳೆಯದು. ತುಂಬೆ ಸೊಪ್ಪಿನ ರಸ ಸೇವಿಸುವುದರಿಂದ ರಕ್ತದ ಒತ್ತಡ ಮತ್ತು ಮಧುಮೇಹ ರೋಗ ಗುಣವಾಗುತ್ತದೆ. ಎಲೆಯ ರಸವನ್ನು ಜೇನುತುಪ್ಪದೊಂದಿಗೆ ಬೆರೆಸಿ ಸೇವಿಸಿದರೆ ನೆಗಡಿ, ಕೆಮ್ಮು, ಉಬ್ಬರ, ಹೊಟ್ಟೆನೋವು ಇಂತಹ ಕಾಯಿಲೆಗಳು ವಾಸಿಯಾಗುತ್ತವೆ.

ದಾಸವಾಳದ ಸೊಪ್ಪು: ಸೀಗೆಕಾಯಿ ಜೊತೆಗೆ ಈ ಸೊಪ್ಪನ್ನು ಬೆರೆಸಿ ಸ್ನಾನ ಮಾಡುವುದರಿಂದ ತಲೆ ಹೊಟ್ಟು ನಿವಾರಣೆಯಾಗುತ್ತದೆ.

ಹುಳಿಸೊಪ್ಪು (*Memecylon edule*): ಹೊಟ್ಟೆನೋವು ಇದ್ದವರು ಮಜ್ಜಿಗೆಯಲ್ಲಿ ಈ ಸೊಪ್ಪನ್ನು ರುಬ್ಬಿ ಅನ್ನದ ಜೊತೆಯಲ್ಲಿ ಸೇವಿಸುವುದರಿಂದ ಹೊಟ್ಟೆನೋವು ನಿಲ್ಲುತ್ತದೆ.

ಎಕ್ಕದ ಗಿಡ (*Calotraopis Procera*):– ಎಲೆಗಳನ್ನು ಎಣ್ಣೆಯೊಂದಿಗೆ ಕಾಯಿಸಿ ಶಾಖ ಕೊಟ್ಟರೆ ಬಿದ್ದಗಾಯ, ಉಳುಕು ನಿವಾರಣೆಯಾಗುತ್ತದೆ. ಗಿಡದ ಹಾಲನ್ನು ಉಪ್ಪಿನಲ್ಲಿ ಬೆರೆಸಿಕೊಂಡು ಹಲ್ಲುತಿಕ್ಕುತ್ತಿದ್ದರೆ, ಹಲ್ಲುನೋವು ನಿವಾರಣೆಯಾಗುತ್ತದೆ. ಅಂಗಾಲಿನಲ್ಲಿ ಕಂಡುಬರುವ ಆಣಿ ಗಳಿಗೆ ಎಲೆ ಕಳ್ಳಿರಸ ಲೇಪನ ಮಾಡಿದರೆ ನಿವಾರಣೆಯಾಗುವುವು.

ಸಂಗ್ರಹ: ಸೀತಾ ಲಕ್ಷ್ಮಿ
ಮಾಹಿತಿ: ಸರಸ್ವತಿ

ಕಾಣೆಯಾಗುತ್ತಿರುವ ಹಿತ್ತಲ ಗಿಡ
ಹೆಬಸೂರಿನ ಗುಡಾರಗಳು

ಅಗ್ಗವಾಗಿ ದೊರಕುವ ಆಕರ್ಷಕವಾಗಿ ಕಾಣುವ ಪ್ಲಾಸ್ಟಿಕ್ ಹಾಳೆಗಳು ನಮ್ಮ ಗುಡಾರಗಳಿಗೂ ಪರ್ಯಾಯವಾಗಿಬಿಟ್ಟಿವೆ. ಧಾನ್ಯಗಳನ್ನು ಮಳೆ-ಗಾಳಿ ಬಿಸಿಲುಗಳಿಂದ ರಕ್ಷಿಸಲು ರೈತರು ಗುಡಾರಗಳನ್ನು ಬಳಸುತ್ತಿದ್ದರು. ಬಹು ಉಪಯೋಗಿಯಾಗಿರುವ ಗುಡಾರಗಳು ಜಾತ್ರೆ, ಮದುವೆ ಮುಂತಾದ ಸಂದರ್ಭದಲ್ಲಿ ನೂರಾರು ಜನರಿಗೆ ಕುಳಿತು ಕೊಳ್ಳಲೂ, ಮಲಗಲೂ ಆಶ್ರಯ ನೀಡುತ್ತಿದ್ದವು.

ಗುಣಮಟ್ಟದ ಆಧಾರದ ಮೇಲೆ 3 ಸಾವಿರದಿಂದ 8 ಸಾವಿರದ ವರೆಗೂ ಇದೆ ಗುಡಾರದ ಬೆಲೆ. ಪ್ಲಾಸ್ಟಿಕ್ ಹೊದಿಕೆಗಳಾದರೋ ಕೇವಲ ಸಾವಿರ ರೂಪಾಯಿಗಳಿಗೆ ಸಿಗುತ್ತದೆ. ಆದರೆ, ಈ ಪ್ಲಾಸ್ಟಿಕ್ ಹೊದಿಕೆಗಳು 1-2 ವರ್ಷಕಾಲ ಮಾತ್ರ ಬಾಳಿಕೆ ಬರುತ್ತದೆ. ಇದಕ್ಕೆ ಹೋಲಿಸಿದರೆ, ಗುಣಮಟ್ಟದ ಗುಡಾರಗಳು 20 ವರ್ಷಗಳವರೆಗೂ ಬಾಳಿಕೆ ಬರುತ್ತವೆ. ಹೀಗಾಗಿ ಮೇಲ್ನೋಟಕ್ಕೆ ಅಗ್ಗವಾಗಿ ಕಾಣುವ ಪ್ಲಾಸ್ಟಿಕ್ ಹಾಳೆಗಳು ವಾಸ್ತವದಲ್ಲಿ ಗುಡಾರಗಳಿಗಿಂತ ದುಬಾರಿಯೇ ಸರಿ. ಆದರೂ ಈ ಹಳೇ ಕಾಲದ ಗುಡಾರಗಳಿಂದು ಕಣ್ಮರೆ ಯಾಗುತ್ತಿವೆ. ಗುಡಾರಗಳು ಕಣ್ಮರೆಯಾಗುವ ಜೊತೆಗೆ ಅದನ್ನೇ ಪಾರಂಪರಿಕ ಕಸುಬಾಗಿ ಆಧರಿಸಿದ ಕುಶಲಕರ್ಮಿಗಳ ಜೀವನ ತ್ರಿಶಂಕು ಸ್ಥಿತಿ ತಲುಪುತ್ತಿದೆ. ಹುಬ್ಬಳ್ಳಿಯ ಹೆಬಸೂರು ಗ್ರಾಮದ 75 ಪ್ರತಿಶತ ಜನ ಗುಡಾರ ತಯಾರಿಸುವ ಉದ್ಯಮ ಆಧರಿಸಿ ಬದುಕು ತ್ತಿದ್ದರು. ಆದರಿಂದು ಹೊಸದಕ್ಕೆ ಬದಲಾಯಿಸಿ ಕೊಳ್ಳಲಾಗದೇ, ಹಳೆಯದನ್ನು ಬಿಡಲಾರದೆ, ಮಾರುಕಟ್ಟೆ ವಿಸ್ತರಿಸಲು ಅಸಾಧ್ಯ ವಾಗಿ, ಕಸುಬಿನ ಉಳಿವಿಗಾಗಿ ಹೆಣಗಾಡುತ್ತಿರುವುದು ಕಠೋರ ವಾಸ್ತವಿಕತೆ.

ಮೂಲ ಲೇಖಕರು: ಸಿದ್ದಯ್ಯ ಹಿರೇಮಠ
ಆಧಾರ: ಕನ್ನಡ ಪ್ರಭ, 13/11/2000

ಜಾನಪದ ಪಶುರೋಗ ಚಿಕಿತ್ಸೆ

ಲೇಖಕರು: ಡಾ: ಸಿ. ಆರ್. ರಂಗೇಗೌಡ, ಮಾಜಿ ಶಾಸಕ (ಮಾಗಡಿ) M.Sc., (ಹೋಮಿಯೋ) ಮತ್ತು ಡಾ: ಮಾಗಡಿ ಆರ್. ಗುರುದೇವ್ (M.Sc., Ph.D). ಪುಸ್ತಕದ ಬೆಲೆ: ರೂ.10–00.

ಇವರು ಹೊರತಂದಿರುವ ಜನಪದ ಪಶುರೋಗ ಚಿಕಿತ್ಸೆ. ರೈತ ವೈದ್ಯನಿಗೆ ಸಮರ್ಪಣೆಯಿಂದ ಪ್ರಾರಂಭವಾಗಿ, ಪಶುಗಳಿಗೆ ಬರುವ 58 ರೋಗಗಳನ್ನು ಪಟ್ಟಿ ಮಾಡಿದ್ದಾರೆ. ರೋಗದ ಚಿಹ್ನೆಗಳನ್ನು ಆಡುಭಾಷೆಯ ಮಾದರಿಯಲ್ಲಿ ಸುಲಭವಾಗಿ ಅರ್ಥವಾಗುವಂತೆ ಮುದ್ರಿಸಲಾಗಿದೆ ಹಾಗೂ ರೋಗಗಳಿಗೆ ಚಿಕಿತ್ಸಾ ವಿಧಾನವನ್ನೂ ಹೇಳಲಾಗಿದೆ. ಈ ಪುಸ್ತಕದಲ್ಲಿ ನಮೂದಿಸಿರುವಂತಹ ಮೂಲಿಕೆಗಳೆಲ್ಲವೂ ಸಾಮಾನ್ಯವಾಗಿ ರೈತರ ಪರಿಸರದಲ್ಲೆ ಸಿಗಬಹುದಾದಂತಹವುಗಳನ್ನು ಪರಿಚಯಿಸಿರುವುದಲ್ಲದೆ, ಗ್ರಂಧಿಗೆ ಅಂಗಡಿಯಲ್ಲಿ ಸಿಗುವಂತಹ ಮೂಲಿಕೆಗಳ ಉಪಯೋಗ ಪರಿಚಯಿಸಿರುತ್ತದೆ. ಸಸ್ಯಶಾಸ್ತ್ರಜ್ಞರ ಸಹಾಯದಿಂದ ಮೂಲಿಕಾ ಪರಿಚಯವನ್ನು ಕನ್ನಡದ ಹೆಸರಿನ ಜೊತೆ ಸಸ್ಯಶಾಸ್ತ್ರದ ಪ್ರಕಾರ ಕರೆಯುವ ಸಸ್ಯದ ಲ್ಯಾಟೀನ್ ಹೆಸರನ್ನು ಮತ್ತು ಅವುಗಳ ಸಸ್ಯ ಕುಟುಂಬವನ್ನು ಪುಸ್ತಕದ ಕೊನೆಯಲ್ಲಿ ಸೇರಿಸಲಾಗಿದ್ದು, ಪುಸ್ತಕದ ವಿಷಯ ಸಂಗ್ರಹಣೆ ಮಾಗಡಿ ಸುತ್ತಮುತ್ತಲ ಹಳ್ಳಿಗಳ ಹಲವಾರು ಪಶುವೈದ್ಯ ರೈತರ ಸಲಹೆಯಿಂದ ತಯಾರಾಗಿರುವುದರಿಂದ ಈ ಪುಸ್ತಕಕ್ಕೆ ಗಟ್ಟಿತನವನ್ನು ತಂದು ಕೊಟ್ಟಿದೆ. ಪಶು ಸಂಗೋಪನೆಯಲ್ಲಿ ತೊಡಗಿರುವಂತಹ ರೈತರಿಗೆ ಈ ಪುಸ್ತಕ ಮನೆಯ ವೈದ್ಯನಾಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ.

ಬೇವು

ಲೇಖಕರು: ವಿಜಯ ಅಂಗಡಿ, ಪ್ರಕಾಶಕರು: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್. ಪುಸ್ತಕದ ಬೆಲೆ: ರೂ. 10-00.

ಈ ಪುಸ್ತಕವು ಬೇವಿನ ಉಗಮ, ಬೆಳವಣಿಗೆ, ಅಭಿವೃದ್ಧಿಯಿಂದ ಪ್ರಾರಂಭವಾಗುತ್ತದೆ. ಬೇವಿನಿಂದ ಬೇಸಾಯಗಾರರಿಗೆ ಪ್ರಯೋಜನವಾಗುವುದರ ಬಗ್ಗೆ ಬೇವಿನ ಬೀಜದ ಆಯ್ಕೆ, ಹಣ್ಣಿನ ಕಠಾವು, ಬೀಜದ ಕಷಾಯ, ಬೇವಿನೆಲೆಯ ಕಷಾಯಗಳನ್ನು ತಯಾರಿಸುವುದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಬೀಜದ ಕಷಾಯ ತಯಾರಿಸಲು ಉಪಯುಕ್ತವಾದ ಸಲಹೆ ಕೊಟ್ಟಿದ್ದಾರೆ. ಸಾಮಾನ್ಯವಾಗಿ ರೈತರು ಬೇವಿನ ಬೀಜ ಒಣಗಿದ್ದಾಗಲೀ, ಹಸಿ ಇರುವಾಗಾಗಲೀ ಬಳಸುತ್ತಾರೆ. ಆದರೆ ಈ ಪುಸ್ತಕದಲ್ಲಿ ಬೇವಿನ ಕಷಾಯ ತಯಾರಿಸಲು ಬಳಸುವ ಅವಧಿ, ಬಳಸುವ ಕ್ರಮ, ಇತ್ಯಾದಿ ವಿವರ ಇದೆ. ಬೇವಿನ ಬೀಜದಿಂದ ತಯಾರಿಸಬಹುದಾದಂತಹ ಔಷಧಿಗಳ ಬಗ್ಗೆ ಹಾಗು ಹಿಂಡಿಯ ಕಷಾಯದ ಬಗ್ಗೆ, ಬೇವಿನ ಸಿಂಪರಣೆ ಕೂಡಿಟ್ಟ ಧಾನ್ಯಗಳನ್ನು ರಕ್ಷಿಸುವುದರ ಬಗ್ಗೆ, ಕಾಳುಗಳ ಉಪಚಾರಕ್ಕೆ ಬೇವು ಹಾಗು ಕೀಟಗಳ ಹತೋಟಿಯಲ್ಲಿ ಬೇವಿನ ಪಾತ್ರದ ಬಗ್ಗೆಸ್ಥೂಲ ಪರಿಚಯವಿದೆ. ಈ ಪುಸ್ತದಲ್ಲಿ ಮುಖ್ಯವಾಗಿ 200 ಜಾತಿಯ ಕೀಟಗಳನ್ನು ಎದುರಿಸುವ ಶಕ್ತಿಯನ್ನು ಪಡೆದಿವೆಯೆಂಬುದನ್ನು ತಿಳಿಸುವುದಲ್ಲದೆ, ರೋಗ ಹತೋಟಿಗೆ, ಉಪಕಾರಿ ಜೀವಿಗಳಿಗೆ, ವೈರಸ್ ರೋಗಕ್ಕೆ, ಶಿಲೀಂಧ್ರ ರೋಗಾಣುಗಳ ಹತೋಟಿಯಲ್ಲಿ ಬೇವಿನ ಪಾತ್ರ, ಎರೆಹುಳುಗಳ ಸಂತಾನಾಭಿವೃದ್ಧಿ ಹೆಚ್ಚಳ, ಉಪಕಾರಿ ಶಿಲೀಂಧ್ರಗಳ ರಕ್ಷಣೆಯ ಬಗ್ಗೆ ಹೇಳುವುದಲ್ಲದೆ, ವಿವಿಧ ಬೆಳೆಗಳಲ್ಲಿ ಬೇವಿನಿಂದ ಕೀಟ ಹತೋಟಿ, ಬೇವಿನಲ್ಲಿರುವ ರಾಸಾಯನಿಕಗಳು, ಸತ್ವಾಂಶಗಳು, ಸತ್ವಭರಿತ ಪೋಷಕಾಂಶಗಳ ಪೂರೈಕೆಗೆ ಬೇವು, ಹೀಗೆ ನಾನಾ ವಿಧದಲ್ಲಿ ಬೇವಿನ ಮಹತ್ತರ ಪಾತ್ರವನ್ನು ಈ ಪುಸ್ತಕದಲ್ಲಿ ವಿವರಿಸಿದ್ದಾರೆ ಹಾಗೂ ಪುಸ್ತಕದ ಕೊನೆಯ ರಕ್ಷಾಪುಟದಲ್ಲಿ ನೂರು ಕಿ. ಗ್ರಾಂ ಬೇವಿನ ಬೀಜದಿಂದ ದೊರಕುವ ಪೋಷಕಾಂಶಗಳ ಬಗ್ಗೆ ಹೇಳಲಾಗಿದೆ. ಆದುದರಿಂದ ಈ ಪುಸ್ತಕ ಕಹಿಬೇವು ದೇಹಕ್ಕೆ, ಪ್ರಕೃತಿಗೆ, ರೈತನ ಬೆಳೆಗೆ ಸಿಹಿಯಾಗಿಸುವಂತಹ ಅಂಶವನ್ನು ವಿಜಯ ಅಂಗಡಿಯವರು ಬೇವು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ.

ಪರಿಸರ ಪ್ರಿಯ ಕೃಷಿ ಮಾಲಿಕೆಯಲ್ಲಿ, ಹುತ್ತದ ಸುತ್ತಮುತ್ತ

ಲೇಖಕರು: ವಿಜಯ್ ಅಂಗಡಿ

ಸಂಚಾಲಕರು: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಹಾಸನ್

ಪುಸ್ತಕದ ಬೆಲೆ: ರೂ. 5-00

ಪೀಠಿಕೆಯಲ್ಲಿಗೆದ್ದಲು ನಮ್ಮ ಮನಸ್ಸನ್ನು ಗೆಲ್ಲಲಿ ಎಂಬುದರಿಂದ ಪ್ರಾರಂಭವಾಗಿ ಕೊನೆಯ ಎರಡಕ್ಷರ ಪುಟಗಳಲ್ಲಿ ಗೆದ್ದಲಿನ ಬಗ್ಗೆ ಗೊತ್ತಾಗುವ ಅಂಕಿ ಅಂಶಗಳನ್ನು ಮುದ್ರಿಸಲಾಗಿದೆ. ಹಾಗೂ ಶ್ರೇಷ್ಠವೆನಿಸಿದ ರಾಣಿಹುಳು, ಮಣ್ಣಿನ ಸತ್ವ ಹೆಚ್ಚಿಸಲು ಗೆದ್ದಲು, ಗೆದ್ದಲಿಗೆ ಶಿಲೀಂದ್ರದ ಸಹವಾಸ, ಹುತ್ತದ ನಿರ್ಮಾಣ, ಮಣ್ಣಿನ ಸತ್ವಗಳ ಬಗ್ಗೆ ಹಾಗೂ ಬಹುಮುಖ್ಯವಾಗಿ ಇಂದು ನಮ್ಮ ಸ್ನಾನಕ್ಕೆಂದೇ ಪರಿಸರವನ್ನು ಹಾಳುಮಾಡುವಂತಹ ತುಂಬ ದುಬಾರಿಯಾದ ಸಾಬೂನುಗಳ ಪರ್ಯಾಯವಾಗಿ ಗೆದ್ದಲು ಮಣ್ಣಿನ ಉಪಯೋಗವನ್ನು ಬಳಸುವುದರ ಬಗ್ಗೆ ಹಾಗೂ ಇತರೆ ಉಪಯೋಗಗಳ ಬಗ್ಗೆ ಈ ಕಿರು ಪುಸ್ತಕದಲ್ಲಿ ವಿವರವಾಗಿ ತಿಳಿಸಿದ್ದಾರೆ.

ಶ್ರೀ ಅಣ್ಣಾ ಹಜಾರೆ ಅವರ ನಾ ಕಂಡ ಗ್ರಾಮ

ಲೇಖಕರು: ಜಿ.ಬಿ. ಶಿವರಾಜು. ಪುಸ್ತಕದ ಬೆಲೆ: ರೂ.20-00

ನಾ ಕಂಡ ಆದರ್ಶ ಗ್ರಾಮ ಶ್ರೀ ಅಣ್ಣಾ ಹಜಾರೆ ಅವರ ಪರಿಶ್ರಮದಿಂದ ಪರಿವರ್ತನೆಯನ್ನು ಕಂಡ ರಾಲೇಗಾನ್ ಸಿದ್ಧಿ ಗ್ರಾಮದ ಪರಿಚಯದ ಕಿರು ಹೊತ್ತಿಗೆಯನ್ನು ತಂದಿರುವ ಜಿ.ಬಿ. ಶಿವರಾಜುರವರು. ಅಣ್ಣಾ ಹಜಾರೆಯವರ ಜೀವನ ಕ್ರಮ ಹಾಗೂ ಅವರ ನಿಸ್ವಾರ್ಥ ಸೇವೆ. ನಮ್ಮ ಗ್ರಾಮೀಣಾ ಸಮಾಜದ ಸಮಸ್ಯೆಗಳ ಉಲ್ಲೇಖನದೊಂದಿಗೆ ಆದರ್ಶ ಗ್ರಾಮದ ರಾಲೇಗಾನ್ ಸಿದ್ಧಿಯ ಭೌಗೋಳಿಕ ಅಂಶ, ಕೃಷಿ ದೀನ ದಲಿತರ ಅಭಿವೃದ್ಧಿ, ಸಾಮೂಹಿಕ ವಿವಾಹ ಪದ್ಧತಿ, ಸಾಮುದಾಯಿಕ ಹಣ್ಣಿನ ತೋಟ, ಕುಟುಂಬ ಯೋಜನೆ ಮತ್ತು ವೈದ್ಯಕೀಯ ಸೌಲಭ್ಯ, ಹೈನುಗಾರಿಕೆ, ಮಹಿಳಾ ಕಲ್ಯಾಣ ಕೇಂದ್ರ, ಗ್ರಂಥಾಲಯ, ರಾಜಕೀಯ ವ್ಯವಸ್ಥೆ, ಶಿಕ್ಷಣ ಹೀಗೆ ಹತ್ತು ಹಲವು ಹಜಾರೆ ಅವರ ಸಾಧನೆಯನ್ನು ವಿವರಿಸಿರುವುದಲ್ಲದೆ, ಅಲ್ಲಲ್ಲಿ ಜಾನ್ ರಸ್ಕಿನ್, ಜಾನ್ ಮಾರ್ಲೆ, ಗಾಂಧೀಜಿಯವರ ಕೆಲವೊಂದು ಮಾತುಗಳನ್ನು ಉಲ್ಲೇಖಿಸಿದ್ದಾರೆ. ಹಾಗೂ ಈ ಕಿರು ಹೊತ್ತಿಗೆಗೆ ಹಳ್ಳಿ ಕಸ್ತೂರಿಯವರು ಮುನ್ನುಡಿಯನ್ನು ಬರೆದಿದ್ದಾರೆ. ಈ ಪುಸ್ತಕದಲ್ಲಿ ಸರಳ ಭಾಷೆಯಲ್ಲಿ ಇರುವುದರಿಂದ ಎಂತಹವರೂ ಸಹ ಓದಬಹುದಾಗಿದೆ.

ಮೆಂತೆಯ ತಂಬುಳಿ

ಬೇಕಾಗುವ ಸಾಮಾನುಗಳು: 1/4 ಕೆ.ಜಿ. ಮೆಂತೆ, 1/4ಲೀ. ಮಜ್ಜಿಗೆ, 100ಗ್ರಾಂ. ಮೆಣಸು (ಕೆಂಪು), ಅರ್ಧ ಕಾಯಿ, ರುಚಿಗೆ ಉಪ್ಪು, 1/4 ಕೆ.ಜಿ. ಬೆಲ್ಲ.

ಮಾಡುವ ವಿಧಾನ: ಹುರಿದ ಮೆಂತೆಗೆ, ಕಾಯಿ, ಮೆಣಸು ಸೇರಿಸಿ ರುಬ್ಬಿಕೊಂಡು, ಬೇಯಿಸಿ, ಬೆಲ್ಲ ಮತ್ತು ಉಪ್ಪನ್ನು ಹಾಕಬೇಕು. ಸ್ವಲ್ಪ ಸಮಯದ ನಂತರ ಕೆಳಗೆ ಇಳಿಸಿ ಒಗ್ಗರಣೆ ಕೊಟ್ಟು ಉಪಯೋಗಿಸುವುದು.

ಒಂದೆಲಗ ಸೊಪ್ಪಿನ ತಂಬುಳಿ

ಬೇಕಾಗುವ ಸಾಮಾನು: ಸ್ವಲ್ಪ ಒಂದೆಲಗ ಸೊಪ್ಪು, 5 ಮೆಣಸಿನ ಕಾಳು, 1ಕಪ್ ಜೀರಿಗೆ, 1/2 ಕಪ್ ಕಾಯಿತುರಿ, 2 ಚಮಚ ಬೆಲ್ಲ, 1 ಕಪ್ ಮಜ್ಜಿಗೆ, 3 ಚಮಚ ಕೊಬ್ಬರಿ ಎಣ್ಣೆ.

ಮಾಡುವ ವಿಧಾನ: ಸೊಪ್ಪನ್ನು ಎಣ್ಣೆಯಲ್ಲಿ ಹುರಿಯಬೇಕು. ನಂತರ ಸೊಪ್ಪಿನೊಂದಿಗೆ ಮೆಣಸಿನಕಾಳು, ಜೀರಿಗೆ, ಕಾಯಿತುರಿಯನ್ನು ಸೇರಿಸಿ ರುಬ್ಬಿ, ಇದಕ್ಕೆ ಮಜ್ಜಿಗೆ ಮತ್ತು ಬೆಲ್ಲವನ್ನು ಬೆರೆಸಬೇಕು. ಇದು ತುಂಬಾ ರುಚಿ ಮತ್ತು ಜ್ಞಾಪಕ ಶಕ್ತಿಗೆ ಅನುಕೂಲವಾಗಿದೆ.

ನಿಂಬೆ ಹಣ್ಣಿನ ತಂಬುಳಿ

ಬೇಕಾಗುವ ಸಾಮಗ್ರಿ: 2 ನಿಂಬೆ ಹಣ್ಣು, 1 ಚಮಚ ಜೀರಿಗೆ, 1 ಚಮಚ ಅರಿಶಿನ ಪುಡಿ, 1 ಲೋಟ ಮಜ್ಜಿಗೆ, 1/2 ಕಪ್ ಕಾಯಿತುರಿ, 1/2 ಕಪ್ ಬೆಲ್ಲ, 5 ಮೆಣಸಿನ ಕಾಳು.

ಮಾಡುವ ವಿಧಾನ: ನಿಂಬೆಕಾಯಿಯನ್ನು ಸಣ್ಣಗೆ ಹೆಚ್ಚಿಕೊಂಡು, ಜೀರಿಗೆ, ಕಾಯಿತುರಿ, ಮೆಣಸಿನ ಕಾಳು, ಅರಿಶಿನ ಪುಡಿ ಸೇರಿಸಿ ರುಬ್ಬಬೇಕು. ರುಬ್ಬಿದ ನಂತರ 1/2 ಕಪ್ ಬೆಲ್ಲ ಹಾಕಿ ಕುದಿಸಬೇಕು. ನಂತರ ಕೆಳಗಿಳಿಸಿ ಒಂದು ಲೋಟ ಮಜ್ಜಿಗೆ ಹಾಕಬೇಕು. ಇದು ಕುಡಿಯುವುದಕ್ಕೆ ತುಂಬ ರುಚಿ ಮತ್ತು ಆರೋಗ್ಯಕ್ಕೆ ತುಂಬಾ ಒಳ್ಳೆಯದು.

ಗಂಧದ ಸೊಪ್ಪಿನ ಚಟ್ನಿ

ಬೇಕಾಗುವ ಸಾಮಗ್ರಿ: ಒಂದು ಸ್ವಲ್ಪ ಗಂಧದ ಸೊಪ್ಪು, 10 ಒಣಮೆಣಸಿನ ಕಾಯಿ, 2 ಚಮವ ಜೀರಿಗೆ, 1 ಚಮಚ ಅರಿಶಿನ ಪುಡಿ, 1 ಕಪ್ ಕಾಯಿತುರಿ, ಒಂದು ನಿಂಬೆ ಹಣ್ಣು, 3 ಚಮಚ ಕೊಬ್ಬರಿ ಎಣ್ಣೆ ಮತ್ತು ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಗಂಧದ ಸೊಪ್ಪನ್ನು ಕೊಬ್ಬರಿ ಎಣ್ಣೆಯೊಂದಿಗೆ ಹುರಿದು, ಅರಿಶಿನ ಪುಡಿ, ಜೀರಿಗೆ, ನಿಂಬೆಹುಳಿ, ಕಾಯಿತುರಿಯನ್ನು ಹಾಕಿ ರುಬ್ಬಬೇಕು. ಈಗ ಚಟ್ನಿ ತಯಾರು, ತಿನ್ನಲೂ ರುಚಿ.

ನಿಂಬೆ ಹಣ್ಣಿನ ಚಟ್ನಿ

ಬೇಕಾಗುವ ಸಾಮಗ್ರಿ: 1 ನಿಂಬೆ ಹಣ್ಣು, 1 ಚಮಚ ಜೀರಿಗೆ, 10 ಒಣ ಮೆಣಸಿನಕಾಯಿ, 1 ಕಪ್ ಕಾಯಿತುರಿ, 1 ಚಿಟಿಕೆ ಬೆಲ್ಲ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ನಿಂಬೆ ಹಣ್ಣನ್ನು ಸಣ್ಣಗೆ ಹೆಚ್ಚಿಕೊಳ್ಳಬೇಕು ನಂತರ ಅದಕ್ಕೆ ಕಾಯಿತುರಿ, ಉಪ್ಪು, ಮೆಣಸಿನಕಾಯಿ ಹಾಕಿ ರುಬ್ಬಬೇಕು. ರುಬ್ಬಿದ ನಂತರ ಒಂದು ಚಿಟಿಕೆ ಬೆಲ್ಲ ಹಾಕಬೇಕು. ಈ ಚಟ್ನಿಯನ್ನು ಅನ್ನದೊಂದಿಗೂ ತಿನ್ನಬಹುದು . ರುಚಿಯಾಗಿರುತ್ತದೆ.

ಕಿತ್ತಲೆ ಸಿಪ್ಪೆಯ ಚಟ್ನಿ

ಬೇಕಾಗುವ ಸಾಮಗ್ರಿ: 1 ಕಿತ್ತಲೆ ಹಣ್ಣಿನ ಸಿಪ್ಪೆ, 10 ಒಣ ಮೆಣಸಿನಕಾಯಿ, 1 ಕಪ್ ಕಾಯಿತುರಿ, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಹುಳಿ.

ಮಾಡುವ ವಿಧಾನ: ಕಿತ್ತಲೆ ಸಿಪ್ಪೆಯನ್ನು ಕಾಯಿತುರಿ, ಮೆಣಸಿನ ಕಾಯಿ, ಉಪ್ಪು ಮತ್ತು ಹುಳಿಯನ್ನೂ ಬೆರೆಸಿ ರುಬ್ಬಿಕೊಂಡು, ಅದಕ್ಕೆ ಒಗ್ಗರಣೆ ಕೊಡಬೇಕು.

ಕೃಪೆ: ಸ್ಪೈಸ್ ಇಂಡಿಯ

ಸಾರ್ಥಕವಾದ ಹಿತ್ತಲಗಿಡ

ಮಾನ್ಯ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿಯವರೆ,

ನಿಮ್ಮ ಪತ್ರಿಕೆಯಲ್ಲಿ (ಸಂಚಿಕೆ 2 & 3, 1995) ಬಂದ ದನಗಳ ಉಣ್ಣೆ (ಉಣಗ) ನಿವಾರಣೆಗಾಗಿ ಲಂಟಾನಾ (ಹುಕಸ, ಮರಾಠಿಯಲ್ಲಿ ಘಾಣೇರಿ)ಯನ್ನು ದನಗಳ ಕೊಟ್ಟಿಗೆಯಲ್ಲಿ ಹಾಕಿದೆನು. 10 ದಿನಗಳ ನಂತರ ನೋಡಿದಾಗ ಎಲ್ಲ ಉಣ್ಣೆಗಳು ಪೂರ್ತಿ ಕಾಣೆಯಾದವು. ಇದಕ್ಕಾಗಿ ಈ ಮೊದಲು 50 ಮಿ.ಲಿ.ಗೆ. ರೂ. 65ರ ಬೆಲೆಯ ಬುಟಿಕ್ಸ್‌ನಂತಹ ತುಟ್ಟಿಯಾದ ಕಂಪನಿ ಔಷಧಗಳನ್ನು ಉಪಯೋಗಿದ್ದರು. ಕೆಲ ದಿನ ಮಾತ್ರ ಕಾಣೆಯಾಗುತ್ತಿದ್ದವು. ಆದರೆ ಈಗ ದಿನ ನಿತ್ಯ ಲಂಟಾನ ಹಾಕುವುದು ನನಗೇನೂ ಕಷ್ಟವಾಗಿಲ್ಲ. ಹಾಗಾಗಿ ಉಣ್ಣೆ ಕಾಟಕ್ಕೆ ಶಾಶ್ವತ ಪರಿಹಾರ ದೊರಕಿದೆ. ಇಂಥ ಸರಳ ಅಗ್ಗದ ದೇಶೀಯ ತಂತ್ರಜ್ಞಾನ ತಿಳಿಸಿದ ಹಿತ್ತಲಗಿಡದ ಎಲ್ಲ ಬಳಗದವರಿಗೂ ಕೃತಜ್ಞತೆ ತಿಳಿಸಲು ಸಂತೋಷವಾಗುತ್ತದೆ.

- ಕಲ್ಯಾಣರಾವ್ ಪಾಟೀಲ್, ಸರಸಂಬಾ, ಗುಲ್ಬರ್ಗಾ

ಮಾನ್ಯ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿಯವರೆ,

ತಾವು ಅಭಿಮಾನದಿಂದ ಕಳುಹಿಸಿದ್ದ ಹಿತ್ತಲಗಿಡ ಚಾತುರ್ಮಾಸಿಕ ಪತ್ರಿಕೆಯನ್ನು ಪೂರ್ತಿಯಾಗಿ ಓದಿದೆ. ನನಗಂತೂ ಬಹಳ ಮನಸ್ಸಿಗೆ ಸಂತೋಷವಾಯಿತು. ಹಿತ್ತಲಗಿಡ ಮದ್ದಲ್ಲ ಎನ್ನುವುದನ್ನು ಈ ಪತ್ರಿಕೆ ಹೇಗೆ ಸುಳ್ಳು ಎನ್ನುವುದನ್ನು ತೋರಿಸಿದೆ. ನನ್ನಂತಹ ಪಟ್ಟಣ ವಾಸಿಗೆ ಇಷ್ಟು ಉಪಯೋಗವಾಗಿರಬೇಕಾದರೆ, ಈ ಪತ್ರಿಕೆ ಗ್ರಾಮಾಂತರ ನಿವಾಸಿಗಳಿಗೆ ಅದರಲ್ಲೂ ರೈತರಿಗೆ ದಾರಿ ದೀಪವಾಗಿದೆ. ನಿಮ್ಮ ಸಾಧನೆಗೆ ನಿಮಗೂ ಮತ್ತು ನಿಮ್ಮ ಬಳಗದವರಿಗೂ ಅಭಿನಂದನೆಗಳು.

- ವಿ. ಎಸ್. ಕೃಷ್ಣಯ್ಯರ್, ರಾಷ್ಟ್ರೀಯ ನವ ನಿರ್ಮಾಣ ವೇದಿಕೆ,
ಶಂಕರ ಮಠದ ರಸ್ತೆ, ಶಂಕರಪುರಂ, ಬೆಂಗಳೂರು - 4

ಮಾನ್ಯ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿಯವರೆ,

ಜಿರೋ ಕಲ್ಟಿವೇಷನ್ ಬಗ್ಗೆ ಅನೇಕ ರೈತರಿಗೆ ಆಸಕ್ತಿ ಇದ್ದರೂ ಈ ಬಗ್ಗೆ ಅನೇಕ ಅನುಮಾನಗಳಿವೆ. ತೆಂಗು ಮತ್ತು ಅಡಿಕೆಯಲ್ಲಿ ಇದನ್ನು ಮಾಡಿದರೆ ಕಾಯಿ ಕೊಯ್ಯಲು ಅನಾನುಕೂಲ ಅಲ್ಲವೆ? ಇದರಲ್ಲಿ ಬಿದ್ದ ಕಾಯಿ ತೆಗೆಯಲು ಅಸಾಧ್ಯವಲ್ಲವೆ? ಇದರಲ್ಲಿ ಬೆಳೆದ ಕಳೆ ಕೊಚ್ಚಿ ಪುನ: ಮಣ್ಣಿಗೆ ಸೇರಿಸಬೇಕೆ ? ಇಲ್ಲ ಹಾಗೆ ಸ್ವತಂತ್ರವಾಗಿ ಬಿಡಬೇಕೆ ? ನೀರಿನ ನಿರ್ವಹಣೆಯಲ್ಲಿ ಡ್ರಿಪ್ ಪೈಪ್‌ಗಳನ್ನು ಗಮನಿಸಲು ಇದರಿಂದ ತೊಂದರೆ ಅಲ್ಲವೆ. ದಯವಿಟ್ಟು ವಿವರವಾಗಿ ಸದರಿ ಜೀರೂ ಕಲ್ಟಿವೇಷನ್ ಮಾಡುತ್ತಿರುವ ರೈತರಿಂದ ಅವರ ನೈಜ ಅನುಭವ ತಿಳಿದು ಅವರಿಂದ ಲೇಖನ ಬರೆಸಿ. ಇದರಿಂದ ಅನೇಕ ರೈತರಿಗೆ ಅನುಕೂಲವಾಗುತ್ತದೆ.

- ಜಿ.ಆರ್. ರಂಗೇಗೌಡ, ಗೊಣ ತುಮಕೂರು, ತುರುವೇಕೆರೆ - 572 227

ಈ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಲೇಖನ ಹಾಕಲು ಪ್ರಯತ್ನಿಸುತ್ತೇವೆ. - ಸಂ

ಪ್ರಿಯರಾದ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿಯವರೆ,

ಹಿತ್ತಲಗಿಡ ಪತ್ರಿಕೆಯ ಬೆಳವಣಿಗೆಯಲ್ಲಿ ನನ್ನ ಕಾಣಿಕೆ ನೀಡುವೆ. ಆಗಾಗ್ಗೆ ಬರಹಗಳನ್ನು ಮಾಡಿ ಕಳುಹಿಸುವೆ. ಹುತ್ತದ ಸುತ್ತಮುತ್ತ ಪುಸ್ತಕ ನಿಮಗೆ ಸಿಕ್ಕಿರಬಹುದು. ಹುತ್ತದ ಮಣ್ಣಿನ ಬಗ್ಗೆ ಪ್ರೊ..ಅನಿಲ್ ಗುಪ್ತಾ ಅವರ ಬರಹ ನನ್ನಲಿದೆ ಎಂದು ತಿಳಿಸಿದಿರಿ. ದಯಮಾಡಿ ಅದರ ನಕಲು ಪ್ರತಿಯನ್ನು ಕಳುಹಿಸಲು ಆಗುವುದೇ?

- ವಿಜಯ್ ಅಂಗಡಿ, ಪ್ರಸಾರ ನಿರ್ವಾಹಕರು (ಕೃಷಿ), ಕೃಷಿರಂಗ ವಿಭಾಗ,
ಆಕಾಶವಾಣಿ, ಹಾಸನ - 573 201

ನಿಮ್ಮ ಪುಸ್ತಕ ಪರಿಚಯಿಸಲಾಗಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಪ್ರೊ. ಅನಿಲ್ ಗುಪ್ತಾರಿಂದ ದೊರಕಿಸಲು ಪ್ರಯತ್ನಿಸುತ್ತೇವೆ - ಸಂ.

ಪ್ರೊ. ಗುಪ್ತಾರ 6ನೆಯ ಶೋಧ ಯಾತ್ರೆ

ತಳಮಟ್ಟದ ಶೋಧಕರನ್ನು ಅವರ ಮನೇ ಬಾಗಿಲಲ್ಲೆ ಸತ್ಕರಿಸುವ ಘನ ಉದ್ದೇಶದ ಹನಿಬೀ ಸಂಪಾದಕ ಪ್ರೊ.ಗುಪ್ತಾರ 10 ದಿನಗಳ 6ನೇ ಶೋಧ ಯಾತ್ರೆ ಡಿಸೆಂಬರ್ 23ರಿಂದ ಜನವರಿ 1ರವರೆಗೆ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಿಂದ ಗುಜರಾತ್‌ನ ಡಂಗ ಜಿಲ್ಲೆಯ ವರೆಗೆ ಹಮ್ಮಿಕೊಳ್ಳಲಾಗಿತ್ತು. ಈ ಅವಧಿಯಲ್ಲಿ ಪ್ರೊ.ಗುಪ್ತಾರ ತಂಡ ಸುಮಾರು 130 ಕಿ.ಮಿ. ದೂರದ ನಡೆಗೆಯಲ್ಲಿ 41 ಗ್ರಾಮಗಳಿಗೆ ಭೇಟಿ ನೀಡುವಂತಾಗಿತ್ತು. ವರ್ಷಕ್ಕೆರಡು ಬಾರಿ; ಬೇಸಿಗೆ ಮತ್ತು ಚಳಿಗಾಲದಲ್ಲಿ ಪ್ರೊ.ಗುಪ್ತಾರು ಈ ಶೋಧ ಯಾತ್ರೆಯನ್ನು ನೆಡೆಸಲು ಉದ್ದೇಶಿಸಿದ್ದು ಮುಂದಿನ ಯಾತ್ರೆ ತಮಿಳ್ನಾಡು ಅಥವಾ ಕರ್ನಾಟಕದಲ್ಲಿ ನಡೆಸುವ ಸಾಧ್ಯತೆಯಿರುತ್ತದೆ.

ಪ್ರಶಸ್ತಿ ಪ್ರಧಾನ:

ದಿನಾಂಕ 18 ಸೆಪ್ಟೆಂಬರ್ 2000ದಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಕುರುವಳ್ಳಿಯಲ್ಲಿ ಸಾವಯವ ಕೃಷಿಕರಾದ ದಿವಂಗತ ಶ್ರೀ ಪುರುಷೋತ್ತಮ ರಾಯರ ಜ್ಞಾಪಕಾರ್ಥವಾಗಿ "ಸಾವಯವ ಕೃಷಿಕರ ಪುರುಷೋತ್ತಮ ಸನ್ಮಾನ" ಸಮಾರಂಭವನ್ನು ಏರ್ಪಡಿಸಲಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ದೇವರಾಯರಿಗೆ, ಭತ್ತದ ನಾಟಿ ತಳಿಗಳ ಬಿತ್ತನೆ ಬೀಜ ಸಂರಕ್ಷಣೆಗಾಗಿ ಪ್ರಶಸ್ತಿಯನ್ನು ನೀಡಲಾಯಿತು. ಈ ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಬೆಂಗಳೂರು ಗ್ರೀನ್ ಫೌಂಡೇಶನ್‌ನ ಶ್ರೀಮತಿ ವನಜಾರಾಮ ಪ್ರಸಾದ್ ಭಾಗವಹಿಸಿದ್ದರು.

ಹಾಸನದ ಪರಿಸರ ಪ್ರಿಯ ಕೃಷಿಕರ 36ನೇ ಸಮಾರಂಭ:

ಈ ಮೇಲಿನ ಸಮಾರಂಭ ಹಾಸನ ಘಟಕದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸಹಯೋಗದೊಂದಿಗೆ ಚನ್ನರಾಯಪಟ್ಟಣ ತಾಲೋಕಿನ ಸಂತೇಶಿವರದ ಬಿ.ಬಸವರಾಜ್ ತೋಟದಲ್ಲಿ 29-10-2000 ದಂದು ಜರುಗಿತು. ಬಸವರಾಜ್‌ರ ಸಾವಯವ ಬೇಸಾಯದ ಪರಿಚಯವಾದ ನಂತರ ನೆಡೆದ ಸಭೆಯಲ್ಲಿ ಸಾವಯವ ಕೃಷಿಕ ಶ್ರೀ ಎಲ್ ನಾರಾಯಣ ರೆಡ್ಡಿ ಮತ್ತು ಹಿತ್ತಲಗಿಡ ಸಂಪಾದಕ ಪ್ರಕಾಶ್ ಕಮ್ಮರಡಿ ಮಾತನಾಡಿದರು. ಹಾಸನದಲ್ಲಿ ಪರಿಸರ ಪ್ರಿಯ ಕೃಷಿಕರ ಸಂಘಟನೆಯ ರುವಾರಿ ಶ್ರೀ ವಿಜಯ್ ಅಂಗಡಿ ಕಾರ್ಯಕ್ರಮ ನೆಡೆಸಿಕೊಟ್ಟರು.

ಪರ್ಯಾಯ ಕೃಷಿ ಸಂವಹನಕ್ಕಾಗಿ "ಕಾಮ್" (CAAM)

ಸುದ್ದಿಮಾಧ್ಯಮದಲ್ಲಿ ಪರ್ಯಾಯ ಕೃಷಿಗಾಗಿ ಶ್ರಮಿಸುತ್ತಿರುವ ನಮ್ಮ ತರುಣ ಮಿತ್ರ ಶಿವರಾಮ ಪ್ರಲೂರರ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ರೈತ ಪರ ಮಾಧ್ಯಮ, ವ್ಯಕ್ತಿಗಳ ಮತ್ತು ಸಂಸ್ಥೆಗಳ ಧ್ವನಿ ಒಗ್ಗೂಡಿಸುವ ಮಹದಾಸೆಯ ಪ್ರಯತ್ನ "ಕಾಮ್" (Centre for Alternative Agriculture Media - CAAM) ಇತ್ತೀಚೆಗೆ ಧಾರವಾಡದಲ್ಲಿ ಉದ್ಘಾಟನೆಯಾಗಿರುತ್ತದೆ. ಈ ಸಭೆಯಲ್ಲಿ ಶ್ರೀ ಪಡ್ರೆ, ಡಾ.ಮುರಳೀಧರ್, ಅಡೂರ್ ಕೃಷ್ಣರಾವ್, ಭರಮಗೌಡರ್, ಸಂತೋಷ್ ಕೌಲಗಿ ಮುಂತಾದವರು ಭಾಗವಹಿಸಿದ್ದರು. ಈ ನಿಟ್ಟಿನಲ್ಲಿ ಆಸಕ್ತರು ಕಾಮ್ ವೆಬ್‌ಸೈಟ್ www.farmedia.org ಸಂಪರ್ಕಿಸಬಹುದು.

ಹೊನ್ನೇರು 2000

ಗ್ರೀನ್ ಪ್ರತಿಷ್ಠಾನ, ಬೆಂಗಳೂರು , ಹಿತ್ತಲಗಿಡ ಮತ್ತು ಸ್ವಾಮಿ ವಿವೇಕಾನಂದ ರೈತ ಸಮೂಹ ಹೇರಿಂದ್ಯಾಪನಹಳ್ಳಿ ಕನಕಪುರ ಇವರ ಸಂಯುಕ್ತ ಆಶ್ರಯದಲ್ಲಿ ಹೊನ್ನೇರು 2000 ಅಂದರೆ ಪರಂಪರಾಗತ ಜ್ಞಾನ ಮತ್ತು ಜೀವ ವೈವಿಧ್ಯ ಸಂರಕ್ಷಣಾ ಸ್ಪರ್ಧೆಯನ್ನು ಕನಕಪುರ ತಾಲ್ಲೂಕಿನ ಕೆಲವೊಂದು ಪ್ರೌಢಶಾಲಾ ವಿಧ್ಯಾರ್ಥಿಗಳಿಗಾಗಿ ಒಂದು ಪ್ರಬಂಧ ಸ್ಪರ್ಧೆಯ ರೂಪದಲ್ಲಿ ಏರ್ಪಡಿಸಲಾಗಿದೆ. ಈ ಸ್ಪರ್ಧೆಯ ಉದ್ದೇಶ ಹಳೆಯ ಕಾಲದ ಜ್ಞಾನ ಕೃಷಿ, ನಾಟೀವೈದ್ಯ ಜನಪರ ಸಂಸ್ಕೃತಿಯನ್ನು ಮಕ್ಕಳಿಂದ ದಾಖಲಿಸುವುದು ಮತ್ತು ಅದರ ಬಗ್ಗೆ ಅರಿವು ಮೂಡಿಸುವುದು. ಈ ಪ್ರಬಂಧ ಸ್ಪರ್ಧೆಯನ್ನು ಸಲ್ಲಿಸಲು ಜನವರಿ 10ನೇ ತಾರೀಖು ಕೊನೆಯ ದಿನಾಂಕವಾಗಿತ್ತು.

ಜೀವ ವೈವಿಧ್ಯ ಆಧಾರಿತ ಅನುಶೋಧನೆಗಳ ರಾಷ್ಟ್ರೀಯ ದಾಖಲು ಪಟ್ಟಿ ಸಿದ್ಧಗೊಳಿಸುವ ಕಾರ್ಯಗಾರ

ಪ್ರೊ.ಗುಪ್ತಾ ನೇತೃತ್ವದ NIF ಗೆ ಈ ಮೇಲಿನ ದಾಖಲು ಪಟ್ಟಿ (Register) ಸಿದ್ಧಗೊಳಿಸುವ ಜವಾಬ್ದಾರಿ ವಹಿಸಿದ್ದು ಈ ನಿಟ್ಟಿನಲ್ಲಿ ಒಂದು ಸೂಕ್ತ ಪ್ರಶ್ನಾವಳಿ ಸಿದ್ಧಪಡಿಸುವ ಅಂಗವಾಗಿ ಅಹಮಾದಾಬಾದಿನಲ್ಲಿ ತಾ. 10 ಡಿಸೆಂಬರ್ 2000 ದಂದು ಒಂದು ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಹನೀಬೀ ಬಳಗದ ಸದಸ್ಯರು, ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಪ್ರತಿನಿಧಿಗಳು ದೇಶದಾದ್ಯಂತ ಜೀವ ವೈವಿಧ್ಯ ಮತ್ತು ದೇಶೀಯ ತಂತ್ರಜ್ಞಾನಗಳ ಸಂರಕ್ಷಣೆ ಮೇಲೆ ಕೆಲಸ ಮಾಡುತ್ತಿರುವ ವಿಜ್ಞಾನಿಗಳು, ಸ್ವಯಂ ಸೇವಾಸಂಸ್ಥೆ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಪ್ರತಿನಿಧಿಗಳೂ ಭಾಗವಹಿಸಿದ್ದರು. ಹಿತ್ತಲಗಿಡದ ಪರವಾಗಿ ಸಂಪಾದಕ ಪ್ರಕಾಶ್ ಕಮ್ಮರಡಿ ಭಾಗವಹಿಸಿದ್ದರು. ಕಾರ್ಯಾಗಾರದ ಅಧ್ಯಕ್ಷತೆಯನ್ನು ಖ್ಯಾತ ಕೃಷಿ ವಿಜ್ಞಾನಿ ಡಾ. ಸ್ವಾಮಿನಾಥನ್ ವಹಿಸಿದ್ದು ಪ್ರೊ. ಅನಿಲ್ ಗುಪ್ತಾರವರು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಿಕೊಟ್ಟರು.

ಸುಸ್ಥಿರ ಕೃಷಿ ತರಬೇತಿ ಕಾರ್ಯಾಗಾರ

ಬೆಂಗಳೂರು ಮೂಲದ ಶ್ರೀಮತಿ ರೋಹಿಣಿ ರೆಡ್ಡಿ ನೇತೃತ್ವದ ದಕ್ಷಿಣ ಏಶಿಯಾ ಗ್ರಾಮೀಣ ಪುನರ್ ನಿರ್ಮಾಣಾ ಸಂಘಟನೆ (South Asia Rural Reconstruction Association - SARRA) ಭಾರತದ ವಿವಿಧ ಕಡೆಗಳಿಂದ ಬಂದಿದ್ದ ಸರ್ಕಾರಿ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ಸುಸ್ಥಿರ ಕೃಷಿ ತರಬೇತಿ ಕಾರ್ಯಾಗಾರವನ್ನು 2000ನೇ ಇಸವಿಯ ನವಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಹಿತ್ತಲಗಿಡ ಸಂಪಾದಕರು ಈ ಕಾರ್ಯಾಗಾರದಲ್ಲಿ ಸುಸ್ಥಿರ ಕೃಷಿ, ಸಾವಯವ ಕೃಷಿ ಮತ್ತು ದೇಶೀಯ ಕೃಷಿ ಪದ್ಧತಿ ಬಗ್ಗೆ ಪ್ರವಚನ ನೀಡಿರುತ್ತಾರೆ. ಈ ತರಬೇತಿ ಸಂಯೋಜನೆಯನ್ನು ಶ್ರೀಮತಿ ಶ್ಯಾಮಲಾ ಮೂರ್ತಿ ನಿರ್ವಹಿಸಿದ್ದರು.

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)
ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ
ರಾಷ್ಟ್ರೀಯ ಮಟ್ಟದ ದ್ವಿತೀಯ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (Department of Science and Technology) ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ನೇತೃತ್ವವನ್ನು ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ವಿಭಾಗದ (Department of Scientific and Industrial Research) ಕಾರ್ಯದರ್ಶಿಗಳಾದ ಡಾ. ಆರ್. ಎ. ಮಶೇಲ್ಕರ್‌ರವರು ವಹಿಸಿಕೊಂಡಿರುತ್ತಾರೆ. ಈ ಪ್ರತಿಷ್ಠಾನವು ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುತ್ತದೆ. ಈ ಪ್ರತಿಷ್ಠಾನದ ಮೂಲ ಉದ್ದೇಶ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು (Intellectual Property Rights) ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪು-ರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 50,000 ಮೊದಲ ಬಹುಮಾನ, ರೂಪಾಯಿ 25,000 ಹಾಗೂ ರೂಪಾಯಿ 10,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 1,000ದ ಐನೂರಕ್ಕೂ ಹೆಚ್ಚು ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದವರಿಗೂ ಅಷ್ಟೇ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿಯಲ್ಲಿ ಪ್ರಮುಖ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಸಾಮಾನ್ಯ ಜನಸಮುದಾಯ, ತಮ್ಮ ಕೃಷಿ ಕಸುಬು ಪರಿಸರ, ಜೀವ ವೈವಿಧ್ಯತೆ ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಮನೆಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಬಹದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ತ, ಫೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ದ್ವಿತೀಯ ವಾರ್ಷಿಕ ಸ್ಪರ್ಧೆಗೆ ಪ್ರವೇಶ ಕಳುಹಿಸಲು ಸೆಪ್ಟೆಂಬರ್ ೨೦೦೧ರವರೆಗೆ ಅವಕಾಶವಿದೆ.

ಪ್ರವೇಶ ಪತ್ರ ಕಳುಹಿಸಬೇಕಾದ ವಿಳಾಸ:

Prof. Anil K. Gupta, Executive Vice Chairperson, National Innovation Foundation and Professor, Indian Institute of Management, Ahmedabad - 380 015, Gujarat, e-mail: anil@nifindia.org

or

National Co-ordinator, National Innovation Foundation, P O Box 1505, Ahmedabad - 380 015, Gujarat, e-main: campaign@nifindia. org

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:

ಡಾ: ಟಿ.ಎನ್. ಪ್ರಕಾಶ್ ಕಮ್ಮರಡಿ, ಸಹ ಪ್ರಾಧ್ಯಾಪಕ ಮತ್ತು ಸಂಪಾದಕ 'ಹಿತ್ತಲಗಿಡ', ಅರ್ಥಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ., ಬೆಂಗಳೂರು–೫೬೦ ೦೬೫
ದೂರವಾಣಿ: 3637002 (O), 8560267 (R)

(ಎಂತಹ ಶೋಧನೆಗಳನ್ನು ಕಳುಹಿಸಬಹುದು ಎನ್ನುವ ಉದಾಹರಣಾ ಮಾಹಿತಿಗಾಗಿ ಹಳೆಯ 'ಹಿತ್ತಲಗಿಡ' ಪುಸ್ತಕಗಳನ್ನು ನೋಡಬಹುದು)

ರಾಷ್ಟ್ರೀಯ ಸ್ಪರ್ಧೆಯ ಸಂಚಾಲಕರು

ಕರ್ನಾಟಕದಿಂದ - ಹಿತ್ತಲಗಿಡ ಬಳಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, Honey Bee Network, Indian Institute of Management, Ahmedabad

ಮಲೆನಾಡ ಹಿತ್ತಲುಗಳಲ್ಲಿ ಬೆಳೆಸುತ್ತಿರುವ ವಿಶಿಷ್ಟ ನಾಟಿ ತಳಿಗಳ ಹುಡುಕಾಟದ ಸ್ಪರ್ಧೆ

ಮಲೆನಾಡಿನ ಕೊಪ್ಪ ಮತ್ತು ತೀರ್ಥ ಹಳ್ಳಿ ಪ್ರಾಂತ್ಯದ ಹಿತ್ತಲುಗಳಲ್ಲಿ ವಿಶಿಷ್ಟರೀತಿಯ ನಾಟಿ ತರಕಾರಿ, ಹೂವು, ಹಣ್ಣು, ಔಷಧಿ ಸಸ್ಯಗಳನ್ನು ಬೆಳೆಸುತ್ತಿರಬಹುದು. ಅಂತಹ ತಳಿಗಳ ಹುಡುಕಾಟದ ಸ್ಪರ್ಧೆಯೊಂದನ್ನು 'ಹಿತ್ತಲಗಿಡ' ಪತ್ರಿಕೆ ಕಮ್ಮರಡಿ ಗ್ರಾಮದ ಸುತ್ತಮುತ್ತಲಿನ ಎಂಟು ಶಾಲೆಗಳಿಗೆ ಏರ್ಪಡಿಸಿರುತ್ತದೆ. ಈ ನಾಟಿ ತಳಿಗಳ ಬೀಜಗಳನ್ನು ಹುಡುಕಿ ತಂದು ಕೊಡುವವರಿಗೆ ವಿಜ್ಞಾನ, ಕಲೆ, ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳ ಬಹುಮಾನ ನೀಡಲಾಗುವುದು.

ಬಹುಮಾನಗಳ ವಿವರ

ಮೊದಲನೇ ಬಹುಮಾನ	-	ರೂ. 1000 ಮೌಲ್ಯದ ಪುಸ್ತಕ
ಎರಡನೇ ಬಹುಮಾನ	-	ರೂ. 750 ಮೌಲ್ಯದ ಪುಸ್ತಕ
ಮೂರನೇ ಬಹುಮಾನ	-	ರೂ. 500 ಮೌಲ್ಯದ ಪುಸ್ತಕ
ಹತ್ತು ಪ್ರೋತ್ಸಾಹಕ ಬಹುಮಾನಗಳು	-	ರೂ. 100 ಮೌಲ್ಯದ ಪುಸ್ತಕ

ಜೊತೆಗೆ ಅತ್ಯಧಿಕ ನಾಟಿತಳಿಗಳನ್ನು ಹುಡುಕಿಕೊಟ್ಟ ಶಾಲೆಗೆ ಒಂದು ಪಾರಿತೋಷಕ ಬಹುಮಾನ ಮತ್ತು ಸಹಕರಿಸಿದ ಅಧ್ಯಾಪಕರುಗಳಿಗೆ ಕೃತಜ್ಞತಾ ಬಹುಮಾನಗಳು ಇವೆ. ನಾಟಿ ತಳಿಗಳ ಕೆಲ ಬೀಜಗಳನ್ನು ಒಂದೊಂದು ಕವರಿನಲ್ಲಿ ಹಾಕಿ ಅದರ ಮೇಲೆ ವಿದ್ಯಾರ್ಥಿಯ ಹೆಸರು, ಯಾರ ಮನೆಯಿಂದ ತಂದಿದ್ದು, ಅದರ ಹೆಸರು, ಗುಣ ವಿಶೇಷಗಳೇನು, ಅದನ್ನು ಎಷ್ಟು ಸಮಯದಿಂದ ಬೆಳೆಯುತ್ತಿರುವರು ಇತ್ಯಾದಿ ವಿವರಗಳನ್ನು ಸ್ಪಷ್ಟವಾಗಿ ಬರೆದು ಈ ಕೆಳಗಿನ ಅಧ್ಯಾಪಕರಿಗೆ ತಲುಪಿಸ ತಕ್ಕದ್ದು. ಸ್ಪರ್ಧೆಯಲ್ಲಿ ವಿಜೇತರಾದವರನ್ನು ಮುಂದೆ ಒಂದು ವಿಶೇಷ ಸಭೆಯಲ್ಲಿ, ಕಮ್ಮರಡಿಯಲ್ಲೇ ಬಹುಮಾನ ನೀಡಿ ಸತ್ಕರಿಸಲಾಗುವುದು.

ಸ್ಪರ್ಧೆಯ ಕೊನೆಯ ದಿನಾಂಖ 28ನೇ ಫೆಬ್ರವರಿ 2001.

ವಿ.ಸೂ.: ನಾಟೀ ತಳಿಗಳಿಗೆ ಮಾತ್ರ, ಪೇಟೆಯಿಂದ ತಂದ ಹೈಬ್ರಿಡ್ ತಳಿಗಳಿಗೆ ಸ್ಪರ್ಧೆಗೆ ಅವಕಾಶ ಇಲ್ಲ.

ಕ್ರ.ಸ.	ಶಾಲೆಯ ಹೆಸರು	ಊರು, ತಾಲ್ಲೋಕು	ಅಧ್ಯಾಪಕರು
1.	ವಿಶ್ವ ತೀರ್ಥ ಬಾಲಿಕಾ ಪ್ರೌಢಶಾಲೆ	ಕಮ್ಮರಡಿ, ಕೊಪ್ಪ	ಶ್ರೀ. ಬಿ.ಆರ್. ಬಾಲಕೃಷ್ಣ
2.	ಸರ್ಕಾರಿ ಪ್ರೌಢಶಾಲೆ	ಕಡ್ತೂರು, ತೀರ್ಥಹಳ್ಳಿ	ಶ್ರೀ. ಎಂ.ಎನ್. ಜಯಣ್ಣಗೌಡ
3.	ಸರ್ಕಾರಿ ಪದವಿ ಪೂರ್ವ ಕಾಲೇಜು	ಕಮ್ಮರಡಿ, ಕೊಪ್ಪ	ಶ್ರೀ. ಎನ್.ವಿ. ರವಿ
4.	ಸರ್ಕಾರಿ ಹಿರಿಯ ಪ್ರೌಢಶಾಲೆ	ಕಮ್ಮರಡಿ, ಕೊಪ್ಪ	ಶ್ರೀಮತಿ. ಹೆಚ್.ಎಸ್. ಭಾಗ್ಯಲಕ್ಷ್ಮಿ ಮತ್ತು ಎಸ್.ಟಿ.ರಾಘವೇಂದ್ರ
5.	ಸರ್ಕಾರಿ ಪ್ರೌಢಶಾಲೆ	ಕೋಡ್ಲು, ತೀರ್ಥಹಳ್ಳಿ	ಶ್ರೀ. ಹೆಚ್.ಪಿ. ಸುರೇಶ್
6.	ಸರ್ಕಾರಿ ಪ್ರೌಢಶಾಲೆ	ರಾಮಕೃಷ್ಣಪುರ, ತೀರ್ಥಹಳ್ಳಿ	ಶ್ರೀಮತಿ. ಗಾಯತ್ರಿ ದೇವಿ
7.	ಶ್ರೀ ದುರ್ಗಾ ಪರಮೇಶ್ವರಿ ಪ್ರೌಢಶಾಲೆ	ಭಂಡಿಗಡಿ, ಕೊಪ್ಪ	ಶ್ರೀ. ಹೆಚ್.ಎಂ. ಸುರೇಂದ್ರ
8.	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ	ಕಮ್ಮರಡಿ, ಕೊಪ್ಪ	ಶ್ರೀ. ಕೆ.ಆರ್. ರೇವಯ್ಯ

ಈ ಸ್ಪರ್ಧೆಯ ಮೂಲಕ ವಿದ್ಯಾರ್ಥಿಗಳಲ್ಲಿ ಜೀವ ವೈವಿಧ್ಯದ ಬಗ್ಗೆ ಅರಿವು ಆಸಕ್ತಿ ಮೂಡಿಸುವುದು ಮೊದಲ ಉದ್ದೇಶವಾಗಿರುತ್ತದೆ. ನಂತರ ಕಮ್ಮರಡಿ ಸುತ್ತ ಮುತ್ತಲಿನ ನೂರು ಆಸಕ್ತ ಮಹಿಳೆಯರನ್ನು ಪ್ರೋತ್ಸಾಹಿಸಿ ಅವರವರ ಹಿತ್ತಲುಗಳಲ್ಲೇ ಕೆಲವು ವಿಶಿಷ್ಠ ತಳಿಗಳನ್ನು ಬೆಳೆಸುವಂತೆ ಮಾಡಲಾಗುವುದು. ಇಲ್ಲೂ ಕೂಡ ಇಷ್ಟೇ ಆಕರ್ಷಕ ಬಹುಮಾನ, ಪ್ರಶಸ್ತಿ ನೀಡಲಾಗುವುದು. ಒಟ್ಟಾರೆ, ಸ್ವಾವಲಂಬನೆಯ ಸಂಕೇತವಾದ ಈ ಹಿತ್ತಲುಗಳ ಬಗ್ಗೆ ಜನರಲ್ಲಿ ಅರಿವು, ಆಸಕ್ತಿ ಏರ್ಪಡಿಸಿ ಆ ಮೂಲಕ ಮಲೆನಾಡ ಪ್ರಾಂತ್ಯದಲ್ಲಿ ಹಿತ್ತಲಿನ ಉತ್ಪನ್ನಗಳಾದ ತರಕಾರಿ, ಹಣ್ಣು, ಹೂ, ಔಷಧಿಗಳ ವಿಚಾರದಲ್ಲಿ ಜನರು ಸ್ವಾವಲಂಬನೆಯಾಗುವಂತೆ ಪ್ರಯತ್ನಿಸುವುದು ಈ ಸ್ಪರ್ಧೆಯ ಅಂತಿಮ ಉದ್ದೇಶ.

ಮುಖ್ಯ ಸಂಯೋಜಕರು:
ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ
ಸಹ ಅಧ್ಯಾಪಕರು ಮತ್ತು ಸಂಪಾದಕರು 'ಹಿತ್ತಲಗಿಡ'
ಅರ್ಥ ಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560 065
ದೂರವಾಣಿ : 080-3637002 (O), 8560267 (R)

ಸ್ಥಳೀಯ ಸಂಯೋಜಕರು:
ಶ್ರೀ. ಎನ್.ಟಿ. ಸುರೇಶ್
ಮುಖ್ಯೋಪಾಧ್ಯಾಯರು, ವಿಶ್ವ ತೀರ್ಥ ಬಾಲಿಕಾ ಪ್ರೌಢಶಾಲೆ,
ಕಮ್ಮರಡಿ - 577 125, ತೀರ್ಥಹಳ್ಳಿ (ತಾ)
ದೂರವಾಣಿ : 08265 - 32236(O), 32242(R)

ಪತ್ರಿಕೆ ನೊಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳು ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.40/-	ರೂ.400/-
ರೈತರು	ರೂ.50/-	ರೂ.500/-
ಇತರರು	ರೂ.60/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ.: ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ತೆರೆದ ಅಂಚೆ

ಗೆ, ...

....

....

....

ವಿಳಾಸ

ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ

ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ ಹಿತ್ತಲಗಿಡ

ಕೃಷಿ ಅರ್ಥಶಾಸ್ತ್ರ ವಿಭಾಗ

ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ.

ಬೆಂಗಳೂರು - 560 065

Ph: 080-3637002, 8560267 (R)

email: hittalu@bgl.vsnl.net.in and prakashtnk@yahoo.com

Printed by Sri. S. Sridhar, Published by Smt. K. Meenakshi (Owner). Printed at "Navbharath Enterprises" No.10, Sirur Park `B' Street, Sheshadripuram, Bangalore - 560 020 and Published at No.399, 14-B Cross, New Town Yelahanka, Bangalore - 560 064.

Edited by Dr. T.N. Prakash Kammaradi